ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜುಲೈ 30 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 105 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೆಆರ್‌ಎಸ್, ಕಬಿನಿ ಜಲಾಶಯಗಳಿಗೆ ಸಿಎಂ ಸಿದ್ದರಾಮಯ್ಯ ಬಾಗಿನ

ಅವರಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಾಥ್

ಮೈಸೂರು, ಜು. 29(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಕೃಷ್ಣರಾಜ ಸಾಗರ ಜಲಾಶಯದಲ್ಲಿ ಕಾವೇರಿ ಮಾತೆಗೆ ಹಾಗೂ ಕಬಿನಿ ಜಲಾಶಯಕ್ಕೆ ಇಂದು ಸಾಂಪ್ರದಾಯಿಕ ಬಾಗಿನ ಸಮರ್ಪಿಸಿದರು. ಜಲಸಂಪನ್ಮೂಲ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸಾಥ್ ನೀಡಿದರು.

ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾದ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಬಾಗಿನ ಸಮರ್ಪಿಸುವ ಧಾರ್ಮಿಕ ಕೈಂಕರ್ಯ ನಿಗದಿಯಾಗಿತ್ತಾದರೂ, ಮಧ್ಯಾಹ್ನ 12.15 ಗಂಟೆಗೆ ಮೊರದಲ್ಲಿ ಸೀರೆ, ರವಿಕೆ ಬಟ್ಟೆ, ಬಳೆ, ಹೂ, ಅರಿಶಿನ–ಕುಂಕುಮ ಒಳಗೊಂಡ ಬಾಗಿನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಭಕ್ತಿಭಾವದಿಂದ ಕಾವೇರಿ ಮಾತೆಗೆ ಬಾಗಿನ ಅರ್ಪಿಸಿದರು. ಇದೇ ವೇಳೆ ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಹ ಬಾಗಿನ ಸಮರ್ಪಿಸಿದರು. ಧಾರ್ಮಿಕ ಮುಖಂಡರಾದ ಭಾನುಪ್ರಕಾಶ್ ಶರ್ಮಾ ಈ ಧಾರ್ಮಿಕ ವಿಧಿ–ವಿಧಾನಗಳ ನೆರವೇರಿಸಿದರು. ನಂತರ ಡಿ.ಕೆ. ಶಿವಕುಮಾರ್ ಅಣೆಕಟ್ಟೆಯ ಕಾವೇರಿ ಮಾತೆಗೆ ವಿಶೇಷ ಪೂಜೆ ನೆರವೇರಿಸಿದರು. ಆ ವೇಳೆ ಸಿದ್ದರಾಮಯ್ಯ ವಿದ್ಯುತ್ ಚಾಲಿತ ವಾಹನದಲ್ಲಿ ಬೃಂದಾವನದ ಪಕ್ಕದಲ್ಲೇ ಆಯೋಜಿಸಿದ್ದ ವೇದಿಕೆ ಕಾರ್ಯಕ್ರಮಕ್ಕೆ ಆಗಮಿಸಿದಾಗ ಉಪಮುಖ್ಯಮಂತ್ರಿಗಳೂ ಭಾಗಿಯಾದರು. ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚೆಲುವರಾಯಸ್ವಾಮಿ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ಸಚಿವ ಕೆ.ವೆಂಕಟೇಶ್, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ತನ್ವೀರ್ ಸೇಟ್, ಗಣಿಗ ರವಿಕುಮಾರ್, ಎ.ಆರ್.ಕೃಷ್ಣಮೂರ್ತಿ, ಕದಲೂರು ಉದಯ್, ದರ್ಶನ್ ಪುಟ್ಟಣ್ಣಯ್ಯ, ಡಿ. ರವಿಶಂಕರ್, ವಿಧಾನಪರಿಷತ್ ಸದಸ್ಯರಾದ ದಿನೇಶ್ ಗೂಳೀಗೌಡ, ಮಧು ಜಿ.ಮಾದೇಗೌಡ, ಮುಡಾ ಅಧ್ಯಕ್ಷ ಕೆ. ಮರೀಗೌಡ, ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ಸೇರಿದಂತೆ ಹಲವು ಜನಪ್ರತಿನಿಧಿಗಳು, ■9ನೇ ಪುಟಕ್ಕೆ





ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಕೃಷ್ಣರಾಜಸಾಗರ ಜಲಾಶಯದಲ್ಲಿ ಕಾವೇರಿ ಮಾತೆಗೆ ಹಾಗೂ ಕಬಿನಿ ಜಲಾಶಯಕ್ಕೆ ಸಾಂಪ್ರದಾಯಿಕ ಬಾಗಿನ ಸಮರ್ಪಿಸಿದರು. ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಚೆಲುವರಾಯಸ್ವಾಮಿ, ಡಾ.ಹೆಚ್.ಸಿ.ಮಹದೇವಪ್ಪ, ಶಾಸಕ ತನ್ವೀರ್ ಸೇಠ್ ಇನ್ನಿತರರಿದ್ದಾರೆ.

ಕುಮಾರಸ್ವಾಮಿ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು
- ಬಿಜೆಪಿಯವರ ಆರೋಪ ಬರೀ ರಾಜಕೀಯ ಪ್ರೇರಿತ

ಕೆಆರ್‌ಎಸ್, ಜು.29– ರಾಜ್ಯ ಸರ್ಕಾರದ ಮಹತ್ವದ ಮೇಕೆದಾಟು ಯೋಜನೆಗೆ ಕೇಂದ್ರದಿಂದ ಅನುಮತಿ ಸಿಕ್ಕರೆ ಕಾವೇರಿ ವಿವಾದವನ್ನು ಬಗೆಹರಿಸಬಹುದು. ಈ ಯೋಜನೆಯಿಂದ ಕರ್ನಾಟಕಕ್ಕಿಂತ ತಮಿಳುನಾಡಿಗೇ ಹೆಚ್ಚು ಲಾಭವಾಗಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಮೇಕೆದಾಟು ಯೋಜನೆಗೆ ಅನುಮತಿ ಕೊಡಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಮಂಡ್ಯ ಲೋಕಸಭಾ ಕ್ಷೇತ್ರದ ಸಂಸದ ಹೆಚ್.ಡಿ. ಕುಮಾರಸ್ವಾಮಿ ಅನುಮತಿ ಕೊಡಿಸಲು ಗಲಾಟೆ ಮಾಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದರು. ಸೋಮವಾರ ಜಿಲ್ಲೆಯ ಕೆಆರ್‌ಎಸ್‌ಗೆ ಬಾಗಿನ ಅರ್ಪಿಸಿ, ಬಳಿಕ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೇಕೆದಾಟು ಯೋಜನೆಗೆ ನಾವು ಮಂಜೂರಾತಿ ಕೊಡಿ ಎಂದು ಹಲವು ಬಾರಿ ಮನವಿ ಮಾಡಿದ್ದೇವೆ. ಇದರಿಂದ ನಮಗೆ 65 ಟಿಎಂಸಿ ನೀರನ್ನು ಹಿಡಿದಿಡಲು ಸಾಧ್ಯವಾಗುತ್ತದೆ. ಅಲ್ಲದೆ ವಿದ್ಯುತ್ ಉತ್ಪಾದನೆ ಮಾಡಿ, ಬೆಂಗಳೂರಿಗೆ ಕುಡಿಯುವ ನೀರು ಕೊಡಲು ಸಾಧ್ಯವಾಗುತ್ತದೆ. 65 ಟಿಎಂಸಿ ನೀರನ್ನು ಹಿಡಿದಿಡುವುದರಿಂದ ಮಳೆ ಕೊರತೆಯಾಗಿ ಜಲಾಶಯ ತುಂಬದಿದ್ದಾಗ ತಮಿಳುನಾಡಿಗೆ ನೀರು ಕೊಡಬಹುದು. ಹೀಗಾಗಿ ಮೇಕೆದಾಟು ಯೋಜನೆಗೆ ಕೇಂದ್ರ ಅವಕಾಶ ನೀಡಬೇಕು ಎಂದರು.

ರಾಜಕೀಯ ಕ್ಯಾತೆ: ಸುಪ್ರಿಂಕೋರ್ಟ್ ಕರ್ನಾಟಕದಲ್ಲಿ ಸಾಮಾನ್ಯ ಮಳೆಯಾದಾಗ ತಮಿಳುನಾಡಿಗೆ ಇಂತಿಷ್ಟು ನೀರು ಬಿಡುವಂತೆ ಹೇಳಿದೆ. ಆದರೆ ಸಂಕಷ್ಟ ವರ್ಷದಲ್ಲಿ ನೀರು ಬಿಡಲು ಆಗಲ್ಲ. ■6ನೇ ಪುಟಕ್ಕೆ

ಪ್ರವಾಸೋದ್ಯಮ ಅಭಿವೃದ್ಧಿಗೆ ಬೃಂದಾವನಕ್ಕೆ ಹೊಸರೂಪ

ಪ್ರತಿವಾರ ಕಾವೇರಿಗೆ ಆರತಿ: ಡಿಸಿಎಂ ಡಿ.ಕೆ.ಶಿವಕುಮಾರ್

- ಕನ್ನಂಬಾಡಿ ಕಟ್ಟೆ ನಮ್ಮೆಲ್ಲರ ಅನ್ನದ ತಟ್ಟೆ
- ನೀರುಗಂಟಿ, ಪ್ರಗತಿಪರ ರೈತ, ಇಂಜಿನಿಯರ್‌ಗೆ ಪ್ರಶಸ್ತಿ

ಕೆಆರ್‌ಎಸ್,ಜು.29–ಕೃಷ್ಣರಾಜ ಸಾಗರ ಅಣೆಕಟ್ಟೆ ಮತ್ತು ಬೃಂದಾವನವನ್ನು ಮೈಸೂರು ಮಹಾರಾಜರು ಅದ್ಭುತವಾಗಿ ನಿರ್ಮಾಣ ಮಾಡಿದ್ದರು. ಗುಂಡೂರಾವ್ ಅವರು ಇದಕ್ಕೆ ಹೊಸರೂಪ ನೀಡಿದರು. ಪ್ರವಾಸೋದ್ಯಮವನ್ನು ಗುರಿಯಾಗಿಟ್ಟುಕೊಂಡು ಪಿಪಿಪಿ ಮಾದರಿಯಲ್ಲಿ ಹೊಸ ರೂಪ ನೀಡಲು ನಮ್ಮ ಸರ್ಕಾರ ಹೊರಟಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಸೋಮವಾರ ಕೆಆರ್‌ಎಸ್‌ಗೆ ಬಾಗಿನ ಅರ್ಪಿಸಿ, ಬಳಿಕ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗಂಗಾ ಆರತಿಗಿಂತ ಮಿಗಿಲಾಗಿ ಪ್ರತಿವಾರ ಕಾವೇರಿ ಆರತಿ ಮಾಡಲಾಗುವುದು. ಈ ಕಾರ್ಯಕ್ರಮವನ್ನು ಆದಷ್ಟು ಬೇಗ ಪ್ರಾರಂಭ ಮಾಡಲಾಗುವುದು. ಈಗಾಗಲೇ ಚೆಲುವರಾಯಸ್ವಾಮಿ ಅವರ ನೇತೃತ್ವದಲ್ಲಿ ಕಾವೇರಿ ಜಲಾನಯನದ ಪ್ರದೇಶದ ಶಾಸಕರ ಹಾಗೂ ಸಂಬಂಧಪಟ್ಟ ಇಲಾಖೆಗಳನ್ನು ಸೇರಿಸಿ ಸಮಿತಿ ರಚಿಸಲಾಗಿದೆ ಎಂದರು. ಬೃಂದಾವನಕ್ಕೆ ಹೊಸ ರೂಪ ನೀಡುವ ಮೊದಲು ನಮ್ಮ ಜೊತೆ ಚರ್ಚೆ ನಡೆಸಿ ಎಂದು ರೈತರು ಹೇಳಿದ್ದಾರೆ. ಯಾವುದೇ ಮುಚ್ಚುಮರೆಯಿಲ್ಲದೇ ಕೆಆರ್‌ಎಸ್ ಅಭಿವೃದ್ಧಿ ಮಾಡಲಾಗುವುದು ಹಾಗೂ ರೈತರ ಜೊತೆ ಚರ್ಚೆ ನಡೆಸಲಾಗುವುದು. ■5ನೇ ಪುಟಕ್ಕೆ

ಬೆಂಗಳೂರು–ಮೈಸೂರು ಪಾದಯಾತ್ರೆಗೆ ಅವಕಾಶವಿಲ್ಲ: ಡಾ.ಜಿ.ಪರಮೇಶ್ವರ್
ನಾವು ಪಾದಯಾತ್ರೆ ಮಾಡಿಯೇ ತೀರುತ್ತೇವೆ: ಬಿಜೆಪಿ

ಸಂಘರ್ಷಕ್ಕೀಡು ಮಾಡಿರುವ ಉಭಯ ಪಕ್ಷಗಳ ಪಟ್ಟು–ಪ್ರತಿಪಟ್ಟು



ಡಾ.ಜಿ.ಪರಮೇಶ್ವರ್

ಬೆಂಗಳೂರು: ಕಾಂಗ್ರೆಸ್ ಸರ್ಕಾರದ ವಿರುದ್ಧ ಎನ್‌ಡಿಎ ಮೈತ್ರಿಕೂಟ ನಡೆಸುತ್ತಿರುವ ಬೆಂಗಳೂರು–ಮೈಸೂರು ಪಾದಯಾತ್ರೆಗೆ ಅವಕಾಶವಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಪ್ರಕಟಿಸಿದ್ದಾರೆ.

ಇಂತಹ ಗೊಡ್ಡು ಬೆದರಿಕೆಗೆ ನಮ್ಮ ಕಾರ್ಯಕರ್ತರು ಬಗ್ಗುವುದಿಲ್ಲ. ಪಾದಯಾತ್ರೆ ನಡೆಸಿಯೇ ತೀರುತ್ತೇವೆ ಎಂದು ಬಿಜೆಪಿ ಘೋಷಣೆ ಮಾಡಿದೆ. ಉದ್ದೇಶಿತ ಪಾದಯಾತ್ರೆ, ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಘರ್ಷಣೆ ಹಾದಿ ಹಿಡಿದಿದ್ದು, ಇಬ್ಬರು ತಮ್ಮ ನಿಲುವಿಗೆ ಬದ್ಧರಾಗಿದ್ದಾರೆ. ಗೃಹ ಸಚಿವರು ಹೇಳಿಕೆ ನೀಡಿದ ಬೆನ್ನಲ್ಲೇ ಅರಮನೆ ಆವರಣದಲ್ಲಿ ಬಿಜೆಪಿ ಶಾಸಕರು, ಮುಖಂಡರು ಸಭೆ ಸೇರಿ ಆಗಸ್ಟ್ 3ರಿಂದ ಒಂದು ವಾರ ಕಾಲ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಮಾಡುವ ತೀರ್ಮಾನ ಕೈಗೊಂಡಿದ್ದಾರೆ.

ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ಜನತೆಗೆ ತಿಳಿಸಲು ನಮಗೆ ಯಾವುದೇ ಅನುಮತಿ ಅಗತ್ಯವಿಲ್ಲ ಎಂದು ಬಿಜೆಪಿ ಹೇಳಿದರೆ, ಗೃಹ ಸಚಿವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅನಗತ್ಯ ಆರೋಪ ಮಾಡಿ ರಾಜ್ಯದ ಜನರಿಗೆ ತಪ್ಪು ಸಂದೇಶ ನೀಡಲು ಬಿಜೆಪಿ ಹೊರಟಿದ್ದು, ಅದಕ್ಕೆ ಅವಕಾಶವಿಲ್ಲ ಎಂದಿದ್ದಾರೆ. ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವರು, ಕಾಂಗ್ರೆಸ್ ಈ ಹಿಂದೆ ನಡೆಸಿದ ಪಾದಯಾತ್ರೆಯಲ್ಲಿ ನಿಜಾಂಶವಿತ್ತು ರಾಜ್ಯದ ಸಂಪತ್ತು ಉಳಿಸುವ ಸದುದ್ದೇಶದಿಂದ ಪಾದಯಾತ್ರೆ ಮಾಡಿತ್ತು.

ಇದು ಕಾನೂನುಬಾಹಿರ ಪಾದಯಾತ್ರೆ: ಆದರೆ ಈಗ ಬಿಜೆಪಿಯವರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅನಗತ್ಯ ಆರೋಪಗಳನ್ನು ಮಾಡಿ ಪಾದಯಾತ್ರೆ ಮಾಡಲು ಹೊರಟಿದ್ದಾರೆ. ಯಾವುದೇ ರೀತಿ ಕಾನೂನುಬಾಹಿರವಾಗಿ ನಡೆಯದೇ ಇರುವ ಪ್ರಕರಣವನ್ನು ಜನರಿಗೆ ಪಾದಯಾತ್ರೆ ಮೂಲಕ ತಪ್ಪು ಮಾಹಿತಿ ಕೊಡಲು ಪ್ರಯತ್ನಿಸುತ್ತಿದ್ದಾರೆ. ಇಂತಹ ಯಾತ್ರೆಗೆ ಅನುಮತಿ ನೀಡುವ ಅವಶ್ಯಕತೆ ಇಲ್ಲ. ಹಿಂದೆ ಬಿಜೆಪಿ ಆಡಳಿತದಲ್ಲಿ ■9ನೇ ಪುಟಕ್ಕೆ



ಬಿ.ವೈ.ವಿಜಯೇಂದ್ರ

ರಾಜಕೀಯದಲ್ಲಿ ಎಲ್ಲರೂ ಅವರವರ ಮಕ್ಕಳ ಬೆಳೆಸಿದ್ರೆ ಕಂಡವರ ಮಕ್ಕಳ ಬೆಳೆಸೋರ‍್ಯಾರು?

- ಕುಟುಂಬ ರಾಜಕಾರಣದ ಬಗ್ಗೆ ಮಾಜಿ ಸಂಸದ ಪ್ರತಾಪ ಸಿಂಹ ಕಿಡಿನುಡಿ
- ದೇವರಾಜ ಅರಸು ಕಂಡವರ ಮಕ್ಕಳ ಬೆಳೆಸಿ ದೇವರಾದ್ರು; ಆದ್ರೆ ಸಿದ್ದರಾಮಯ್ಯ, ಯಡಿಯೂರಪ್ಪ, ಮಲ್ಲಿಕಾರ್ಜುನ ಖರ್ಗೆ, ಕುಮಾರಸ್ವಾಮಿ ಹೀಗೆ ಎಲ್ರಿಗೂ ಅವರವರ ಮಕ್ಕಳದ್ದೇ ಚಿಂತೆ
- ನಾನು ಮತ್ತೆ ಬರೆಯಲು ಮುಂದಾದ್ರೆ ಮೊದಲು ಬಿಜೆಪಿಯನ್ನೇ ತೊಳೀತೀನಿ!

ಬೆಂಗಳೂರು: ಎಲ್ಲರಿಗೂ ಅವರವರ ಮಕ್ಕಳದ್ದೇ ಚಿಂತೆಯಾದರೆ, ಕಂಡವರ ಮಕ್ಕಳನ್ನು ಬೆಳೆಸುವವರು ಯಾರು? ಹೀಗೆ ಪ್ರಶ್ನಿಸುವ ಮೂಲಕ ಮಾಜಿ ಸಂಸದ ಪ್ರತಾಪ್ ಸಿಂಹ, ಕರ್ನಾಟಕದಲ್ಲಿ ಕುಟುಂಬ ರಾಜಕಾರಣ, ಅಡ್ಜಸ್ಟ್‌ಮೆಂಟ್(ಹೊಂದಾಣಿಕೆ) ಹಾಗೂ ನೆಪೋಟಿಸಂ(ಸ್ವಜನ ಪಕ್ಷಪಾತ) ವಿರುದ್ಧ ಕಿಡಿಕಾರಿದ್ದಾರೆ.

ಕಳೆದ ಶನಿವಾರ ಬೆಂಗಳೂರಿನಲ್ಲಿ ನಡೆದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಕಂಡವರ ಮಕ್ಕಳನ್ನು ಬೆಳೆಸಿ ದೇವರಾದ್ರು. ಆದರೆ ಈಗಿನವರಿಗೆ ತಮ್ಮ ಮಕ್ಕಳದ್ದೇ ಚಿಂತೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಸಿಎಂ ಯಡಿಯೂರಪ್ಪ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸಚಿವ ಕುಮಾರಸ್ವಾಮಿ ಹೀಗೆ, ಎಲ್ಲರಿಗೂ ತಮ್ಮ ಮಕ್ಕಳದ್ದೇ ಚಿಂತೆಯಾದ್ರೆ ಕಂಡೋರ ಮಕ್ಕಳು, ಪಾಪದವರ ಮಕ್ಕಳ ಬೆಳೆಸೋರ‍್ಯಾರು? ಎಂದು ಪ್ರಶ್ನಿಸಿದ್ದಾರೆ.

ಸಿದ್ದರಾಮಯ್ಯ, ಹೆಚ್.ಡಿ.ದೇವೇಗೌಡ್ರು, ಹೆಚ್.ಸಿ.ಮಹದೇವಪ್ಪ, ಯಡಿಯೂರಪ್ಪ ಸಾಹೇಬರು ನೆಲದಿಂದ ಬೆಳೆದು ಬಂದೋರು. ಹಾಗಾಗಿ ಅವರು ದೊಡ್ಡ ನಾಯಕರಾದರು. ಆದರೆ ಇವರು ■6ನೇ ಪುಟಕ್ಕೆ



ಮಾಜಿ ಸಂಸದ ಪ್ರತಾಪ್‌ಸಿಂಹ

ಬ್ಯಾಗ್‌ರಹಿತ ಹತ್ತು ದಿನಗಳು: ಕೇಂದ್ರದಿಂದ ಮಾರ್ಗಸೂಚಿ ಬಿಡುಗಡೆ

ನವದೆಹಲಿ: ದೇಶದ 6ರಿಂದ 8ನೇ ತರಗತಿವರೆಗಿನ ಮಕ್ಕಳಿಗೆ ಪ್ರತಿ ಶೈಕ್ಷಣಿಕ ವರ್ಷದಲ್ಲಿ 10 ದಿನಗಳವರೆಗೆ ಬ್ಯಾಗ್ ರಹಿತ ದಿನಗಳನ್ನು ಜಾರಿಗೊಳಿಸುವ ಸಂಬಂಧ ಕೇಂದ್ರ ಶಿಕ್ಷಣ ಸಚಿವಾಲಯ ಸೋಮವಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಮಕ್ಕಳಲ್ಲಿ ಉತ್ಸಾಹ, ಉಲ್ಲಾಸ ಹೆಚ್ಚಿಸುವುದು, ■5ನೇ ಪುಟಕ್ಕೆ

ಬಿಜೆಪಿ, ಜೆಡಿಎಸ್ ಪಾದಯಾತ್ರೆಯನ್ನ ರಾಜಕೀಯವಾಗೇ ಎದುರಿಸುತ್ತೇವೆ

ವಿಪಕ್ಷಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು

- ನಾವು ಕೂಡ ಪಾದಯಾತ್ರೆ ಮಾಡ್ತೇವೆ
- ನಾನು ತಪ್ಪೆ ಮಾಡಿಲ್ಲ, ಬೇಸರವೇಕೆ ಆಗುತ್ತೆ
- ಬಿಜೆಪಿಗೆ ಐಡಿಯಾಲಜಿ ಇಲ್ಲ, ಬರೀ ಬ್ಲ್ಯಾಕ್‌ಮೇಲ್ ತಂತ್ರ
- ಅವರೇ ಸಿಬಿಐ ಚೋರ್ ಬಚಾವ್ ಸಂಸ್ಥೆ ಎನ್ನುತ್ತಿದ್ದರು



ಮೈಸೂರಿನ ನಜರ್‌ಬಾದ್‌ನ ಸರ್ಕಾರಿ ಅತಿಥಿ ಗೃಹದಲ್ಲಿ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರಕರ್ತರ ಜೊತೆ ಮಾತನಾಡಿದರು. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಜು.29(ಬಿಎಲ್‌ಯು)–ಬಿಜೆಪಿ ಹಾಗೂ ಜೆಡಿಎಸ್ ನಡೆಸುವ ಪಾದಯಾತ್ರೆಯನ್ನು ರಾಜಕೀಯವಾಗಿ ಎದುರಿಸುತ್ತೇವೆ. ನಾವು ಕೂಡ ಪಾದಯಾತ್ರೆ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಜೆಪಿ ಹಾಗೂ ಜೆಡಿಎಸ್‌ಗೆ ತಿರುಗೇಟು ನೀಡಿದ್ದಾರೆ. ಮೈಸೂರಿನ ನಜರ್‌ಬಾದ್‌ನ ಸರ್ಕಾರಿ ಅತಿಥಿ ಗೃಹದಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ನನ್ನ 40 ವರ್ಷದ ರಾಜಕಾರಣದಲ್ಲಿ ಒಂದು ಸಣ್ಣ ಕಪ್ಪುಚುಕ್ಕೆ ಇಲ್ಲ. ಇಷ್ಟು ವರ್ಷ ನನ್ನ ಮೇಲೆ ಇಂತಹ ಆರೋಪ ಮಾಡುತ್ತಲೇ ಬಂದಿದ್ದಾರೆ. ಆದರೆ ಅದನ್ನು ರಾಜಕೀಯವಾಗಿ ಎದುರಿಸುತ್ತಲೇ ಬಂದಿದ್ದೇನೆ ಎಂದರು.

ಹಗರಣದಲ್ಲಿ ಭಾಗಿಯಾಗಿದ್ದೇನೆ ಎಂದು ಆರೋಪಿಸಿದ್ದಾರೆ. ಇದರಿಂದ ನನಗೇನು ಬೇಸರವಿಲ್ಲ. ಏಕೆಂದರೆ ತಪ್ಪು ಮಾಡಿದ್ದರೆ ತಾನೆ ಬೇಸರವಾಗುವುದು ಎಂದು ಪ್ರಶ್ನಿಸಿದರು.

ಮುಡಾದಲ್ಲಿ ತಮ್ಮ ಪತ್ನಿ ಪಾರ್ವತಿ ನ್ಯಾಯಸಮ್ಮತವಾಗಿ ನಿವೇಶನ ಪಡೆದಿರುವುದನ್ನು ಹಗರಣವೆಂದು ಬಿಂಬಿಸಿ ಬಿಜೆಪಿ ಬ್ಲ್ಯಾಕ್‌ಮೇಲ್ ತಂತ್ರ ಅನುಸರಿಸುತ್ತಿದೆ. ಬಿಜೆಪಿಯವರಿಗೆ ಯಾವುದೇ ಐಡಿಯಾಲಜಿ ಇಲ್ಲ, ಯಾವುದೇ ಅಕ್ರಮ ನಡೆಯದಿದ್ದರೂ ಹಗರಣ ನಡೆದಿದೆ ಎಂದು ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಬಿಜೆಪಿ ಸರ್ಕಾರದಲ್ಲಿ ನಡೆದಿರುವ ಹಗರಣಗಳಲ್ಲಿ ಒಂದನ್ನು ಅವರು ನ್ಯಾಯಾಂಗ ತನಿಖೆ ಮಾಡಿಸಿಲ್ಲ. ಆದರೆ ನಾನು ಮುಡಾದಲ್ಲಿ ನಡೆದಿದೆ ಎನ್ನಲಾದ ಹಗರಣವನ್ನು ನ್ಯಾಯಾಂಗ ತನಿಖೆಗೆ ವಹಿಸಿದ್ದೇನೆ. ನ್ಯಾಯಾಂಗ ತನಿಖೆ ನಡೆಸುವುದನ್ನು 1952 ಆಕ್ಟ್ ಸ್ಪಷ್ಟವಾಗಿ ಹೇಳುತ್ತದೆ. ಅದರಂತೆ ನ್ಯಾಯಾಂಗ ತನಿಖೆ ಮಾಡಿಸಲಾಗುತ್ತಿದೆ. ಆದರೆ, ಮುಖ್ಯಮಂತ್ರಿ ಸ್ಥಾನದಲ್ಲಿದ್ದ ಹೆಚ್.ಡಿ.ಕುಮಾರಸ್ವಾಮಿ ನ್ಯಾಯಾಂಗ ತನಿಖೆಯನ್ನೇ ಅನುಮಾನದಿಂದ ನೋಡಿದರೆ ■9ನೇ ಪುಟಕ್ಕೆ


ಹೆಚ್.ಡಿ.ದೇವೇಗೌಡರಿಗೆ ಮುಡಾದಿಂದ ಎಷ್ಟು ಸೈಟ್ ಹೋಗಿದೆ ಗೊತ್ತಿದೆಯಾ....!

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಗೆ ಮುಡಾದಿಂದ ಎಷ್ಟು ನಿವೇಶನ ಹೋಗಿದೆ ಗೊತ್ತಿದೆಯಾ... ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದರು. ಪುಟ್ಟಯ್ಯ ಸಿಐಟಿಬಿ ಅಧ್ಯಕ್ಷರಾಗಿದ್ದ ಸಮಯದಲ್ಲಿ ದೇವೇಗೌಡರು ಎಷ್ಟು ನಿವೇಶನ ಬರೆಸಿಕೊಂಡಿದ್ದಾರೆ ಎಂಬ ಪಟ್ಟಿ ಕೊಡಲಾ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಕುಮಾರಸ್ವಾಮಿ ಕೂಡ 40 ವರ್ಷದ ಹಿಂದೆಯೇ ನಿವೇಶನ ಪಡೆದಿದ್ದಾರೆ. ಸ್ವಾಧೀನ ಪತ್ರ ಕೂಡ ಪಡೆದುಕೊಂಡಿದ್ದಾರೆ. ಈಗ ಇದೆಲ್ಲಾ ಸುಳ್ಳು ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ ಎಂದು ಟೀಕಿಸಿದರು.

ನನ್ನ ಅವಧಿಯಲ್ಲಿ ಭ್ರಷ್ಟಾಚಾರ ಮುಕ್ತವಾಗಿದೆ ಎನ್ನಲ್ಲ, ಕಡಿಮೆಯಾಗಿದೆ!

ನಾನು ಮುಖ್ಯಮಂತ್ರಿಯಾಗಿರುವ ಈ ಸಮಯದಲ್ಲಿ ಭ್ರಷ್ಟಾಚಾರ ಸಂಪೂರ್ಣ ಮುಕ್ತವಾಗಿದೆ ಎಂದು ಹೇಳಲ್ಲ. ಆದರೆ, ಕಡಿಮೆಯಾಗಿದೆ ಎಂದು ಹೇಳಬಲ್ಲೆ! ಇದೇ ವೇಳೆ ಸಿದ್ದರಾಮಯ್ಯ ಪುನರ್ ಸ್ಪಷ್ಟಪಡಿಸಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ಎಷ್ಟಿತ್ತು ಎಂಬುದನ್ನು ಇಡೀ ದೇಶವೇ ನೋಡಿದೆ. ಇಷ್ಟೆಲ್ಲಾ ಅವಾಂತರ ಆಗಿದ್ದರೂ ಬಿಜೆಪಿಯವರು ಈಗ ಕರ್ನಾಟಕವನ್ನು ಭ್ರಷ್ಟ ರಾಜ್ಯ ಎಂದು ಬಿಂಬಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಅಲ್ಲದೆ ಸಂಸತ್‌ನಲ್ಲಿ ಕರ್ನಾಟಕಕ್ಕೆ ಭ್ರಷ್ಟಾಚಾರದ ಹಣೆಪಟ್ಟಿ ಕಟ್ಟುವ ಯತ್ನ ಕೂಡ ನಡೆಯುತ್ತಿದೆ. ನಿಜವಾಗಿಯೂ ಬಿಜೆಪಿಯವರಿಗೆ ಮಾನ ಮರ್ಯಾದೆ ಇದೆಯೇ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರದ ಬಿಜೆಪಿ ಸರ್ಕಾರದಲ್ಲೇ ಭ್ರಷ್ಟಾಚಾರ ನಡೆಯುತ್ತಿದೆ. ಈಗ ಕೇಂದ್ರ ಸರ್ಕಾರ 15 ಲಕ್ಷ ಕೋಟಿ ಸಾಲದ ಹೊರೆ ಹೊರಿಸಿದೆ. ಹೀಗಿರುವಾಗ ಕರ್ನಾಟಕದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಹೇಳಲು ಅವರಿಗೆ ನೈತಿಕ ಹಕ್ಕೇನಿದೆ ಎಂದು ಪ್ರಶ್ನಿಸಿದರು. ಕರ್ನಾಟಕದಿಂದ ಕೈಗಾರಿಕೆಗಳು ವಾಪಸು ಹೋಗುತ್ತಿವೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಆರೋಪಿಸುತ್ತಾರೆ. ಆದರೆ ಕೇಂದ್ರ ಸರ್ಕಾರದ ನೀತಿಯಿಂದ ಕೈಗಾರಿಕೆಗಳು ರಾಜ್ಯದಿಂದ ಅಲ್ಲ ದೇಶದಿಂದಲೇ ವಾಪಸು ಹೋಗುತ್ತಿವೆ ಎಂದು ಹೇಳಿದರು. ಆದರೂ ಕರ್ನಾಟಕದಲ್ಲಿ ಕೈಗಾರಿಕಾ ಬೆಳವಣಿಗೆಯಾಗಿದೆ. ಈ ಸಂಬಂಧ ಸಮಗ್ರ ವಿವರ ನೀಡುತ್ತೇನೆ ಎಂದು ಸಿದ್ದರಾಮಯ್ಯ ತಿಳಿಸಿದರು. ಉದ್ದೇಶಪೂರ್ವಕವಾಗಿಯೇ ನೀತಿ ಆಯೋಗದ ಸಭೆಯನ್ನು ನಾನು ಬಹಿಷ್ಕರಿಸಿದ್ದೇನೆ. ■9ನೇ ಪುಟಕ್ಕೆ



ಮೈಸೂರಿನ ಅಗ್ರಹಾರದ ಮೈಲಾರಿ ಹೋಟೆಲ್‌ನಲ್ಲಿ ಸೋಮವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಉಪಾಹಾರ ಸೇವಿಸಿದರು.

ಮೈಸೂರು ಮಿತ್ರ ಮಂಗಳವಾರ 30 ಜುಲೈ 2024

ದೇಹ, ಸಮಾಜದ ಆರೋಗ್ಯ ಎರಡೂ ಮುಖ್ಯ

● ಪಡುವಾರಹಳ್ಳಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಹಿರಿಯ ಸಾಹಿತಿ ಸಿಪಿಕೆ ಅಭಿಮತ ● ವೈದ್ಯರ, ಪತ್ರಿಕಾ ದಿನಾಚರಣೆ ಅಂಗವಾಗಿ ಮೂವರಿಗೆ ಪ್ರಶಸ್ತಿ ಪ್ರದಾನ



ಮೈಸೂರಿನ ಪಡುವಾರಹಳ್ಳಿ ಶ್ರೀ ಮಹದೇಶ್ವರ ದೇವಸ್ಥಾನ ಆವರಣದಲ್ಲಿ ನಡೆದ ವೈದ್ಯರ ಹಾಗೂ ಪತ್ರಿಕಾ ದಿನಾಚರಣೆಯಲ್ಲಿ ಎಸ್ಎಸ್ಎಲ್‌ಸಿಯಲ್ಲಿ ಶೇ.97 ಅಂಕ ಪಡೆದಿರುವ ಧನ್ಯತಾ ಬಿ.ಗೌಡ ಅವರನ್ನು ಸನ್ಮಾನಿಸಲಾಯಿತು. ಡಾ.ರಘುನಂದನ ಶೇಖರಪ್ಪ-ವೈದ್ಯರತ್ನ, ಅಂಶಿ ಪ್ರಸನ್ನಕುಮಾರ್-ಸಾಹಿತ್ಯ ರತ್ನ ಹಾಗೂ ಸಿ.ಕೆ.ಮಹೇಂದ್ರ-ಮಾಧ್ಯಮ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಹಿರಿಯ ಸಾಹಿತಿ ಡಾ.ಸಿಪಿಕೆ, ಡಾ.ವೈ.ಡಿ.ರಾಜಣ್ಣ, ಎನ್.ಬೆಟ್ಟೇಗೌಡ, ನಾಗರಾಜ ವಿ.ಭೈರಿ, ಸಿರಿಬಾಲು ಇನ್ನಿತರ ಉಪಸ್ಥಿತರಿದ್ದರು.

ಮೈಸೂರು,ಜು.29-ದೇಹದ ಆರೋಗ್ಯ, ಸಮಾಜದ ಆರೋಗ್ಯ ಎರಡೂ ಮುಖ್ಯ ಎಂದು ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಹೇಳಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಮಹಾ ಸಭಾ, ಭೂಮಿಗಿರಿ ನಾರಾಯಣಪ್ಪ ಸಾಂಸ್ಕೃತಿಕ ಪ್ರತಿಷ್ಠಾನ, ಅಲೆಯನ್ಸ್ ಕ್ಲಬ್ ಆಫ್ ಮೈಸೂರು ನಾಲ್ವಡಿ ವತಿಯಿಂದ ಪಡುವಾರಹಳ್ಳಿ ಶ್ರೀ ಮಹದೇಶ್ವರ ದೇವಸ್ಥಾನದ ಆವರಣದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ, ವೈದ್ಯರ ಹಾಗೂ ಪತ್ರಿಕಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಭಾವಪಯೋಗಕ್ಕಿಂತ ಲೋಕೋಪಯೋಗಿ ಕೆಲಸ ಮಾಡಬೇಕು. ಅಂತಹ ಜನಹಿತ ಕೆಲಸವನ್ನು ವೈದ್ಯರು ಹಾಗೂ ಪತ್ರಕರ್ತರು ಮಾಡುತ್ತಿದ್ದಾರೆ ಎಂದರು.

ಅಲೆಯನ್ಸ್ ಕ್ಲಬ್ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ. ಭೈರಿ ಮಾತನಾಡಿ, ಇಡೀ ವಿಶ್ವದಲ್ಲಿಯೇ ಅತೀ ಹೆಚ್ಚು ಜನಸಂಖ್ಯೆ ಇರುವ ಭಾರತದಲ್ಲಿ ಕೋವಿಡ್ ಅನ್ನು ಯಾವ ರೀತಿ ನಿರ್ವಹಿಸುತ್ತಾರೆ ಎಂದು ಎದುರು ನೋಡಲಾಗುತ್ತಿತ್ತು ಆದರೆ ನಮ್ಮ ವೈದ್ಯರು ಮತ್ತು ಸಿಬ್ಬಂದಿಯ ಸಹಾಯದಿಂದ ಅತ್ಯಂತ ಸಮರ್ಥವಾಗಿ ಎದುರಿಸಲಾಯಿತು. ಇದರಿಂದಾಗಿಯೇ ಹೆಚ್ಚು ಜನಸಂಖ್ಯೆ ಇದ್ದರೂ ಕಡಿಮೆ ಪ್ರಮಾಣದಲ್ಲಿ ಸಾವುಗಳಾದವು ಎಂದರು.

ಅಲೆಯನ್ಸ್ ಕ್ಲಬ್ ಮೂರನೇ ಉಪ ರಾಜ್ಯಪಾಲ ಎಂ.ಎಸ್.ಸಂತೋಷ್ ಕುಮಾರ್, ಖಜಾಂಚಿ ಎಂ.ಎನ್.ಚಂದ್ರಶೇಖರ್, ಶೋಭಾ ಸರಿಬಾಲು, ಎಮಿನೆನ್ಸ್ ಔಟ್ ಪೇಸ್ ವಾಕ್ ಮತ್ತು ಶ್ರವಣ ಕ್ಲಿನಿಕ್‌ನ ಎಂ.ಟಿ.ಜಯರಾಂ, ನಾರಾಯಣ ಹೃದಯಾಲಯದ ಡಾ.ರಶ್ಮಿ, ಮಾತೃ ಡೆಂಟಲ್ ಕ್ಲಿನಿಕ್‌ನ ಡಾ.ಲೋಹಿತ್, ಆರ್ಯ ಆಸ್ಪತ್ರೆಯ ಡಾ.ದರ್ಶಿತಾ, ಮಾನಸ ಅರ್ಥೋಪಿಡಿಕ್ ಆಸ್ಪತ್ರೆಯ ಡಾ.ಎಸ್. ರಘುನಂದನ್, ಡಾ.ಪೂರ್ಣಿಮಾ ಇದ್ದರು.

ಶ್ರೀಲತಾ ಮನೋಹರ್ ಪ್ರಾರ್ಥಿಸಿದರು. ಕಾರ್ಯಕ್ರಮದ ಆಯೋಜಕ ಎನ್. ಬೆಟ್ಟೇಗೌಡ ಸ್ವಾಗತಿಸಿದರು. ಚಂದ್ರಕಲಾ ನಿರೂಪಿಸಿದರು. ಅಲೆಯನ್ಸ್ ಕ್ಲಬ್ ಜಿಲ್ಲಾ ರಾಜ್ಯಪಾಲ ಸಿರಿಬಾಲು ವಂದಿಸಿದರು.

ಇದೇ ಸಂದರ್ಭದಲ್ಲಿ ವೈದ್ಯ ಹಾಗೂ ಪತ್ರಿಕಾ ದಿನಾಚರಣೆ ಅಂಗವಾಗಿ ಅಂಶಿ ಪ್ರಸನ್ನಕುಮಾರ್-ಸಾಹಿತ್ಯರತ್ನ, ಡಾ.ರಘುನಂದನ ಶೇಖರಪ್ಪ-ವೈದ್ಯರತ್ನ, ಸಿ.ಕೆ. ಮಹೇಂದ್ರ-ಮಾಧ್ಯಮ ರತ್ನ ಪಶಸ್ತಿ ಪ್ರದಾನ ಮಾಡಲಾಯಿತು. ಸಾಹಿತ್ಯ ಲೋಕದ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ ಪ್ರಶಸ್ತಿ ಪುರಸ್ಕೃತರನ್ನು ಪರಿಚಯಿಸಿದರು.

ಇದೇ ವೇಳೆ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಶೇ.97 ಅಂಕಗಳನ್ನು ಪಡೆದಿರುವ ಧನ್ಯತಾ ಬಿ.ಗೌಡ ಅವರನ್ನು ಸನ್ಮಾನಿಸಲಾಯಿತು. ನಾರಾಯಣ ಹೆಲ್ತ್ ಕೇರ್, ಆರ್ಯ ಆಸ್ಪತ್ರೆ, ಸ್ಪರ್ಶ ಕಣ್ಣಿನ ಆಸ್ಪತ್ರೆ, ಮಾನಸ ಆರ್ಥೋಪಿಡಿಕ್ ಆಸ್ಪತ್ರೆ ಮಾತೃಶ್ರೀ ಡೆಂಟಲ್ ಕ್ಲಿನಿಕ್, ಎಮಿನೆನ್ಸ್ ಔಟ್ ಪೇಸ್, ಜೀವಧಾರ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಮಧುಮೇಹ, ರಕ್ತದೊತ್ತಡ, ನೇತ್ರ, ಕೀಲು ಮತ್ತು ಮೂಳೆ, ದಂತ ತಪಾಸಣೆ, ಡಾ.ಎ.ಎಸ್.ಪೂರ್ಣಿಮಾ ಅವರಿಂದ ಗರ್ಭಕೋಶದ ತೊಂದರೆ, ಮುಟ್ಟಿನ ಸಮಸ್ಯೆ ತಪಾಸಣೆ ನಡೆಲಾಯಿತು. ಅಗತ್ಯವಿರುವವರಿಗೆ ಕನ್ನಡಕಗಳನ್ನು ಕೂಡ ವಿತರಿಸಲಾಯಿತು. ಪಡುವಾರಹಳ್ಳಿ ಸುತ್ತಮುತ್ತಲಿನ ನೂರಾರು ನಿವಾಸಿಗಳು ಶಿಬಿರದ ಪ್ರಯೋಜನ ಪಡೆದುಕೊಂಡರು.

ಪ್ರತಿಯೊಬ್ಬರು ಸಮಾಜದಲ್ಲಿ ಹೆಜ್ಜೆ ಗುರುತು ಮೂಡಿಸಬೇಕು

ಜಾಯ್ ಆಫ್ ಗಿವಿಂಗ್ ಕುರಿತ ಉಪನ್ಯಾಸದಲ್ಲಿ ಬೆಂಗಳೂರು ಅಧ್ಯಾಪನ ಕೇಂದ್ರದ ಅಧ್ಯಕ್ಷ ಡಾ.ಗುರುರಾಜ್ ಕರಜಗಿ ಸಲಹೆ

ಮೈಸೂರು, ಜು.29(ಬಿಎಲ್‌ಯು)- ಇಲ್ಲಿ ಯಾವುದೂ ಶಾಶ್ವತವಲ್ಲ. ಆದರೆ ಜೀವಿತಾವಧಿಯಲ್ಲಿ ಸಮಾಜಕ್ಕೆ ಅನುಕೂಲಕರವಾದ ಯಾವುದಾದರೊಂದು ಹೆಜ್ಜೆ ಗುರುತು ಮೂಡಿಸಿ ಹೋಗಬೇಕು ಎಂದು ಬೆಂಗಳೂರು ಅಧ್ಯಾಪನ ಕೇಂದ್ರದ ಅಧ್ಯಕ್ಷ ಡಾ.ಗುರುರಾಜ್ ಕರಜಗಿ ಸಲಹೆ ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜಾಯ್ ಆಫ್ ಗಿವಿಂಗ್ ಕುರಿತ ಉಪನ್ಯಾಸದಲ್ಲಿ ಮಾತನಾಡಿದ ಅವರು, ನಮಗೋಸ್ಕರ ಮಾತ್ರ ಬದುಕದೆ, ಸಮಾಜಕೋಸ್ಕರ ಕೂಡ ಬದುಕುತ್ತೇನೆ ಎಂಬ ಮನೋಭಾವ ಹೊಂದುವ ಮೂಲಕ ಸ್ಮರಣೀಯ ಕೆಲಸ ಮಾಡಿದರೆ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯಲಿದೆ ಎಂದು ಅಭಿಪ್ರಾಯಪಟ್ಟರು.

ಬಹಳಷ್ಟು ಜನರು ಹತ್ತಾರು ಶತಮಾನಗಳ ತನಕ ನೆನಪಿನಲ್ಲಿ ಉಳಿಯುವ ಕೊಡುಗೆಗಳನ್ನು ನೀಡಿದ್ದಾರೆ. ದಾವಣಗೆರೆಯ ಚನ್ನಗಿರಿ ತಾಲೂಕಿನ ಸೂಳೆಕೆರೆ



ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಜಾಯ್ ಆಫ್ ಗಿವಿಂಗ್ ಕುರಿತ ಉಪನ್ಯಾಸದಲ್ಲಿ ಬೆಂಗಳೂರು ಅಧ್ಯಾಪನ ಕೇಂದ್ರದ ಅಧ್ಯಕ್ಷ ಡಾ.ಗುರುರಾಜ್ ಕರಜಗಿ ಮಾತನಾಡಿದರು.

ಇದಕ್ಕೆ ಸ್ಪಷ್ಟ ಉದಾಹರಣೆ. 900 ವರ್ಷದ ಹಿಂದೆಯೇ ಮಹಿಳೆಯೊಬ್ಬಳು ಈ ಕೆರೆ ನಿರ್ಮಿಸಿದಳು. ಆದರೆ ಈಗ ಆ ಕೆರೆಯನ್ನು ಶಾಂತಿ ಸಾಗರ ಹೆಸರಿನಿಂದ ಕರೆಯಲಾಗುತ್ತದೆ. ಆದರೆ ಆ ಮಹಿಳೆಯ ಹೆಸರು ಇನ್ನು ನೆನಪಿನಲ್ಲಿ ಉಳಿಯಬೇಕಾದರೆ ಆ ಕೆರೆಯನ್ನು ಸೂಳೆ ಕೆರೆ ಹೆಸರಿನಿಂದಲೇ ಕರೆಯಬೇಕು ಎಂದು ಹೇಳಿದರು.

ಬಹಳಷ್ಟು ಜನರು ನಾನು ಆ ಕೊಡುಗೆ ನೀಡಿದ್ದೇನೆ, ಈ ಕೊಡುಗೆ ನೀಡಿದ್ದೇನೆ ಎಂದು ಪ್ರಚಾರ ಮಾಡಿಕೊಳ್ಳುತ್ತಾರೆ. ಆದರೆ ತಾನು ಮಾಡುವ ಕಾರ್ಯವನ್ನು ಮತ್ತೊಬ್ಬರು ಹೇಳಬೇಕೇ ಹೊರತು, ನಾವೇ ಅದನ್ನು ಪ್ರಚಾರ ಮಾಡಬಾರದು. ಪ್ರಕೃತಿ ಬಹಳಷ್ಟು ಕೊಡುಗೆ ನೀಡಿದೆ. ಹಾಗೆಂದ ಮಾತ್ರಕ್ಕೆ ಅದು ತನ್ನ ಕೊಡುಗೆಯನ್ನು ಎಂದು ಸಾರಿ ಹೇಳುವುದೇ ಎಂದು ಡಾ.ಗುರುರಾಜ ಕರಜಗಿ ಪ್ರಶ್ನಿಸಿದರು.

ಕೊಡುವುದರಲ್ಲಿ ಇರುವ ಸುಖ ಪಡೆಯುವುದರಲ್ಲಿ ಇಲ್ಲ. ಕೊಡುವುದು ಅಮೃತದ ದಾರಿಯಾಗಿದೆ. ಇದರಿಂದ ಪ್ರತಿಯೊಬ್ಬರು ಸಮಾಜಕ್ಕೆ ತಮ್ಮದೆ ಆದ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.

ಮನುಷ್ಯ ಜೇನು ಹುಳದಂತೆ ಬದುಕಬೇಕು. ಜೇನುಹುಳ ಹೂವಿನ ಬಣ್ಣ ಹಾಗೂ ಅಂದಕ್ಕೆ ಸ್ವಲ್ಪವೂ ಧಕ್ಕೆ ತಾರದೆ ಹನಿಯನ್ನು ಮಾತ್ರ ಹೀರುತ್ತದೆ ಅದೇ ಹನಿಯನ್ನು ಜನರು ಸವಿಯುತ್ತಾರೆ. ಹಾಗೆಯೇ ಮನುಷ್ಯ ತಾನು ಸಮಾಜಕ್ಕೆ ಕೊಡುವುದನ್ನು ಕಲಿಯಬೇಕೇ ಹೊರತು, ಪಡೆಯುವುದಷ್ಟನ್ನೇ ಮಾತ್ರ ಕಲಿಯಬಾರದು ಎಂದರು.

ದೇವರಿಲ್ಲ ಎಂದು ಬಹಳಷ್ಟು ಜನರು ವಾದಿಸುತ್ತಾರೆ. ದೇವರಿಗೆ ರೂಪವಿಲ್ಲ. ಆದರೆ ಎಲ್ಲವನ್ನು ಮೀರಿದ ಒಂದು ಶಕ್ತಿ ಇದೆ. ಒಳ್ಳೆತನ ಇದ್ದರೆ ಕಷ್ಟದ ಕಾಲದಲ್ಲಿ ಆ ಶಕ್ತಿ ನಮ್ಮನ್ನು ಕೈ ಹಿಡಿಯುತ್ತದೆ ಎಂದು ತಿಳಿಸಿದರು. ಕುಲಪತಿ ಪ್ರೊ. ಲೋಕನಾಥ್, ಕುಲಸಚಿವೆ ಶೈಲಜಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್, ಶೂಗಳ ಸೇಲ್




ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಫುಟ್‌ವೇರ್ಸ್‌ಗಳ ಮಾರಾಟ.

ಮೈಸೂರು, ಜು.29- ಮೈಸೂರು ನಗರದ ಉದಯರವಿ ರಸ್ತೆಯಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಫುಟ್‌ವೇರ್ಸ್‌ಗಳ ಮೇಲೆ ಭಾರಿ ರಿಯಾಯಿತಿ ಮಾರಾಟ ನಡೆಯುತ್ತಿದೆ.

ಬ್ರಾಂಡೆಡ್ ಫುಟ್‌ವೇರ್ ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ಸ್ ಶೂಸ್, ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ-ಶರ್ಟ್ಸ್, ಜಾಕೆಟ್ಸ್, ಟ್ರಾಕ್ ಪ್ಯಾಂಟ್, ಲೋವರ್ ಶರ್ಟ್ಸ್‌ಗಳು ಇಲ್ಲಿ ಲಭ್ಯವಿದ್ದು, ಮಹಿಳೆಯರ ಬ್ರಾಂಡೆಡ್ ಕುರ್ತಿಗಳು, ಲೇಡಿಸ್ ಟಾಪ್ಸ್, ಜಾಕೆಟ್ಸ್, ಸ್ವೆಟರ್ಸ್, ಟ್ರ್ಯಾಕ್ ಪ್ಯಾಂಟ್ಸ್, ಟೀ ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್ ಸಹಿತ ಅನೇಕ ಬ್ರಾಂಡೆಡ್ ಉತ್ಪನ್ನಗಳು ಆಫರ್ ದರದಲ್ಲಿ ಲಭ್ಯವಿದೆ. ಬ್ರಾಡೆಡ್ ಪೂಮಾ, ನೈಕ್, ವುಡ್‌ಲ್ಯಾಂಡ್, ಅಡಿದಾಸ್, ಸ್ಕೆಚಸ, ಅಂತ, ಯುಎಸ್ ಪೋಲೋ, ಎಸಿಕ್ಸ್, ಕೆಟಿಯ, ನ್ಯೂ ಬ್ಯಾಲೆನ್ಸ್, ಕ್ಯಾಂಪಸ್, ವಿವಿಧ ಕಂಪನಿಗಳ ಬ್ರಾಂಡೆಡ್ ಶೂಗಳು, ಸ್ಯಾಂಡಲ್ಸ್ ಅಲ್ಲದೆ ಬ್ರಾಂಡೆಡ್ ಸಿದ್ಧ ಉಡುಪುಗಳು ಭಾರಿ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿವೆ. ಈ ಅವಕಾಶ ಎರಡು ದಿನಗಳು ಮಾತ್ರ. ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಪ್ರದರ್ಶನ ಹಾಗೂ ಮಾರಾಟ ಸೌಲಭ್ಯವಿದೆ. ಕ್ರೆಡಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುವುದು.

ತಾರಕ ನದಿ ಪಾತ್ರದ ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಸೂಚನೆ

ಮೈಸೂರು.ಜು.29- ತಾರಕ ಜಲಾನಯನ ಪ್ರದೇಶದಲ್ಲಿ



ಹೆಚ್ಚು ಮಳೆಯಾಗುತ್ತಿದ್ದು, ತಾರಕ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿ ಗರಿಷ್ಟ ಮಟ್ಟ ತಲುಪುವ ಹಂತದಲ್ಲಿ ಇರುವುದರಿಂದ, ಜಲಾಶಯದಿಂದ ನದಿಗೆ ಯಾವುದೇ ಕ್ಷಣದಲ್ಲಾದರೂ ನೀರನ್ನು ಹೊರಬಿಡಲಾಗುವುದು. ಆದ್ದರಿಂದ ತಾರಕ ನದಿಯ ದಂಡೆಯಲ್ಲಿ ವಾಸಿಸುವವರು ಹಾಗೂ ನದಿ ಪಾತ್ರದ ತಗ್ಗು ಪ್ರದೇಶದಲ್ಲಿರುವ ಸಾರ್ವಜನಿಕರು ತಮ್ಮ ಆಸ್ತಿ-ಪಾಸ್ತಿ, ಜನ-ಜಾನುವಾರುಗಳ ರಕ್ಷಣೆಗೆ ಮುನ್ನೆಚ್ಚರಿಕೆ ವಹಿಸಿ, ಸುರಕ್ಷಿತ ಸ್ಥಳಗಳಿಗೆ ತೆರಳಲು ಕೋರಿದೆ ಎಂದು ಹೆಚ್.ಡಿ.ಕೋಟೆಯ ಕಾ.ನೀ.ನಿ.ನಿ.ಯ ತಾರಕ ನಾಲಾ ಉಪ-ವಿಭಾಗದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಜೆಪಿಗೆ ನೇಮಕ



ಮೈಸೂರು,ಜು.29-ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷರಾಗಿ ಕೆ.ಸೋಮಶೇಖರ್ ರಾಜು ಅವರನ್ನು ನಗರಾಧ್ಯಕ್ಷ ಎಲ್.ನಾಗೇಂದ್ರ ನೇಮಕ ಮಾಡಿದ್ದಾರೆ.

ಚಾಮುಂಡೇಶ್ವರಿ ಪೂಜಾ ಮಹೋತ್ಸವ...



ಆಷಾಢ ಮಾಸದ ಅಂಗವಾಗಿ ಚಿಕ್ಕ ಗಡಿಯಾರದ ಮುಂಭಾಗ ಶಿವರಾಂಪೇಟೆ ವರ್ತಕರ ಸಂಘದಿಂದ ಚಾಮುಂಡೇಶ್ವರಿ ಮಾತೆಗೆ ವಿಶೇಷ ಪೂಜೆ ಸಲ್ಲಿಸಿ, ಶಾಸಕ ಹರೀಶ್‌ಗೌಡ ಪ್ರಸಾದ ವಿತರಿಸಿದರು. ಶಿವರಾಂಪೇಟೆ ವರ್ತಕರ ಸಂಘದ ಪದಾಧಿಕಾರಿಗಳಾದ ಶ್ರವಣ್, ಭರತ್, ಕಾಂತಿಲಾಲ್, ದೀಪಕ್, ಮನೀಶ್ ಹಾಗೂ ಸ್ಥಳೀಯ ಮುಖಂಡರಾದ ರವಿಚಂದ್ರ, ನವೀನ್, ಅಮಿತ್, ವಿನೋದ್ ಅರಸ್ ಹಾಗೂ ಇನ್ನಿತರರು ಹಾಜರಿದ್ದರು.

ನರರೋಗ ತಪಾಸಣಾ ಶಿಬಿರ

ಮೈಸೂರು: ಸುಯೋಗ್ ಆಸ್ಪತ್ರೆಯ ವತಿಯಿಂದ ಆ.3ರವರೆಗೆ ಬೆಳಗ್ಗೆ 10ರಿಂದ ಸಂಜೆ 6 ಗಂಟೆವರೆಗೆ ನರರೋಗ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಕತ್ತುನೋವು, ಬೆನ್ನುನೋವು, ನರದೌರ್ಬಲ್ಯ, ಲಕ್ವ, ಮರೆವು, ನಿದ್ರಾಹೀನತೆ ಸಮಸ್ಯೆಗಳು, ಫಿಟ್ಸ್, ಸ್ಪರ್ಶಹೀನತೆ ಸಮಸ್ಯೆಗಳಿರುವ ರೋಗಿಗಳು ಶಿಬಿರದ ಉಪಯೋಗ ಪಡೆಯಬೇಕೆಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ 0821-2566966, 9986399862 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ.

ಯುವ ಕಾಂಗ್ರೆಸ್ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆ




ಮೈಸೂರು ನಗರ ಕಾಂಗ್ರೆಸ್ ಭವನದಲ್ಲಿ ರಾಜ್ಯ ಯುವ ಕಾಂಗ್ರೆಸ್ ಚುನಾವಣೆ ಸಂಬಂಧ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು, ಜು.29 (ಎಂಟಿವೈ)- ದೇಶದಲ್ಲಿ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಪಡಿಸಲು ಹೈಕಮಾಂಡ್ ನಿರ್ಧರಿಸಿದ್ದು, ಅದಕ್ಕಾಗಿ ರಾಜ್ಯ ಯುವ ಕಾಂಗ್ರೆಸ್ ಪದಾಧಿಕಾರಿಗಳ ಆಯ್ಕೆಗಾಗಿ ಚುನಾವಣೆ ನಡೆಸಲಾಗುತ್ತಿದೆ ಎಂದು ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್ ತಿಳಿಸಿದ್ದಾರೆ.

ಮೈಸೂರು ನಗರ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ರಾಜ್ಯ ಯುವ ಕಾಂಗ್ರೆಸ್ ಚುನಾವಣೆ ಸಂಬಂಧ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಅಡಿಪಾಯದಲ್ಲಿ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಯುವ ಕಾಂಗ್ರೆಸ್ ಯುವಕರನ್ನು ಸೆಳೆದಿತ್ತು. ಇದೀಗ ಮತ್ತೊಮ್ಮೆ ಯುವ ಕಾಂಗ್ರೆಸ್ ಚುನಾವಣೆ ಬಂದಿದೆ. ಮೂರು ವರ್ಷಕ್ಕೆ ಒಮ್ಮೆ ನಡೆಯುವ ಈ ಚುನಾವಣೆ ದೇಶದಾದ್ಯಂತ ಪಕ್ಷ ಸಂಘಟನೆ ಮತ್ತು ಯುವ ಸಮುದಾಯವನ್ನು ಕಾಂಗ್ರೆಸ್‌ನತ್ತ ತರಲು ಬಹುದೊಡ್ಡ ಮೈಲಿಗಲ್ಲು ಹೊಂದಿದೆ ಎಂದರು.

ಮೈಸೂರಿನಲ್ಲಿ ಯುವ ಕಾಂಗ್ರೆಸ್ ಚುನಾವಣೆ ಚುರುಕಾಗಿ ನಡೆಸುವ ಉದ್ದೇಶ ಹೊಂದಿದ್ದೇವೆ. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮೈಸೂರು ವಿಭಾಗೀಯ ಅಧಿಕಾರಿಯಾಗಿ ಕಾಳಿಮುತ್ತು ಅವರನ್ನು ನೇಮಕ ಮಾಡಿದ್ದು, ಇವರಿಗೆ 7 ಜಿಲ್ಲೆಗಳ ಜವಾಬ್ದಾರಿಯನ್ನು ವಹಿಸಲಾಗಿದೆ. ಜು.24ರಿಂದ ಆ.2ರವರೆಗೆ ನಾಮಪತ್ರ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಆ.16ರಿಂದ ಸೆ.16 ರವರೆಗೆ ಸದಸ್ಯತ್ವ ನೋಂದಣಿ ನಡೆಯಲಿದೆ. ಸದಸ್ಯತ್ವ ನೋಂದಣಿಗೆ 50 ರೂ., ಶುಲ್ಕ, ಬ್ಲಾಕ್ ಸಮಿತಿಗೆ 17, ವಿಧಾನಸಭಾ ಸಮಿತಿಗೆ 27, ಜಿಲ್ಲಾ ಸಮಿತಿಗೆ 27, ರಾಜ್ಯ ಸಮಿತಿಗೆ 57 ಪದಾಧಿಕಾರಿಗಳ ಆಯ್ಕೆ ನಡೆಯಲಿದೆ. ಕ್ರಿಮಿನಲ್ ಹಿನ್ನೆಲೆ ಇರುವ ಯುವಕರಿಗೆ ಸದಸ್ಯತ್ವ ರದ್ದುಪಡಿಸುವ ಅಧಿಕಾರ ರಾಷ್ಟ್ರೀಯ ಕಾಂಗ್ರೆಸ್‌ಗೆ ಇದೆ ಎಂದರು. ಸುದ್ದಿಗೋಷ್ಠಿಯಲ್ಲಿ ಮೈಸೂರು ವಿಭಾಗೀಯ ಯುವ ಕಾಂಗ್ರೆಸ್ ಚುನಾವಣಾ ಉಸ್ತುವಾರಿ ಪಾಂಡಿಚೇರಿಯ ಕಾಳಿಮುತ್ತು, ನಗರಾಧ್ಯಕ್ಷ ಆರ್.ಮೂರ್ತಿ, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಯುವ ಕಾಂಗ್ರೆಸ್ ನಗರಾಧ್ಯಕ್ಷ ಅಬ್ರಾರ್, ಗ್ರಾಮಾಂತರ ಯುವ ಕಾಂಗ್ರೆಸ್ ಅಧ್ಯಕ್ಷ ಹಿನಕಲ್ ಮಂಜು, ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹ್ಯಾರಿಸ್, ಶಂಸದ್ ಖಾನ್, ಮೊಸಿನ್ ಖಾನ್, ಸಂತೋಷ್, ಪ್ರವೀಣ್, ರಫೀಕ್ ಅಲಿಖಾನ್, ಚಂದ್ರು ಇದ್ದರು.

ವಿಜಯಶಂಕರ್‌ಗೆ ಅಭಿನಂದನೆ



ಮೇಘಾಲಯ ರಾಜ್ಯಪಾಲರಾಗಿ ನೇಮಕಗೊಂಡಿರುವ ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಅವರನ್ನು ಮೈಸೂರು ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಆಡಳಿತಾಧಿಕಾರಿ ಶ್ರೀನಿವಾಸನ್ ಅವರು ಶಾಲು ಹೊದಿಸಿ, ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದರು.

ಕಾಂಗ್ರೆಸ್‌ಗೆ ನೇಮಕ



ಮೈಸೂರು, ಜು. 29 - ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಪದವೀಧರ ವಿಭಾಗದ ಅಧ್ಯಕ್ಷರಾಗಿ ಹುಣಸೂರು ತಾಲೂಕು ಹೊಸರಾಮನಹಳ್ಳಿಯ ಸಿದ್ದಾರ್ಥ್ ನಾಯಕ್ ಅವರನ್ನು ನೇಮಕ ಮಾಡಲಾಗಿದೆ.

ನಿಧನ

ಪುಟ್ಟಚಾಮಮ್ಮ



ಮೈಸೂರು, ಜು.29- ಹುಣಸೂರು ತಾಲೂಕಿನ ಕರಿಮುದ್ದನಹಳ್ಳಿ ಗ್ರಾಮದ ಮಾಜಿ ಗ್ರಾಮ ಪಂಚಾಯಿತಿ ಸದಸ್ಯೆ ಹಾಗೂ ಶತಾಯುಷಿ ಶ್ರೀಮತಿ ಪುಟ್ಟಚಾಮಮ್ಮ (100) ಶನಿವಾರ (ಜು.27) ರಾತ್ರಿ ನಿಧನರಾದರು. ಮೃತರು ಮಕ್ಕಳಾದ ಮಹದೇವಯ್ಯ, ಶಿವಯ್ಯ, ಸಣ್ಣಯ್ಯ, ಮಹದೇವಮ್ಮ, ಲಕ್ಷ್ಮಿ, ಸವಿತ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಕರಿಮುದ್ದನಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟಸಿದ್ದಮ್ಮ



ಕೆ.ಆರ್.ಪೇಟೆ ತಾಲೂಕಿನ ಮಂದಗೆರೆ ಗ್ರಾಮದ ನಿವೃತ್ತ ರೈಲ್ವೆ ನೌಕರರಾದ ಲೇಟ್ ದ್ಯಾವಶೆಟ್ಟಿ ಅವರ ಧರ್ಮಪತ್ನಿ ಪುಟ್ಟಸಿದ್ದಮ್ಮ(75) ಅವರು ಕೆ.ಆರ್.ಪೇಟೆ ಪಟ್ಟಣದ ಬಸವೇಶ್ವರ ನಗರದ ನಿವಾಸದಲ್ಲಿ ಭಾನುವಾರ ನಿಧನರಾದರು. ಮೃತರು ಪುತ್ರ ಹೈಕೋರ್ಟ್ ಸರ್ಕಾರಿ ಅಭಿಯೋಜಕ(ಪಿ.ಪಿ) ಅನುರೇವ್ ಎಂ.ಡಿ, ವಕೀಲರಾದ ರಾಣಿ, ಪೂರ್ಣಿಮಾ ಸೇರಿದಂತೆ ನಾಲ್ವರು ಪುತ್ರಿಯರು, ಅಳಿಯಂದಿರಾದ ಗ್ರಾ.ಪಂ. ಸದಸ್ಯರು ಹಾಗೂ ಪತ್ರಕರ್ತ ಆರ್.ಶ್ರೀನಿವಾಸ್, ಉದ್ಯಮಿ ಪ್ರಶಾಂತ್(ಮಧು) ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ ಕೆ.ಆರ್.ಪೇಟೆ ಪಟ್ಟಣದ ಹಿಂದೂ ರುದ್ರಭೂಮಿಯಲ್ಲಿ ನಡೆಯಿತು. ಮೃತರ ನಿಧನಕ್ಕೆ ತಾಲೂಕು ವಕೀಲರ ಸಂಘದ ಪದಾಧಿಕಾರಿಗಳು ಹಾಗೂ ತಾಲೂಕಿನ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಅಲ್‌ಹಾಜ್ ಮುನೀರ್ ಪಾಷ @ ಬಾದಲ್



ಮೈಸೂರಿನ ಮಂಡಿ ಮೊಹಲ್ಲಾದ ಸುಲ್ತಾನ್ ಪಾರ್ಕ್ ರಸ್ತೆ ನಿವಾಸಿ ಅಲ್‌ಹಾಜ್ ಮುನೀರ್ ಪಾಷ @ ಬಾದಲ್ (75) ಶನಿವಾರ ಹೃದಯಾಘಾತದಿಂದ ನಿಧನರಾದರು. ಮೃತರು ಮೂವರು ಪುತ್ರರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೈಸೂರಿನ ಟಿಪ್ಪು ಸರ್ಕಲ್ ಹಿಂಭಾಗ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.1ರಲ್ಲಿ ಮೃತರ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಂಭು



ಮೈಸೂರಿನ ದಟ್ಟಗಳ್ಳಿ 7ನೇ ಕ್ರಾಸ್‌ನ ನಿವಾಸಿ ಹಾಗೂ ಸರಸ್ವತಿಪುರಂನಲ್ಲಿ ಸೂಪರ್ ಮೆನ್ಸ್‌ವೇರ್‌ನ ಶಂಭು (70) ಸೋಮವಾರ ನಿಧನರಾದರು. ಇವರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯು ನಾಳೆ (ಜು.30) ಮಧ್ಯಾಹ್ನ 2 ಗಂಟೆಗೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ.


ಕೆ.ಡಿ.ನಾಗೇಂದ್ರ



ಮೈಸೂರಿನ ಹೆಬ್ಬಾಳ್ ನಿವಾಸಿ, ಜಿಪಂ ಆರೋಗ್ಯ ಇಲಾಖೆ ನೌಕರ ಕೆ.ಡಿ. ನಾಗೇಂದ್ರ(42), ಜು.27ರಂದು ನಿಧನರಾದರು.

ಮೃತರು ತಾಯಿ, ಪತ್ನಿ, ಪುತ್ರಿ ಹಾಗೂ ಅಪಾರ ಬಂಧು-ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ಜು.28ರಂದು ಅವರ ಸ್ವಗ್ರಾಮ ಕಿಲಗೆರೆಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.07.2024 ಮಂಗಳವಾರ, ಮಳೆ ನಕ್ಷತ್ರ: ಪುಷ್ಯ, 20.07.2024 ರಿಂದ 02.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಕೃತ್ತಿಕ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಚರ್ಮರೋಗಿಗಳಿಗೆ ಆಯುರ್ವೇದ ಪಂಚಕರ್ಮ ಪ್ರತ್ಯೇಕ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಸಮೂಹ ವಿದ್ಯಾ ಸಂಸ್ಥೆ:** ಸೈನೋಸೈಟಿಸ್ ಮತ್ತು ತಲೆನೋವಿ(ನಾನಾ ವಿಧ)ಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಕೆಬಿಎಲ್ ಲೇಔಟ್, ದೇವೇಗೌಡ ಸರ್ಕಲ್ ಬಳಿ, ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೆ.

■ **ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ:** ಪೌರಕಾರ್ಮಿಕರ ಜಿಲ್ಲಾ ಸಮಾವೇಶ ಮತ್ತು ಜಿಲ್ಲಾ ಪೌರಕಾರ್ಮಿಕರ ಘಟಕದ ನೂತನ ಅಧ್ಯಕ್ಷರಾಗಿ ಎಸ್.ನಾಗರಾಜ್ ಅಧಿಕಾರ ಸ್ವೀಕಾರ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಉಪಸ್ಥಿತರು : ಶಾಸಕ ತನ್ವೀರ್ ಸೇಠ್, ಡಾ.ಬಿ.ಜೆ.ವಿಜಯಕುಮಾರ್, ಸ್ಥಳ: ಕಾಂಗ್ರೆಸ್ ಭವನ, ಬೆಳಗ್ಗೆ 11.30ಕ್ಕೆ.

■ **ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಗ್ಯಾಸ್ಟ್ರೋ ಓಪಿಡಿ ಕೊಠಡಿ ಸಂಖ್ಯೆ 10, ಆಸ್ಪತ್ರೆ ಆವರಣ, ಬೆಳಗ್ಗೆ 10ರಿಂದ ಮಧ್ಯಾಹ್ನ 1 ಗಂಟೆ, ಮಧ್ಯಾಹ್ನ 3ರಿಂದ 4 ಗಂಟೆವರೆಗೆ.

■ **ಶ್ರೀ ಚಾಮುಂಡೇಶ್ವರಿ ದೇವಸ್ಥಾನ:** ಚಾಮುಂಡೇಶ್ವರಿ ಅಮ್ಮನವರ ಹಬ್ಬ ಮತ್ತು ಅಮ್ಮನವರ ಉತ್ಸವ, ಬೆಳಗ್ಗೆ 9 ಗಂಟೆಯಿಂದ ಶಾಂತಿಪೂಜೆ, ಗಣಪತಿ ಪೂಜೆ, ನವಗ್ರಹ ಮತ್ತು ಮೃತ್ಯುಂಜಯ ಪೂಜೆ, ಗಣಪತಿ ಪೂಜೆ, ನವಗ್ರಹ, ಮೃತ್ಯುಂಜಯ ದುರ್ಗಾ ಹೋಮ, ಸ್ಥಳ: ದೇವಸ್ಥಾನದ ಆವರಣ, ಹೆಬ್ಬಾಳು

■ **ವಿದ್ಯಾವರ್ಧಕ ಸಂಯುಕ್ತ ಪಿಯು ಕಾಲೇಜು:** ವಿದ್ಯಾರ್ಥಿ ಸಂಘ ಉದ್ಘಾಟನೆ ಮತ್ತು ಸನ್ಮಾನ ಕಾರ್ಯಕ್ರಮ, ಸಾನ್ನಿಧ್ಯ: ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಸರ್ವಜಯಾನಂದಜಿ ಮಹಾರಾಜ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು: ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣನವರ್, ಕಾರ್ಯಕಾರಿ ಸಮಿತಿ ಸದಸ್ಯ ಅಬ್ದುಲ್ ಜಮೀಲ್, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಶ್ರೀ ಶಿವರಾತ್ರೀಶ್ವರ ಮಹಿಳಾ ಸಮಾಜ :** ವಚನ ಸಂಗೀತೋತ್ಸವ ಕಾರ್ಯಕ್ರಮ, ಪಂಡಿತ್ ಪುಟ್ಟರಾಜ ಗವಾಯಿಗಳವರ ಶಿಷ್ಯರು ಹಾಗೂ ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾದ ಕೆ. ಆನಂದಕುಮಾರ್ ಅವರಿಂದ ವಚನ ಸಂಗೀತೋತ್ಸವ ವಿಶೇಷ ಕಾರ್ಯಕ್ರಮ, ಸ್ಥಳ: ಜೆಎಸ್‌ಎಸ್ ಪ್ರಶಿಕ್ಷಣ ಪ್ರಾಥಮಿಕ ಶಾಲಾ ಸಭಾಂಗಣ, ಸರಸ್ವತಿಪುರಂ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಎಸ್.ಸಂಗೀತಾ, ವ್ಯಾಖ್ಯಾನ: ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ. ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್ ಎಸ್.ಎಸ್., 8.30 'ಮಹಾಕವಿಯ ಪಕ್ಷಿವೀಕ್ಷಣೆ' ರೂಪಕ, ರಚನೆ: ಡಾ. ಶ್ರೀದರ್ ಹೆಗಡೆ ಭದ್ರನ್, ನಿರೂಪಣೆ: ದಿವಾಕರ ಹೆಗಡೆ, ಗಮಕ: ಶುಭಾ ರಾಘವೇಂದ್ರ, 9.00 ಕರೆಗೊಂದು ಗೀತೆ-ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ವಿ.ಕಲಾವತಿ ಅವಧೂತ್-ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ-ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ **ಮಧ್ಯಾಹ್ನ:** 12.05 ವನಿತಾ ವಿಹಾರ: ಹೀಗಿದೆ ನೋಡಿ ನಮ್ ಜೋಡಿ, ಭಾಗವಹಿಸುವವರು: ಹುಟ್ಟಿನಿಂದಲೇ ಅಂಧರಾದ ವಿಶೇಷ ಚೇತನ ದಂಪತಿ ಶಿವನಂಜಯ್ಯ ಮತ್ತು ಪುಷ್ಪಾವತಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಅಬ್ದುಲ್ ರಶೀದ್, 12.30 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.20 ಭಾವಗೀತೆಗಳು-ಆರತಿ ಆನಂದ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಪ್ರಪಂಚಂ ಸೀತಾರಾಂ-ಕೊಳಲು ವಾದನ, 4.00 ಕಥಾ ಕಾಲಕ್ಷೇಪ- ಕಿರಾತಾರ್ಜುನ, ಪ್ರಸ್ತುತಿ: ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ-ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ-ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಹಿಪ್ಪುನೇರಳೆ ಬೇಸಾಯ ಹಾಗೂ ನೀರಿನ ನಿರ್ವಹಣೆ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ: ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ.ಸಿ.ಎಂ.ಬಾಬು ಮತ್ತು ಡಾ.ಮಂಜಪ್ಪ. ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಭಾರತ ಹಾಗೂ ಶ್ರೀಲಂಕಾ ಕ್ರಿಕೆಟ್ ತಂಡಗಳ ನಡುವೆ ಶ್ರೀಲಂಕಾದ ಪಲ್ಲೆಕೆಲೆ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯುವ ಮೂರನೇ ಟಿ20 ಕ್ರಿಕೆಟ್ ಪಂದ್ಯದ ನೇರ ವೀಕ್ಷಕ ವಿವರಣೆ.

ಮೈಸೂರು ಮಿತ್ರ ಮಂಗಳವಾರ 30 ಜುಲೈ 2024

ನೂತನ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್‌ಗೆ ಸ್ವಾಗತ ಕೋರಿದ ಮೇಘಾಲಯ ಸಿಎಂ, ಡಿಸಿಎಂ



ನವದೆಹಲಿಯ ಎರಡನೇ ಮೇಘಾಲಯ ಹೌಸ್ ವಸಂತ್ ವಿಹಾರ್‌ನಲ್ಲಿ ಸೋಮವಾರ ಮೇಘಾಲಯದ ರಾಜ್ಯಪಾಲರಾಗಿ ನೇಮಕಗೊಂಡಿರುವ ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಅವರನ್ನು ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ, ಉಪಮುಖ್ಯಮಂತ್ರಿ ಎಸ್.ಧರ್ ಹೂಗುಚ್ಛ ನೀಡಿ ಸ್ವಾಗತ ಕೋರಿದರು. ಸಚಿವ ಮಾರ್ಕ್ಯೂಸ್ ಎನ್.ಮಾರಾಕ್ ಸಹ ಇದ್ದಾರೆ.

ಮೈಸೂರು,ಜು.29(ಪಿಎಂ)– ಮೇಘಾಲಯದ ರಾಜ್ಯಪಾಲರಾಗಿ ನೇಮಕಗೊಂಡಿರುವ ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಅವರನ್ನು ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ಹಾಗೂ ಉಪಮುಖ್ಯಮಂತ್ರಿ ಎಸ್.ಧರ್ ಹೂಗುಚ್ಛ ನೀಡಿ ಸ್ವಾಗತ ಕೋರಿದರು.

ನವದೆಹಲಿಯ ಎರಡನೇ ಮೇಘಾಲಯ ಹೌಸ್ ವಸಂತ್ ವಿಹಾರ್‌ನಲ್ಲಿ ಸೋಮವಾರ ಸ್ವಾಗತ ಕೋರಲಾಯಿತು. ಮೇಘಾಲಯದ ವಸತಿ ಮತ್ತು ಸಾರ್ವಜನಿಕ ಆರೋಗ್ಯ ಇಂಜಿನಿಯರಿಂಗ್ ಸಚಿವ ಮಾರ್ಕ್ಯೂಸ್ ಎನ್.ಮಾರಾಕ್ ಸಹ ಇದ್ದರು.

ಇದೇ ವೇಳೆ ಮಾತನಾಡಿದ ಸಿ.ಹೆಚ್.ವಿಜಯಶಂಕರ್, ಪ್ರಧಾನಮಂತ್ರಿಗಳು ಮತ್ತು ರಾಷ್ಟ್ರಪತಿಗಳು ನನಗೆ ಮೇಘಾಲಯ ರಾಜ್ಯಪಾಲ ಹುದ್ದೆಯಲ್ಲಿ ಸೇವೆ ಸಲ್ಲಿಸಲು ಅವಕಾಶ ನೀಡಿದ್ದು, ಅವರು ನನ್ನಲ್ಲಿಟ್ಟಿರುವ ನಂಬಿಕೆ–ವಿಶ್ವಾಸಕ್ಕೆ ತಕ್ಕಂತೆ ಈ ಉನ್ನತ ಹುದ್ದೆಯ ಘನತೆ ಮತ್ತು ಗೌರವ ಕಾಪಾಡಿಕೊಂಡು ಕಾರ್ಯ ನಿರ್ವಹಿಸಲು ಬದ್ಧವಾಗಿದ್ದೇನೆ. ಈ ಅವಕಾಶಕ್ಕಾಗಿ ಅವರಿಗೆ ಧನ್ಯವಾದ ಹೇಳುತ್ತೇನೆ ಎಂದು ತಿಳಿಸಿದರು.

ಸಾರ್ವಜನಿಕ ಜೀವನದಲ್ಲಿ ಅನೇಕ ಸ್ಥಾನದಲ್ಲಿ ಕೆಲಸ ಮಾಡಿದ್ದೇನೆ. 1994ರಲ್ಲಿ ಶಾಸಕನಾಗಿ ಹುಣಸೂರಿನಿಂದ ಆಯ್ಕೆಯಾಗಿ ಕೆಲಸ ಮಾಡಿದ್ದು, 1998 ಮತ್ತು 2004ರಲ್ಲಿ ಎರಡು ಬಾರಿ ಮೈಸೂರು ಸಂಸದನಾಗಿ ಕಾರ್ಯ ನಿರ್ವಹಿಸಿದ್ದೇನೆ. 2009ರಲ್ಲಿ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ ಅವರ ಸಂಪುಟದಲ್ಲಿ ಅರಣ್ಯ ಮಂತ್ರಿಯಾಗಿಯೂ ಕೆಲಸ ಮಾಡಿದ ಅನುಭವ ಹೊಂದಿದ್ದೇನೆ ಎಂದು ಹೇಳಿದರು.

ಆದರೆ ಈ ಎಲ್ಲಾ ಹುದ್ದೆಗಳಿಗಿಂತಲೂ ರಾಜ್ಯಪಾಲ ಹುದ್ದೆ ಉನ್ನತವಾದುದು. ಇಡೀ ರಾಜ್ಯದ ಆಡಳಿತ ಗಮನಿಸಿ ಸಂವಿಧಾನಾತ್ಮಕವಾಗಿ ಆಡಳಿತ ನಡೆಯುವಂತೆ ನೋಡಿಕೊಳ್ಳುವ ಜವಾಬ್ದಾರಿ ಕಲ್ಪಿಸುವ ಈ ಹುದ್ದೆ ಅತ್ಯುನ್ನತವಾದುದು. ಇಂತಹ ಅವಕಾಶ ಕಲ್ಪಿಸಿರುವುದು ಜನ್ಮಾಂತರದ ಪುಣ್ಯವೆಂದು ಭಾವಿಸಿದ್ದೇನೆ. ತಾಯಿ ಚಾಮುಂಡೇಶ್ವರಿಯ ವರ್ಧಂತಿಯ ಶುಭ ಕಾರ್ಯ ಮೈಸೂರಿನಲ್ಲಿ ನಡೆಯುತ್ತಿರುವಾಗಲೇ ಪ್ರಧಾನಮಂತ್ರಿಗಳು ಈ ಸೂಚನೆ ಕೊಟ್ಟಿರುವುದು ನೋಡಿದರೆ ಆ ತಾಯಿಯ ಆಶೀರ್ವಾದ ಇತ್ತು ಎಂಬುದು ಸ್ಪಷ್ಟವಾಗಿ ಗೋಚರಿಸುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಲಾಗೈಡ್ ಬಳಗದಿಂದ ಹಿರಿಯ ವಕೀಲ ಎಸ್.ಉಮೇಶ್ ಹುಟ್ಟುಹಬ್ಬ ಆಚರಣೆ



ಮೈಸೂರು ಜಿಲ್ಲಾ ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಎಸ್.ಉಮೇಶ್ ಅವರ ಹುಟ್ಟುಹಬ್ಬವನ್ನು ಲಾಗೈಡ್ ಬಳಗದ ವತಿಯಿಂದ ಆಚರಿಸಲಾಯಿತು. ಈ ವೇಳೆ ಎಸ್.ಉಮೇಶ್ ಅವರನ್ನು ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆಯ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್, ಹಿರಿಯ ವಕೀಲರಾದ ಎಂ.ಡಿ.ಹರೀಶ್‌ಕುಮಾರ್ ಹೆಗ್ಡೆ, ಸಂಘದ ಮಾಜಿ ಅಧ್ಯಕ್ಷರಾದ ಜಿ.ವಿ.ರಾಮಮೂರ್ತಿ, ಎಂ.ಮಹದೇವಸ್ವಾಮಿ ಸೇರಿದಂತೆ ಹಿರಿಯ ಹಾಗೂ ಕಿರಿಯ ವಕೀಲರು, ನಗರಪಾಲಿಕೆ ಮಾಜಿ ಸದಸ್ಯ ಲೋಕೇಶ್ ಪಿಯಾ, ಜಸ್ಟ್ ಕನ್ನಡ ಆನ್‌ಲೈನ್ ಪತ್ರಿಕೆ ಸಂಪಾದಕ ಕೊಳ್ಳೇಗಾಲ ಮಹೇಶ್ ಇನ್ನಿತರರು ಕೇಕ್ ಕತ್ತರಿಸಿ, ಮೈಸೂರು ಪೇಟ ತೊಡಿಸಿ, ಹಾರ ಹಾಕಿ, ಶಾಲು ಹೊದಿಸಿ ಶುಭ ಹಾರೈಸಿದರು.

ಮಹಾತ್ಮ ಗಾಂಧಿ, ಡಾ.ಅಂಬೇಡ್ಕರ್‌ರನ್ನು ಭಿನ್ನ ದೃಷ್ಟಿಯಲ್ಲಿ ನೋಡುವುದು ಸರಿಯಲ್ಲ;

ಇಬ್ಬರೂ ಅಸ್ಪೃಶ್ಯತೆ ವಿರುದ್ಧ ಹೋರಾಡಿದವರೇ

■ ಇತಿಹಾಸಕಾರ ಪ್ರೊ.ರಾಮಚಂದ್ರ ಗುಹಾ ಪ್ರತಿಪಾದನೆ ■ ದೇಶಕ್ಕೆ ಈ ಇಬ್ಬರ ಚಿಂತನೆಯೂ ಅಗತ್ಯವಾಗಿದೆ



ಸಿಎಫ್‌ಟಿಆರ್‌ಐನಲ್ಲಿ ಸೋಮವಾರ ನಡೆದ ಡಾ.ಬಿ.ಆರ್.ಅಂಬೇಡ್ಕರ್‌ರವರ 133ನೇ ಜಯಂತ್ಯೋತ್ಸವದಲ್ಲಿ ಇತಿಹಾಸಕಾರ ಪ್ರೊ.ರಾಮಚಂದ್ರ ಗುಹಾ, ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರ ಕುಮಾರ್ ಮತ್ತಿತರರಿದ್ದರು.

ಮೈಸೂರು, ಜು.29(ಎಂಕೆ)– ಮಹಾತ್ಮ ಗಾಂಧಿ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಅವರ ತಾತ್ವಿಕ ನಿಲುವುಗಳಲ್ಲಿ ಭಿನ್ನಾಭಿಪ್ರಾಯಗಳಿದ್ದು, ಅವುಗಳನ್ನು ಸಂಘರ್ಷದ ದೃಷ್ಟಿಯಲ್ಲಿ ನೋಡಬಾರದು. ದೇಶಕ್ಕೆ ಇಬ್ಬರು ಮಹನೀಯರ ಚಿಂತನೆ ಅಗತ್ಯವಾಗಿವೆ ಎಂದು ಇತಿಹಾಸಕಾರ ಪ್ರೊ.ರಾಮಚಂದ್ರ ಗುಹಾ ಪ್ರತಿಪಾದಿಸಿದರು.

ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಸಿಎಫ್‌ಟಿಆರ್‌ಐನ ಪ.ಜಾ ಮತ್ತು ಪ.ವರ್ಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್‌ರವರ 133ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಹಿಂದೂ ಧರ್ಮದ ಅಸ್ಪೃಶ್ಯತೆ ವಿರುದ್ಧ ಈ ಇಬ್ಬರೂ ಮಹನೀಯರು ಹೋರಾಡಿದ್ದನ್ನು ನೆನಪಿನಲ್ಲಿಡಬೇಕು ಎಂದು ತಿಳಿಸಿದರು.

ಆಧುನಿಕ ಭಾರತದ ಇತಿಹಾಸದಲ್ಲಿ ಗಾಂಧಿಯಂತೆ ಯಾವೊಬ್ಬ ಸವರ್ಣೀಯ ಮೇಲ್ಜಾತಿಯ ಹಿಂದೂವೂ ಅಸ್ಪೃಶ್ಯತೆ, ಜಾತೀಯತೆ ವಿರುದ್ಧ ನಿರಂತರವಾಗಿ ಹೋರಾಡಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮ ಸಹ ಹೋರಾಟಗಾರರಲ್ಲಿರದ ಅಸ್ಪೃಶ್ಯತೆ ನಿವಾರಣೆಯ ಚಿಂತನೆ ಗಾಂಧಿಯವರಲ್ಲಿತ್ತು. ಸವರ್ಣೀಯರ ಮನಸ್ಸಿನಲ್ಲಿ ಪರಿವರ್ತನೆ ತರುವಲ್ಲಿ ಮಹಾತ್ಮ ಗಾಂಧಿ ಪ್ರಮುಖ ಪಾತ್ರ ವಹಿಸಿದರೆ, ಚಲನಶೀಲತೆ ಇಲ್ಲದ ದಲಿತರಲ್ಲಿ ಚಲನಶೀಲತೆ ತಂದಿದ್ದು ಡಾ.ಅಂಬೇಡ್ಕರ್. ಹಾಗಾಗಿ ಜಾತಿ ವಿನಾಶಕ್ಕೆ ಈ ಎರಡೂ ಮುಖ್ಯವಾದವು ಎಂಬುದನ್ನು ದೇವನೂರು ಮಹದೇವ ಹೇಳಿದ್ದಾರೆ ಎಂಬುದನ್ನು ಉಲ್ಲೇಖಿಸಿದರು.

ಅಸ್ಪೃಶ್ಯತೆ ಆಚರಣೆ ಹಾಗೂ ಜಾತಿ ಪದ್ಧತಿ ಹಿಂದೂ ಧರ್ಮದಲ್ಲಿನ ಶಾಪಗ್ರಸ್ಥ ಮನಸ್ಥಿತಿ ಎಂದಿದ್ದಕ್ಕೆ ಪುರಿಯ ಶಂಕರಾಚಾರ್ಯರು, ಗಾಂಧಿಯವರು ಹಿಂದೂ ವಲ್ಲವೆಂದು ಕರೆದಿದ್ದಲ್ಲದೇ ಅವರ ವಿರುದ್ಧ ಅಭಿಯಾನವನ್ನೇ ನಡೆಸಿದ್ದರು. ಆದರೆ, ಗಾಂಧಿ ಇದರಿಂದ ಹಿಂಜರಿಯಲಿಲ್ಲ. ಅಸ್ಪೃಶ್ಯತೆ ನಿವಾರಣೆಯಲ್ಲಿ ತೀವ್ರತೆ ಇರಲಿಲ್ಲ ಎಂದು ಗಾಂಧಿಯವರಿಗೆ ಅಂಬೇಡ್ಕರ್ ಹೇಳುತ್ತಾರೆ. ಅದಕ್ಕೊಂದು ಕಾರಣವಿದೆ ಗಾಂಧಿ ಮೇಲ್ಜಾತಿ ಹಿನ್ನೆಲೆಯುಳ್ಳ ಬಂದಿದ್ದರಿಂದ ಪರಿವರ್ತನೆ ನಿಧಾನವಾದರೂ ಅವರಲ್ಲಿ ಸ್ಪಷ್ಟತೆ ಇತ್ತು. ಅಸ್ಪೃಶ್ಯತೆ ಎಂಬುದು ಸಮಾಜದಲ್ಲಿನ ಶಾಪ. ಅದು ಅಳಿಯದೆ ಸ್ವರಾಜ್ಯ ಸಿಕ್ಕಿದರೂ ಅದಕ್ಕೆ ಅರ್ಥವಿರುವುದಿಲ್ಲ ಎಂದಿದ್ದರೆಂದು ತಿಳಿಸಿದರು.

ಮೌಲ್ಯಾತ್ಮಕ ಪ್ರಜ್ಞೆ ಮೂಡಬೇಕಿದೆ...

"ಭಾರತೀಯ ಹಿಂದೂ ಸಮಾಜದಲ್ಲಿ ಗಾಂಧಿ ಅವರಿಗಿದ್ದ ಜನಪ್ರಿಯತೆ, ಗಾಂಧಿ ತತ್ವಗಳನ್ನು ಒಪ್ಪಿಕೊಳ್ಳುವಂತೆ ಮಾಡಿತು. ನಾರಾಯಣ ಗುರು ಅನುಯಾಯಿಗಳು ನಡೆಸುತ್ತಿದ್ದ ದೇಗುಲ ಪ್ರವೇಶ ಚಳವಳಿಗಳಿಗೆ ಗಾಂಧಿ ಬೆಂಬಲಿಸಿದ್ದರು. ಅಸ್ಪೃಶ್ಯತೆಯನ್ನು ಸಂಪೂರ್ಣ ನಾಶಗೊಳಿಸದ ಹೊರತು ಹಿಂದೂ ಧರ್ಮವು ಉತ್ತಮ ಧರ್ಮವಾಗದೆಂದು ಗಾಂಧಿ ಪ್ರತಿಪಾದಿಸಿದರೆ, ಜಾತಿ ಪದ್ಧತಿ ನಾಶವಾಗದಿದ್ದರಿಂದ ದಲಿತರು ಬೌದ್ಧ ಧರ್ಮ ಆಯ್ದುಕೊಳ್ಳಬೇಕೆಂದು ಅಂಬೇಡ್ಕರ್ ಹೇಳಿದ್ದರು. ಈ ಇಬ್ಬರು ಮಹನೀಯರ ಬಗ್ಗೆಯೂ ಅವರ ಅನುಯಾಯಿಗಳಲ್ಲಿ ಮೌಲ್ಯಾತ್ಮಕ ಪ್ರಜ್ಞೆಯು ಮೂಡಬೇಕಿದೆ. ಗಾಂಧಿ ಕಾಲವಾಗಿ 75 ವರ್ಷವಾದರೆ, ಅಂಬೇಡ್ಕರ್ ನಿರ್ವಾಣವಾಗಿ 68 ವರ್ಷವಾಗಿದೆ. ಸತ್ಯಾಗ್ರಹ, ಧಾರ್ಮಿಕ ಸೌಹಾರ್ದತೆಯ ಪಾಠಗಳು ಹಾಗೂ ಅಂಬೇಡ್ಕರ್ ತತ್ವಾದರ್ಶಗಳನ್ನು ಪಾಲಿಸಬೇಕಿದೆ.

– ಪ್ರೊ.ರಾಮಚಂದ್ರ ಗುಹಾ, ಇತಿಹಾಸಕಾರ

"ದೇಶದಲ್ಲಿ ಮಹಿಳೆಯರ ಹಕ್ಕುಗಳಿಗಾಗಿ ಹೋರಾಟ ಮಾಡಿದ ಅಗ್ರಗಣ್ಯರಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮೊದಲಿಗರು. ಅವರು ನೀಡಿದ ಸಂವಿಧಾನದಿಂದ ಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯರು ಸಮಾನತೆಯಿಂದ ಬದುಕಲು, ಸಾಧಿಸಲು ಸಾಧ್ಯವಾಗಿದೆ. ದೇಶದ ಮಹಿಳೆಯರ ಸಬಲೀಕರಣಕ್ಕೆ ಅಂಬೇಡ್ಕರ್ ಕೊಡುಗೆ ಮಹತ್ವವಾದುದು.

– ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ನಿರ್ದೇಶಕಿ, ಸಿಎಫ್‌ಟಿಆರ್‌ಐ

ಮಾನವತೆಯ ಘನತೆ: ಮೈಸೂರು ವಿವಿ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಡಾ.ಎಸ್.ನರೇಂದ್ರ ಕುಮಾರ್ ಮಾತನಾಡಿ, ಜಾತಿಯ ಮೇಳರಿಮೆಯನ್ನು ಮೀರಿದ್ದು ಗಾಂಧೀಜಿಯಾದರೆ, ಜಾತಿಯ ಕೀಳರಿಮೆಯನ್ನು ಮೀರಿದವರು ಅಂಬೇಡ್ಕರ್. ಇಬ್ಬರು ಮಾನವತೆಯ ಘನತೆಯನ್ನು ಎತ್ತಿ ಹಿಡಿದರು. ಗಾಂಧಿ ಮತ್ತು ಅಂಬೇಡ್ಕರ್ ತಮ್ಮ ಅಂತಃಸಾಕ್ಷಿ ಮೂಲಕ ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯನ್ನು ಪ್ರಶ್ನೆ ಮಾಡಿದರು. ಈ ಪ್ರಶ್ನೆಯಿಂದ ಭಾರತದ ಅಸಂಖ್ಯಾತ ಮನಸ್ಸುಗಳು ಪರಿವರ್ತನೆಗೆ ಕಾರಣವಾದುದು ನಿಚ್ಚಳ ಎಂದರು.

ಗಾಂಧೀಜಿಯವರ ಮೊದಲ ಆದ್ಯತೆ ಭಾರತದ ಸ್ವಾತಂತ್ರ್ಯವಾದರೆ, ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿ ನಿರ್ಮೂಲನೆ ಅವರ ಹೋರಾಟದ ಒಂದು ಅಂಶವಾಗಿತ್ತು. ಆದರೆ, ಕೊನೆ ಕೊನೆಗೆ ಗಾಂಧೀಜಿಯವರು ಅಸ್ಪೃಶ್ಯತೆಯೊಂದಿಗೆ ಜಾತಿ ವಿನಾಶಕ್ಕೂ ಆದ್ಯತೆ ನೀಡಿದರು. ವಿಶೇಷವೆಂದರೆ ಅಂಬೇಡ್ಕರ್ ಅವರು, ಅಸ್ಪೃಶ್ಯತೆ ವಿಮೋಚನೆಯನ್ನು ಮೊದಲ ಆದ್ಯತೆಯಾಗಿ ಪರಿಗಣಿಸಿದ್ದರು. ಆ ನಂತರ ರೈತರ ಬಗ್ಗೆ, ಕಾರ್ಮಿಕರ ಬಗ್ಗೆ, ಮಹಿಳೆಯರ ಬಗ್ಗೆ ಹಾಗೂ ದೇಶದ ವಿಮೋಚನೆ ಬಗ್ಗೆ ಕಾಳಜಿ ವಹಿಸಿ ಹೋರಾಟಗಳನ್ನು ಮಾಡಿದರು. ಸ್ವಾತಂತ್ರ್ಯಗೊಂಡ ಭಾರತಕ್ಕೆ ಸಂವಿಧಾನ ರಚಿಸುವ ಮೂಲಕ ದೇಶದ ಸ್ವಾತಂತ್ರ್ಯ, ಸಮಾನತೆ, ಸೋದರತೆಯನ್ನು ಅನುಷ್ಠಾನಗೊಳಿಸಲು ಕಾರಣರಾದರು. ಈ ಎರಡು ಬಗೆಯ ಚಲನೆಯೂ ಮುಖ್ಯವಾದವು ಎಂದು ತಿಳಿಸಿದರು.

ಬಳಿಕ ಸಂಘದಲ್ಲಿರುವ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಿಎಫ್‌ಟಿಆರ್‌ಐ ಪ.ಜಾ ಮತ್ತು ಪ.ವರ್ಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಿವಸ್ವಾಮಿ ಸ್ವಾಗತ ಕೋರಿದರು. ಸಿಎಫ್‌ಟಿಆರ್‌ಐ ಪ.ಜಾ ಮತ್ತು ಪ.ವರ್ಗದ ಸಂಪರ್ಕಾಧಿಕಾರಿ ಡಾ.ಪ್ರಕಾಶ್ ಎಂ. ಹಲಾಮಿ ಮತ್ತಿತರರಿದ್ದರು.

ಮುಡಾದಿಂದ ಶೇ 50:50 ಅನುಪಾತದಡಿ ವಿತರಿಸಿರುವ ನಿವೇಶನಗಳಿಗೆ ಸಾಲ ನೀಡುವ ಮುನ್ನ ಪರಿಶೀಲಿಸುವಂತೆ ಬರೆದ

ರಘು ಕೌಟಿಲ್ಯ ಪತ್ರಕ್ಕೆ ಆರ್‌ಬಿಐ ಸ್ಪಂದನೆ

ಮೈಸೂರು.ಜು.29– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಿಂದ ಶೇ 50:50 ಅನುಪಾತದಡಿ ವಿತರಿಸಿರುವ ನಿವೇ



ಶನಗಳ ಸಂಬಂಧ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಅವರು ಬರೆದಿದ್ದ ಪತ್ರಕ್ಕೆ ಆರ್‌ಬಿಐ ಸ್ಪಂದಿಸಿದೆ.

ಮುಡಾದಿಂದ ಶೇ.50:50 ಅನುಪಾತದಲ್ಲಿ ಮತ್ತು ಬದಲಿ ನಿವೇಶನಗಳನ್ನು ವಿತರಿಸುವ ವಿಚಾರದಲ್ಲಿ ಭ್ರಷ್ಟಾಚಾರ ನಡೆದಿದ್ದು, ಇಂತಹ ನಿವೇಶನಗಳನ್ನು ಕಾನೂನು ಪ್ರಕಾರ ರದ್ದುಪಡಿಸುವ ಸಾಧ್ಯತೆ ಇದೆ. ಹೀಗಾಗಿ ಇಂತಹ ನಿವೇಶನಗಳಿಗೆ ಬ್ಯಾಂಕ್‌ಗಳಿಂದ ಸಾಲ ನೀಡುವ ಮುನ್ನ ಸಂಪೂರ್ಣವಾಗಿ ಪರಿಶೀಲಿಸಬೇಕು. ಒಂದು ವೇಳೆ ಕಾನೂನು ಪ್ರಕಾರ ನಿವೇಶನಗಳು ರದ್ದಾದರೆ, ಸದರಿ ನಿವೇಶನಗಳಿಗೆ ಸಾಲ ನೀಡಿರುವ ಬ್ಯಾಂಕ್‌ಗಳು ಸಂಕಷ್ಟಕ್ಕೆ ಸಿಲುಕುತ್ತವೆ. ಬ್ಯಾಂಕ್‌ಗಳಲ್ಲಿರುವ ಸಾರ್ವಜನಿಕರ ಹಣವನ್ನು ರಕ್ಷಿಸುವ ಉದ್ದೇಶದಿಂದಾಗಿ ಮುಡಾ ಶೇ.50:50 ಅನುಪಾತದಡಿ ವಿತರಿಸಿರುವ ನಿವೇಶನಗಳಿಗೆ ಸಾಲ ಕೊಡುವ ಮುನ್ನ ಸಂಪೂರ್ಣವಾಗಿ ಪರಿಶೀಲಿಸಬೇಕು ಎಂದು ಸಂಬಂಧಪಟ್ಟ ಬ್ಯಾಂಕ್‌ಗಳಿಗೆ ಸೂಚನೆ ನೀಡಬೇಕೆಂದು ರಘು ಕೌಟಿಲ್ಯ ಜುಲೈ 2ರಂದು ಆರ್‌ಬಿಐಗೆ ಪತ್ರ ಬರೆದಿದ್ದರು.

ಅವರ ಪತ್ರಕ್ಕೆ ಸ್ಪಂದಿಸಿರುವ ಆರ್‌ಬಿಐ, ತಮ್ಮ (ರಘು ಕೌಟಿಲ್ಯ) ಪತ್ರವನ್ನು ಕನ್ಸ್ಯೂಮರ್ ಎಜುಕೇಶನ್ ಅಂಡ್ ಪ್ರೊಟೆಕ್ಷನ್ ಡಿಪಾರ್ಟ್‌ಮೆಂಟ್‌ಗೆ ಸೂಕ್ತ ಕ್ರಮಕ್ಕಾಗಿ ರವಾನಿಸಲಾಗಿದೆ ಎಂದು ರಘು ಕೌಟಿಲ್ಯ ಅವರಿಗೆ ಪತ್ರ ರವಾನಿಸಿದೆ.

ಆಧಾರ್, ಪ್ಯಾನ್ ಲಿಂಕ್ ಮಾಡದಿರುವವರಿಗೆ ದುಬಾರಿ ತೆರಿಗೆ

ರಾಜ್ಯಸಭೆಯಲ್ಲಿ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಮಾಹಿತಿ



ನವದೆಹಲಿ, ಜುಲೈ 29: ಪ್ಯಾನ್ ನಂಬರ್ ಮತ್ತು ಆಧಾರ್ ನಂಬರ್ ಲಿಂಕ್ ಮಾಡದ ತೆರಿಗೆ ಪಾವತಿದಾರರು ಹೆಚ್ಚಿನ ಮೊತ್ತದ ತೆರಿಗೆ ಪಾತಿಸಬೇಕಾಗುತ್ತದೆ. ಮೇ 31ರೊಳಗೆ ಆಧಾರ್ ಜೊತೆ ಲಿಂಕ್ ಆಗದ ಪ್ಯಾನ್ ನಂಬರ್ ನಿಷ್ಕ್ರಿಯಗೊಂಡಿರುತ್ತದೆ. ಇಂಥ ಪ್ಯಾನ್ ನಂಬರ್ ಬಳಸಿದರೂ ಬಳಸದೇ ಇದ್ದರೂ ಎರಡೂ ಒಂದೆ. ಪ್ಯಾನ್ ಇಲ್ಲದೇ ಐಟಿಆರ್ ಸಲ್ಲಿಕೆ ಮಾಡಿದರೆ ಹೆಚ್ಚಿನ ತೆರಿಗೆ ಅನ್ವಯ ಆಗುತ್ತದೆ. 2023ರ ಮಾರ್ಚ್ 28, ಹಾಗೂ 2024ರ ಏಪ್ರಿಲ್ 23ರಂದು ಸಿಬಿಡಿಟಿ ಈ ಸಂಬಂಧ ಒಂದು ಸುತ್ತೋಲೆ ಹೊರಡಿಸಿತ್ತು. ಅದರ ಪ್ರಕಾರ ಸೆಕ್ಷನ್ 206ಎಎ ಅಡಿಯಲ್ಲಿ ಇನಾಪರೇಟಿವ್ ಪ್ಯಾನ್ ಬಳಸಿದ ತೆರಿಗೆ ಪಾವತಿದಾರರಿಗೆ ಟ್ಯಾಕ್ಸ್ ಡಿಮ್ಯಾಂಡ್ ನೋಟೀಸ್ ಕೊಡಲಾಗುತ್ತಿದೆ. ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಲೋಕಸಭೆಯಲ್ಲಿ ಈ ವಿಷಯವನ್ನು ತಿಳಿಸಿದ್ದಾರೆ. ವರ್ಷಕ್ಕೆ 2.5 ಲಕ್ಷ ರೂ ಒಳಗೆ ಸಂಬಳ ಇರುವವರಿಗೆ ವಿನಾಯಿತಿ ಇದೆ. ಅವರ ಪ್ಯಾನ್ ನಿಷ್ಕ್ರಿಯಗೊಂಡಿದ್ದರೂ ಅವರನ್ನು ಟ್ಯಾಕ್ಸ್ ಡಿಮ್ಯಾಂಡ್‌ಗೆ ಪರಿಗಣಿಸಲಾಗುವುದಿಲ್ಲ. ಆದರೆ, ವಿನಾಯಿತಿ ಮಿತಿಗಿಂತ ಹೆಚ್ಚಿನ ಆದಾಯ ಇರುವವರು ಪ್ಯಾನ್ ಮತ್ತು ಆಧಾರ್ ಲಿಂಕ್ ಮಾಡದೇ ಇದ್ದರೆ ಕ್ರಮ ಎದುರಿಸಬೇಕಾಗುತ್ತದೆ.

ನಿಷ್ಕ್ರಿಯ ಪ್ಯಾನ್ ಇದ್ದರೆ ದುಪ್ಪಟ್ಟು ತೆರಿಗೆ: ಇನಾಪರೇಟಿವ್ ಪ್ಯಾನ್, ಅಥವಾ ಆಧಾರ್‌ಗೆ ಲಿಂಕ್ ಆಗದ ಪ್ಯಾನ್ ಅನ್ನು ಯಾರಾದರೂ ಬಳಸುತ್ತಿದ್ದರೆ ಅವರಿಗೆ ಶೇ. 20ರಷ್ಟು ಟಿಡಿಎಸ್ ತೆರಿಗೆ ಮುರಿದುಕೊಳ್ಳಲಾಗುತ್ತದೆ. ಈ ನಿಟ್ಟಿನಲ್ಲಿ ಅಂಥ ತೆರಿಗೆ ಪಾವತಿದಾರರಿಗೆ ಟ್ಯಾಕ್ಸ್ ಡಿಮ್ಯಾಂಡ್ ಜಾರಿ ಮಾಡಲಾಗುತ್ತಿದೆ ಎಂದು ತೆರಿಗೆ ತಜ್ಞರೊಬ್ಬರು ಸ್ಪಷ್ಟಪಡಿಸಿದ್ದಾರೆ. 2024ರ ಮಾರ್ಚ್ 31ರವರೆಗೆ ಪ್ಯಾನ್ ಮತ್ತು ಆಧಾರ್ ಲಿಂಕ್ ಮಾಡಲು ಗಡುವು ಕೊಡಲಾಗಿತ್ತು. ಲಿಂಕ್ ಆಗದ ಪ್ಯಾನ್ ಇನಾಪರೇಟಿವ್ ಆಗಿತ್ತು. ಮೇ 31ಕ್ಕೆ ಮತ್ತೊಂದು ಗಡುವು ಕೊಡಲಾಗಿತ್ತು.

ಅಷ್ಟಾಗಿಯೂ ಆಧಾರ್ ಪ್ಯಾನ್ ಲಿಂಕ್ ಮಾಡದವರು ಈಗ ಹೆಚ್ಚುವರಿ ತೆರಿಗೆ ಕಟ್ಟುವುದು ಅನಿವಾರ್ಯವಾಗಿದೆ.

ಬೆಂಗಳೂರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ರಾಜ್ಯಸಭೆಯಲ್ಲಿ ದೇವೇಗೌಡರ ಅಬ್ಬರ



ದೆಹಲಿ, ಜುಲೈ 29: ಭದ್ರಾ ಮೇಲ್ದಂಡೆ ಯೋಜನೆ ಕೇಂದ್ರ ಒಪ್ಪಿಕೊಂಡಿದೆ. ಬೆಂಗಳೂರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹೇಳಿದ್ದಾರೆ. ರಾಜ್ಯಸಭೆಯಲ್ಲಿ ಮಾತನಾಡಿದ ಅವರು, ನಾನು ಸಾಕಷ್ಟು ನೀರಿನ ವ್ಯಾಜ್ಯ ಬಗೆಹರಿಸಿದ್ದೇನೆ. ಮುಂದಿನ ಬಜೆಟ್ ವೇಳೆಗೆ ಇರ್ತೀನೋ ಇಲ್ವೋ ಗೊತ್ತಿಲ್ಲ. ಹಾಗಾಗಿ ಬೆಂಗಳೂರು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿದ್ದಾರೆ.

ಬೆಂಗಳೂರು ನಗರದಲ್ಲಿ ಕುಡಿಯುವ ನೀರು ಸಮಸ್ಯೆ ಇದೆ. ನಾನು ಯಾರನ್ನು ಟೀಕಿಸಲು ಹೋಗುವುದಿಲ್ಲ. ಹಣಕಾಸು ಸಚಿವರು ಕರ್ನಾಟಕದಿಂದ ಆಯ್ಕೆ ಆಗಿದ್ದಾರೆ. ಜನರು ಕುಡಿಯುವ ನೀರಿಲ್ಲದೇ ಸಂಕಷ್ಟದಲ್ಲಿದ್ದಾರೆ ಎಂದಿದ್ದಾರೆ.

ಜನರು ಎನ್‌ಡಿಎಗೆ ಮತ ಹಾಕಿದ್ದು: ತಮಿಳುನಾಡಿಗೆ ನೀರು ಹರಿಸುವಂತೆ ಆದೇಶಿಸಲಾಗಿತ್ತು. ಈಗ ಮಳೆಯಿಂದ ಎಲ್ಲವೂ ಸುಗಮವಾಗಿದೆ. ಒಂದು ವೇಳೆ ಮಳೆ ಬರದಿದ್ದರೆ ಪರಿಸ್ಥಿತಿ ಏನು ಹೇಳಿ ಎಂದು ಪ್ರಶ್ನಿಸಿದ್ದಾರೆ. ಹಳೇ ಮೈಸೂರು ಭಾಗ, ಬೆಂಗಳೂರಿಗೆ ಇದೇ ಆಧಾರ. ಇದಕ್ಕಾಗಿ ಜನರು ಎನ್‌ಡಿಎಗೆ ಮತವನ್ನು ಹಾಕಿದ್ದಾರೆ ಎಂದು ಹೇಳಿದ್ದಾರೆ.

ನಾನು ಕೃಷಿ, ನಿರುದ್ಯೋಗ ಸಮಸ್ಯೆ ಬಗ್ಗೆ ಮಾತಾಡುತ್ತೇನೆ. ಬದ್ಧತೆ ಇರುವವರನ್ನು ಕೃಷಿ ಸಚಿವರನ್ನು ಮಾಡಿದ್ದಾರೆ. ಅನುಭವ ಇರುವ ತಂಡ ಆಯ್ಕೆ ಮಾಡಿಕೊಂಡಿದ್ದಾರೆ. ಸಿಎಂ ಆಗಿದ್ದಾಗ ಮೋದಿ ಸಾಕಷ್ಟು ಅಭಿವೃದ್ಧಿ ಮಾಡಿದ್ದಾರೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಗುಜರಾತ್ ಮಾದರಿ ಎಂದು ಪ್ರಧಾನಿ ಮೋದಿಯನ್ನು ಹೆಚ್.ಡಿ. ದೇವೇಗೌಡರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕೇಂದ್ರ ಬಜೆಟ್ ಹೃದಯಪೂರ್ವಕವಾಗಿ ಬೆಂಬಲಿಸುತ್ತೇನೆ. 1991ರಲ್ಲಿ ಸಂಸತ್‌ಗೆ ಬಂದೆ, ಈಗ ನನಗೆ 92 ವರ್ಷ. ಮುಂದಿನ ಬಜೆಟ್ ಬಗ್ಗೆ ಮಾತಾಡ್ತೇನೋ ಇಲ್ವೋ ಗೊತ್ತಿಲ್ಲ. ನಾನು ಎನ್‌ಡಿಎ ಭಾಗವಾಗಿದ್ದೇನೆ. ಅದಕ್ಕಾಗಿ ಧನ್ಯವಾದ ಎಂದಿದ್ದಾರೆ.

ಕೃಷಿಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಒತ್ತು ನೀಡಿದೆ. ಹಂಚಿಕೆ ಸರಪಳಿ ಬಲಿಷ್ಠಗೊಳಿಸಲು ಕ್ರಮ ಕೈಗೊಂಡಿದೆ. ಉದ್ಯೋಗ ಹೆಚ್ಚಿಸಲು NDA ಸರ್ಕಾರ ಆದ್ಯತೆ ನೀಡಿದೆ ಎಂದು ತಿಳಿಸಿದರು. ಮೈತ್ರಿ ಸರ್ಕಾರವನ್ನು ನಡೆಸುವುದು ತುಂಬಾ ಕಷ್ಟ, ನಾನು ಮೈತ್ರಿ ಸರ್ಕಾರವನ್ನು ನಡೆಸಿದ್ದೇನೆ. ಆದರೆ ಮೋದಿ ಎಲ್ಲೂ ಹೊಂದಾಣಿಕೆ ಮಾಡಿಕೊಳ್ಳದೇ ಜವಾಬ್ದಾರಿ ನಿಭಾಯಿಸಿದ್ದಾರೆ ಎಂದು ಹೇಳಿದ್ದಾರೆ.

ಸ್ಪೀಕರ್ ಆಯ್ಕೆಯಿಂದ ಹಿಡಿದು ಪ್ರಮುಖ ನಿರ್ಧಾರಗಳಲ್ಲಿ, ಯಾರು ಆಕ್ಷೇಪ ವ್ಯಕ್ತಪಡಿಸಿಲ್ಲ. ಕರ್ನಾಟಕದಲ್ಲಿ ಎರಡು ಸೀಟು ಮಾತ್ರ ನಮ್ಮ ಶಕ್ತಿ, ಆದರೂ ಪರಿಗಣಿಸಿ 1 ಸಂಪುಟ ದರ್ಜೆ ಸ್ಥಾನ ನೀಡಿದ್ದಾರೆ ಎಂದಿದ್ದಾರೆ.

ಮನೆ ಊಟಕ್ಕೆ ಅನುಮತಿ ಕೋರಿದ್ದ ಅರ್ಜಿ ಹಿಂಪಡೆದ ನಟ ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಹಿನ್ನಲೆಯಲ್ಲಿ ಜೈಲುಪಾಲಾಗಿರುವ ನಟ ದರ್ಶನ್ ಇದೀಗ ಮನೆಯೂಟ, ಹಾಸಿಗೆ ಮತ್ತು ಪುಸ್ತಕ ಪೂರೈಕೆಗೆ ಅನುಮತಿಸಲು ಜೈಲಧಿಕಾರಿಗೆ ನಿರ್ದೇಶನ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹಿಂಪಡೆದಿದ್ದಾರೆ.



ನಟ ದರ್ಶನ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು, ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಈ ವೇಳೆ ದರ್ಶನ್ ಪರ ಹಾಜರಾಗಿದ್ದ ಹಿರಿಯ ವಕೀಲ ಪ್ರಭುಲಿಂಗ ನಾವದಗಿ ಅವರು, ಹೈಕೋರ್ಟ್ ನಿರ್ದೇಶನದಂತೆ ಮನೆ ಊಟ ಪೂರೈಸಲು ಜೈಲು ಅಧಿಕಾರಿಗೆ ನಿರ್ದೇಶನ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ವಿಚಾರಣಾಧೀನ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ತಿರಸ್ಕರಿಸಿದೆ. ಹೀಗಾಗಿ ಹೈಕೋರ್ಟ್‌ನಲ್ಲಿ ಅರ್ಜಿ ಹಿಂಪಡೆಯಲು ಮೆಮೊ ಸಲ್ಲಿಸಿದ್ದೇವೆ. ಹೊಸ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿ, ಈ ಅರ್ಜಿ ಹಿಂಪಡೆಯಲು ಅನುಮತಿಸಬೇಕು ಎಂದು ಕೋರಿದರು. ಇದನ್ನು ಪುರಸ್ಕರಿಸಿದ ಪೀಠವು ಅರ್ಜಿ ಹಿಂಪಡೆಯಲು ಅನುಮತಿ ನೀಡಿದೆ.

ಹೈಕೋರ್ಟ್ ನಲ್ಲಿ ನಡೆದ ವಿಚಾರಣೆ ವೇಳೆ, ಮನೆ ಊಟ ಪಡೆಯಲು ಇಷ್ಟೆಲ್ಲಾ ಮಾಡಬೇಕಾ, ಇದರಲ್ಲೇನಿದೆ, ಶುಚಿಯಾದ ಆಹಾರ ಪಡೆಯುವುದು ಮೂಲಭೂತ ಹಕ್ಕು. ಗುಜರಾತ್ ಹೈಕೋರ್ಟ್‌ನಲ್ಲಿ ಪ್ರಕರಣವೊಂದರಲ್ಲಿ ಅಡ್ವೋಕೇಟ್ ಜನರಲ್ ಮನೆ ಊಟ ಪಡೆಯುವುದಕ್ಕೆ ಸಹಮತಿಸಿದ್ದಾರೆ ಎಂದು ನ್ಯಾಯಪೀಠ ತಿಳಿಸಿತ್ತು. ಇದಕ್ಕೆ ವಿಶೇಷ ಸರ್ಕಾರಿ ಅಭಿಯೋಜಕ ಪಿ ಪ್ರಸನ್ನ ಕುಮಾರ್ ಅವರು, ಮನೆಯೂಟಕ್ಕೆ ನಾವು ವಿರೋಧಿಸುತ್ತಿಲ್ಲ. ಕಾನೂನಿನಲ್ಲಿ ಅವಕಾಶವಿದ್ದರೆ ಕೊಡಬಹುದು ಎಂದಷ್ಟೇ ಹೇಳಿದ್ದೇವೆ ಎಂದು ಸಮಜಾಯಿಷಿ ನೀಡಿದರು.

ಈ ಹಿಂದೆ ಹೈಕೋರ್ಟ್ ನಿರ್ದೇಶನದಂತೆ ದರ್ಶನ್ ಅವರು ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದರು. ಇದನ್ನು ತಿರಸ್ಕರಿಸಿದ್ದ ನ್ಯಾಯಾಲಯವು, ಕರ್ನಾಟಕ ಕಾರಾಗೃಹಗಳು ಮತ್ತು ತಿದ್ದುಪಡಿ ಸೇವೆಗಳ ಕೈಪಿಡಿ–2010ರ ಅಧಿನಿಯಮ 728ರ ಪ್ರಕಾರ ಕೊಲೆ ಆರೋಪ ಎದುರಿಸುತ್ತಿರುವವರನ್ನು ಹೊರತುಪಡಿಸಿ ನ್ಯಾಯಾಂಗ ಬಂಧನದಲ್ಲಿರುವ ಇತರೆ ವಿಚಾರಣಾಧೀನ ಕೈದಿಗಳು ಸ್ವಂತ ಖರ್ಚಿನಲ್ಲಿ ಬಟ್ಟೆ, ಹಾಸಿಗೆ, ಚಪ್ಪಲಿ, ಆಹಾರ, ಸ್ಪೂನ್, ತಟ್ಟೆ ಹಾಗೂ ಕಪ್ ಇನ್ನಿತರ ವಸ್ತುಗಳನ್ನು ಪಡೆಯುವ ಅವಕಾಶವಿರುತ್ತದೆ. ಅದರಂತೆ ಕೊಲೆ ಆರೋಪ ಎದುರಿಸುತ್ತಿರುವ ದರ್ಶನ್ ಮನೆಯಿಂದ ಊಟ, ಬಟ್ಟೆ ಹಾಗೂ ಹಾಸಿಗೆ ಸೌಲಭ್ಯ ಪಡೆಯಲು ಅರ್ಹರಾಗಿಲ್ಲ ಎಂದು ಹೇಳಿತ್ತು.

ಮುಖ್ಯಮಂತ್ರಿಗಳಿಂದ ರೈತರಿಗೆ ಸಹಾಯಧನದ ಬಿತ್ತನೆ ಬೀಜ ವಿತರಣೆ

ಮೈಸೂರು.ಜು.29– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯ ಮಂತ್ರಿ ಡಿ.ಕೆ ಶಿವಕುಮಾರ್ ಕೃಷಿ ಇಲಾಖೆಯ ಮುಂಖಾಂತರ ರೈತರಿಗೆ ಸಹಾಯಧನದಲ್ಲಿ ವಿತರಿಸುವ ಬಿತ್ತನೆ ಬೀಜವನ್ನು ಸಾಂಕೇತಿಕವಾಗಿ ಕೆ–ಕಿಸಾನ್ ತಂತ್ರಾಂಶದ ಮುಖಾಂತರ ಮೈಸೂರು ಅಥಿತಿ ಗೃಹದಲ್ಲಿ ವಿತರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಸೇರಿದಂತೆ ಮೈಸೂರು ಜಿಲ್ಲೆಯ ವಿಧಾನಸಭಾ ಸದಸ್ಯರು ಉಪಸ್ಥಿತರಿದ್ದರು.


ಕರ್ನಾಟಕದಲ್ಲಿ ಹುಲಿ ಸಂಖ್ಯೆ ದುಪ್ಪಟ್ಟಾಗಿಸುವ ಅವಕಾಶವಿದೆ

ಹುಲಿ ಯೋಜನೆ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಅಭಿಮತ

ಮೈಸೂರು, ಜು.29(ಎಸ್‌ಬಿಡಿ)– ರಾಜ್ಯದಲ್ಲಿ ಲಭ್ಯವಿರುವ ಅರಣ್ಯ ಪ್ರದೇಶದಲ್ಲೇ ಹುಲಿಗಳ ಸಂಖ್ಯೆಯನ್ನು ದುಪ್ಪಟ್ಟಾಗಿಸಲು ಅವಕಾಶವಿದೆ ಎಂದು ಕರ್ನಾಟಕ ಹುಲಿ ಯೋಜನೆ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಹೇಳಿದರು.

ಮೈಸೂರು ಚಾಮರಾಜೇಂದ್ರ ಮೃಗಾಲಯದಲ್ಲಿ ಸೋಮವಾರ ವಿಶ್ವ ಹುಲಿ ದಿನಾಚರಣೆಯಲ್ಲಿ ಪ್ರಧಾನ ಭಾಷಣ ಮಾಡಿ, ಸದ್ಯ ಬಂಡೀಪುರ, ನಾಗರಹೊಳೆ, ಬಿಆರ್‌ಟಿ, ಭದ್ರಾ, ಅಣಶಿ–ದಾಂಡೇಲಿ ಸೇರಿ ಐದು ಹುಲಿಧಾಮಗಳಿದ್ದು, ಕುದುರೆಮುಖ ಹಾಗೂ ಮಲೈಮಹಾದೇಶ್ವರ ಬೆಟ್ಟ ಹುಲಿ ಯೋಜನೆಗಳು ಪ್ರಸ್ತಾವನೆಯಲ್ಲಿವೆ. ಎರಡು ವರ್ಷದ ಹಿಂದಿನ ಹುಲಿ ಗಣತಿ ಪ್ರಕಾರ ಕರ್ನಾಟಕದಲ್ಲಿ 563 ಹುಲಿಗಳಿವೆ. ನಾಲ್ಕು ವರ್ಷದ ಅಂತರದಲ್ಲಿ 39 ಹುಲಿಗಳು ಮಾತ್ರ ಹೆಚ್ಚಾಗಿವೆ. ಆದರೆ ಘೋಷಿತ ಹುಲಿ ಪ್ರದೇಶಗಳ ಜೊತೆಗೆ ಲಭ್ಯ ಇರುವ ಅರಣ್ಯ ಪ್ರದೇಶಗಳನ್ನೇ ವ್ಯವಸ್ಥಿತವಾಗಿ ಬಳಕೆ ಮಾಡಿಕೊಂಡರೆ ಹುಲಿಗಳ ಸಂಖ್ಯೆಯನ್ನು 1300ಕ್ಕೆ ಹೆಚ್ಚಿಸುವ ಅವಕಾಶವಿದೆ ಎಂದರು.

ಈ ನಿಟ್ಟಿನಲ್ಲಿ ನಾಲ್ಕು ಘಟಕಗಳನ್ನು ರಾಜ್ಯದಲ್ಲಿ ರೂಪಿಸಿ, ಆ ಮೂಲಕ ರಾಜ್ಯದ 15ಕ್ಕೂ ಹೆಚ್ಚು ಜಿಲ್ಲೆಗಳ ಅರಣ್ಯದಲ್ಲಿ ಹುಲಿ ಸಂರಕ್ಷಣೆ ಮಾಡಬಹುದು.



ಮೈಸೂರು ಮೃಗಾಲಯದಲ್ಲಿ ಸೋಮವಾರ ವಿಶ್ವ ಹುಲಿ ದಿನಾಚರಣೆಯಲ್ಲಿ ಕರ್ನಾಟಕ ಹುಲಿ ಯೋಜನೆ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್ ಮಾತನಾಡಿದರು.

ಇದರೊಂದಿಗೆ ಅರಣ್ಯವನ್ನು ಮತ್ತಷ್ಟು ಸುಸ್ಥಿರಗೊಳಿಸಲು ಅವಕಾಶವಿದೆ. ಭಾರತದಲ್ಲಿ ಒಟ್ಟು 3682 ಹುಲಿಗಳಿದ್ದು, ಇದರಲ್ಲಿ ಕರ್ನಾಟಕದ ಕೊಡುಗೆ ಶೇ.15ರಷ್ಟಿದೆ. ಇದನ್ನು ಮತ್ತಷ್ಟು ವಿಸ್ತರಿಸುವ ಅವಕಾಶಗಳು ವಿಫುಲವಾಗಿವೆ. ಇನ್ನೂ ಹಲವೆಡೆ ಹುಲಿ ಕಾರಿಡಾರ್‌ಗಳು ಬೇಕಿವೆ. ಬಂಡೀಪುರದಿಂದ ಕಾವೇರಿ ವನ್ಯಧಾಮ ಹಾಗೂ ನಾಗರಹೊಳೆಯಿಂದ ಭದ್ರಾಗೆ ಹುಲಿ ಸಂಚರಿಸಿರುವ ಉದಾಹರಣೆ ಇದೆ. ಆದ್ದರಿಂದ ಭದ್ರಾದಿಂದ ಕಾರವಾರ ಹಾಗೂ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೂ ಹುಲಿಗಳು ಸಂಚರಿಸುವ ಕಾರಿಡಾರ್ ರೂಪುಗೊಳ್ಳಬೇಕಿದೆ ಎಂದು ತಿಳಿಸಿದರು.

ಪಶ್ಚಿಮ ಘಟ್ಟಗಳ ನೀಲಗಿರಿ ಜೀವವೈವಿಧ್ಯ ತಾಣದಲ್ಲಿಯೇ ಸುಮಾರು 800 ಹುಲಿಗಳಿವೆ. ಇದರಲ್ಲಿ ಕರ್ನಾಟಕ ವ್ಯಾಪ್ತಿಯ 334, ತಮಿಳುನಾಡು 119 ಹಾಗೂ ಕೇರಳದ 80 ಹುಲಿಗಳಿವೆ ಹೀಗೆ ರಾಜ್ಯ ವ್ಯಾಪ್ತಿಯಲ್ಲೂ ಯೂನಿಟ್‌ಗಳ ರಚನೆ ಮಾಡಿಕೊಳ್ಳಬಹುದು. ಶತಮಾನದ ಹಿಂದೆ ದೇಶದಲ್ಲಿ ಲಕ್ಷ ಹುಲಿಗಳಿದ್ದವು ಎನ್ನಲಾಗಿದೆ. ಸ್ವಾತಂತ್ರ್ಯದ ಹೊತ್ತಿಗೆ 40 ಸಾವಿರಕ್ಕಿಳಿಯಿತು. ನಂತರದ ಮೂರು ದಶಕದಲ್ಲಿ 1872ಕ್ಕೆ ಕುಸಿಯಿತು. ಈ ಹಿನ್ನೆಲೆಯಲ್ಲೇ 1972ರಲ್ಲಿ ವನ್ಯಜೀವಿಗಳ ಸಂರಕ್ಷಣಾ ಕಾಯ್ದೆ ಜಾರಿಯಾಯಿತು. ನಂತರ ಹುಲಿ ಯೋಜನೆಗಳನ್ನು ಘೋಷಣೆ ಮಾಡಿದ್ದರಿಂದ ಐದು ದಶಕದಲ್ಲಿ ಹುಲಿಗಳ ಸಂಖ್ಯೆ ಸುಮಾರು 3682ಕ್ಕೆ ಹೆಚ್ಚಿದೆ ಎಂದರು.

ಎರಡು ದಶಕದಲ್ಲಿ ಕ್ಯಾಮರಾ ಟ್ರಾಪ್ ಸೇರಿದಂತೆ ಹಲವು ತಂತ್ರಜ್ಞಾನ ಬಳಕೆ, ಸಂರಕ್ಷಣಾ ನೀತಿ ಅನುಷ್ಠಾನದಿಂದ ಈಗ ಹುಲಿ ಸಂಖ್ಯೆ ಸುಧಾರಿಸಿದ್ದು, ಈಗಿನಿಂದಲೇ ಇನ್ನಷ್ಟು ಚಟುವಟಿಕೆಗೆ ಯೋಜನೆಗಳ ಅಗತ್ಯವಿದೆ. ಹುಲಿ ಯೋಜನೆಗಳನ್ನು ಉನ್ನತೀಕರಣಗೊಳಿಸುವಾಗ ತೊಡಕುಗಳು ಸಾಮಾನ್ಯ. ಆದರೆ ಸಮುದಾಯ ಹಾಗೂ ಸ್ಥಳೀಯರ ಸಹಯೋಗದೊಂದಿಗೆ ಯೋಜನೆಗಳನ್ನು ರೂಪಿಸಬೇಕು. ವಿಶೇಷವಾಗಿ ಗಿರಿಜನರ ಸಹಕಾರದಿಂದ ಯೋಜನೆಗಳು ದೀರ್ಘಕಾಲೀನ ಯಶಸ್ಸು ಸಾಧ್ಯವಿದೆ. ಅರಣ್ಯದ ಸಮೀಪದಲ್ಲೇ ಇರುವ ಬಹಳಷ್ಟು ಜನ ಅಲ್ಲಿನ ವಿಶೇಷತೆಗಳನ್ನು ತಿಳಿದಿರುವುದಿಲ್ಲ. ಹಾಗಾಗಿ ಹುಲಿ ಯೋಜನೆ ಪ್ರದೇಶಗಳಲ್ಲಿ ಔಟ್ ರೀಚ್ ಕಾರ್ಯಕ್ರಮಗಳನ್ನು ರೂಪಿಸಬೇಕು. ಬಂಡೀಪುರದಲ್ಲಿ ಯಶಸ್ವಿಯಾಗಿರುವ 'ಯುವ ಮಿತ್ರ' ಮಾದರಿ ಕಾರ್ಯಕ್ರಮಗಳಿಂದ ಸಾಕಷ್ಟು ಉಪಯೋಗವಿದೆ ಎಂದು ತಿಳಿಸಿದರು.

ಹುಲಿ ಯೋಜನೆ ಪ್ರದೇಶಗಳಿಗೆ ನೀಡುತ್ತಿದ್ದ ಅನುದಾನ ಕಡಿತವಾಗಿರುವುದರಿಂದ ನಾವೇ ಆರ್ಥಿಕ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಈಗಾಗಲೇ ಇರುವ ಪರಿಸರ ಪ್ರವಾಸೋದ್ಯಮ ಚಟುವಟಿಕೆಗಳನ್ನು ಇನ್ನಷ್ಟು ಸುಸ್ಥಿರ ಹಾಗೂ ಜನಸ್ನೇಹಿಯಾಗಿ ರೂಪಿಸುವ ಅಗತ್ಯವಿದೆ. ಇದಕ್ಕೂ ಹುಲಿ ಯೋಜನೆ ಪ್ರದೇಶಗಳಲ್ಲಿ ಅವಕಾಶವಿದೆ. ಕರ್ನಾಟಕ ಹುಲಿ ಯೋಜನೆಯ ವಿಷನ್ ಡಾಕ್ಯುಮೆಂಟ್ ತರುವ ಚಿಂತನೆಯಿದೆ. ಹುಲಿ ಸಂರಕ್ಷಣೆ ಎಂದರೆ ಹುಲಿ ಅಳಿವು ಉಳಿವಿನ ಪ್ರಶ್ನೆ ಮಾತ್ರವಲ್ಲ. ಹುಲಿ ಸಂರಕ್ಷಣೆ ಯೋಜನೆಯಿಂದ ಕಾಡು ಸಂರಕ್ಷಣೆಯ ಮಹತ್ವದ ಉದ್ದೇಶವಿದೆ. ಜೊತೆಗೆ ಆನೆ, ಚಿರತೆ, ಕಾಡೆಮ್ಮೆ, ಕಡವೆ ಇನ್ನಿತರ ಹಲವು ಪ್ರಾಣಿಗಳ ರಕ್ಷಣೆಯೂ ಮುಖ್ಯವಾಗಿದೆ. ಇದರಲ್ಲಿ ಜೀವವೈವಿಧ್ಯತೆಯ ರಕ್ಷಣೆ ಅಡಗಿರುವುದರಿಂದ ಹುಲಿಯನ್ನು ಅರಣ್ಯ ರಕ್ಷಣೆಯ ರಾಯಬಾರಿ ಎಂದರು.

ನಕ್ಕರೆ ಅದೇ ಸ್ವರ್ಗ

ಗಂಡ : ನಿನ್ನೆ ರಾತ್ರಿ ನಿದ್ದೆ ಮಾಡ್ತಾ ಯೋಚನೆ ಮಾಡ್ತಿದ್ದೆ ನಾಳೆಯಿಂದ ದಿನಾ ಬೆಳಗ್ಗೆ ಐದು ಗಂಟೆಗೆ ಎದ್ದೇಳಬೇಕು ಅಂತಾ!

ಹೆಂಡತಿ : ಆಮೇಲೆ?

ಗಂಡ : ಆಮೇಲೆ ವಿಚಾರ ಮಾಡಿದೆ. ನಿದ್ದೆಯಲ್ಲಿ ಯಾವುದೇ ದೊಡ್ಡ ನಿರ್ಣಯ ತೆಗೊಳ್ಳೋದು ಒಳ್ಳೆಯದಲ್ಲ ಅಂತಾ!

ಮೈಸೂರು ಮಿತ್ರ

ಮಂಗಳವಾರ, 30 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತವಾಹಿನಿ..........

ಬದುಕು ನಿಧಾನವಾಗಿ ಪಾಠ ಕಲಿಸುತ್ತೆ. ನಿನ್ನತನವನ್ನು ಅಡವಿಟ್ಟು ಯಾರನ್ನು ನೀನು ಪ್ರೀತಿಸುವ ಅಗತ್ಯವಿಲ್ಲ. ಏಕೆಂದರೆ, ಇಲ್ಲಿ ಯಾರು ಯಾರಿಗೂ ಅನಿವಾರ್ಯರಲ್ಲ !

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸ್ವಾರ್ಥ ಉಳಿಸಿದವ ಪಾಪಾತ್ಮ, ನಿಸ್ವಾರ್ಥ ಗಳಿಸಿದವ ಪುಣ್ಯಾತ್ಮ.

ನಿಮ್ಮ ಪತ್ರಗಳು

ಚರಂಡಿ ಹೂಳು ತೆಗೆಸಿ ಸ್ವಚ್ಛಗೊಳಿಸಿ



ಮಾನ್ಯರೆ,

ಮೈಸೂರಿನ ಜೆ.ಪಿ.ನಗರ ಬಡಾವಣೆ, 86, 17ನೇ ಮುಖ್ಯ ರಸ್ತೆ, 3ನೇ ಹಂತ, 3ನೇ ತಿರುವು, ಇ ಬ್ಲಾಕ್, ಸಿ ವಲಯ, ಸಾಯಿಬಾಬಾ ದೇವಸ್ಥಾನದ ಹಿಂಭಾಗದ ರಸ್ತೆಯಲ್ಲಿ ನಾನು ವಾಸಿಸುತ್ತಿದ್ದೇವೆ. ಮನೆಯ ಪಕ್ಕದಲ್ಲಿರುವ ಚರಂಡಿಯಲ್ಲಿ ಹೂಳು ಮತ್ತು ಕಸ ತುಂಬಿಕೊಂಡಿದೆ. ಇದರಿಂದಾಗಿ ಮಳೆಯ ನೀರು ಸರಾಗವಾಗಿ ಹರಿದುಹೋಗಲು ಸಾಧ್ಯವಾಗದೆ ಅಕ್ಕಪಕ್ಕದ ಮನೆಗಳಿಗೆ ನುಗ್ಗುತ್ತದೆ. ಈ ಬಗ್ಗೆ ನಗರಪಾಲಿಕೆಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಆದ ಕಾರಣ ಈಗಲಾದರೂ ಸಂಬಂಧಪಟ್ಟವರು ಇತ್ತ ಗಮನಹರಿಸಿ ಚರಂಡಿಯ ಹೂಳು ಮತ್ತು ಕಸ ತೆಗೆಸಿ ನೀರು ಸರಾಗವಾಗಿ ಹರಿದುಹೋಗಲು ವ್ಯವಸ್ಥೆ ಮಾಡಬೇಕೆಂದು ಈ ಮೂಲಕ ಮನವಿ.

– ಸತ್ಯನಾರಾಯಣರಾಜೇ ಅರಸ್ ಹಾಗೂ ಇತರರು, ಜೆ.ಪಿ.ನಗರ, ಮೈಸೂರು.

ನಗರ ಸಾರಿಗೆ ಬಸ್‌ನಲ್ಲಿ 10 ರೂ. ಕಾಯಿನ್ ಸ್ವೀಕರಿಸಲಿ



ಮಾನ್ಯರೆ,

ಇತ್ತೀಚೆಗೆ ದಿನನಿತ್ಯದ ವಹಿವಾಟುಗಳಲ್ಲಿ ಹಾಪ್‌ಕಾಮ್ಸ್ ಮಳಿಗೆ, ಶಾಪಿಂಗ್ ಮಾಲ್, ನಂದಿನಿ ಹಾಲಿನ ಬೂತ್, ಕೆಇಬಿ ನಗದು ಪಾವತಿಸುವ ಕೇಂದ್ರ, ರೈಲು ಅಷ್ಟೇ ಏಕೆ ಬಿಎಂಟಿಸಿ ಬಸ್‌ಗಳಲ್ಲಿ ರೂ.10, ರೂ. 20ರ ನಾಣ್ಯಗಳನ್ನು ಸ್ವೀಕರಿಸುತ್ತಿದ್ದಾರೆ. ಆದರೆ ಮೈಸೂರು ನಗರ ಸಾರಿಗೆ ಬಸ್‌ಗಳಲ್ಲಿ ಅನೇಕ ನಿರ್ವಾಹಕರು ಈ ನಾಣ್ಯಗಳನ್ನು ನಿರಾಕರಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಈ ಗೊಂದಲ ಬಗೆಹರಿಸಲು ಮನವಿ.

– ನೊಂದ ಬಸ್ ಪ್ರಯಾಣಿಕರು, ಮೈಸೂರು.

ಅಂಗವಿಕಲರು, ವೃದ್ಧರ ಪಿಂಚಣಿ ಏರಿಸಿ

ಮಾನ್ಯರೆ,

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆದ ಹಿನ್ನಡೆಯಿಂದಾಗಿ ಪಕ್ಷದ ಕೆಲ ಕಾರ್ಯಕರ್ತರು, ನಾಯಕರು ಬಹಿರಂಗವಾಗಿ ಅಸಮಾಧಾನ ವ್ಯಕ್ತಪಡಿಸಿದ್ದರು. ಅಲ್ಲದೇ ವಿರೋಧ ಪಕ್ಷದ ಕೆಲ ಕಾರ್ಯಕರ್ತರು, ನಾಯಕರು ಕಾಂಗ್ರೆಸ್ ಗ್ಯಾರಂಟಿಯಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ ಎಂದು ಆರೋಪಿಸಿದ್ದರು. ಈ ಎಲ್ಲಾ ಬೆಳವಣಿಗೆಗಳಿಂದ ಬಿಪಿಎಲ್ ಕಾರ್ಡ್‌ಗಳ ಫಲಾನುಭವಿಗಳ ಅರ್ಹರಿಗೆ ಕಾಂಗ್ರೆಸ್ ಗ್ಯಾರಂಟಿ ಯೋಜನೆ ತಲುಪಿಸುವುದಾದರೆ, ಇನ್ನುಳಿದ ಉಳಿತಾಯದ ಹಣವನ್ನು ಅಂಗವಿಕಲರಿಗೆ, ವೃದ್ಧರಿಗೆ ಪಿಂಚಣಿ ರೂಪದಲ್ಲಿ ನೀಡಬೇಕು. ಏಕೆಂದರೆ ಸುಮಾರು ವರ್ಷಗಳ ಕಾಲ ಅಂಗವಿಕಲರ, ವೃದ್ಧರ ಪಿಂಚಣಿ ಮಾಸಿಕ 800 ರೂಪಾಯಿ ಇದ್ದು, ಇದುವರೆಗೂ ಏರಿಕೆಯಾಗಿರುವುದಿಲ್ಲ. ಈಗಿನ ದಿನಮಾನಗಳಲ್ಲಿ ಸರ್ಕಾರ ನೌಕರರ ಸಂಬಳ ಸೇರಿದಂತೆ ಇನ್ನಿತರ ವೇತನ–ಭತ್ಯೆ ಏರಿಕೆ ಮಾಡಲು ಸಿದ್ಧತೆ ನಡೆಸುತ್ತಿರುವಾಗ ಬೆಲೆ ಏರಿಕೆಯಿಂದಾಗಿ ತತ್ತರಿಸಿರುವ ಅಂಗವಿಕಲರು, ವೃದ್ಧರಿಗೆ ಈಗ ಸರ್ಕಾರ ನೀಡುತ್ತಿರುವ ಪಿಂಚಣಿ ಸಾಕಾಗುತ್ತಿಲ್ಲ. ಗ್ಯಾರಂಟಿಗಳ ನಿಜವಾದ ಫಲಾನುಭವಿಗಳಿಗೆ ತಲುಪಿಸಿ, ಉಳಿದ ಹಣದಲ್ಲಿ ಅಂಗವಿಕಲರು, ವೃದ್ಧರ ಪಿಂಚಣಿಯನ್ನು 2000ರೂ.ಗೆ ಹೆಚ್ಚಳ ಮಾಡಲಿ.

–ವೀರೇಶ ಧೂಪದಮಠ, ಮೈಸೂರು.

ರಸ್ತೆ ತುಂಡರಿಸಿದ್ದನ್ನು ಮುಚ್ಚದೆ ವಾಹನ ಚಾಲಕರಿಗೆ ಸಮಸ್ಯೆ

ಮಾನ್ಯರೆ,

ಹೆಬ್ಬಾಳಲ್ಲಿ ಅಂಬರೀಶ್ ರಸ್ತೆ (ಮಾದೇಗೌಡ ಸರ್ಕಲ್ ಬಳಿ)ಯನ್ನು ಇಲ್ಲಿ ಕಟ್ಟಡ ನಿರ್ಮಿಸುವವರು ಯುಜಿಡಿ ಪೈಪ್‌ಲೈನ್ ಸಂಪರ್ಕ ಕಲ್ಪಿಸಲು ಎರಡು ಕಡೆ ತುಂಡರಿಸಿ ತಿಂಗಳುಗಳೇ ಆಯ್ತು. ಇವರು ಮುಚ್ಚಬೇಕು, ಇಲ್ಲ ನಗರಪಾಲಿಕೆಯವರು ಸರಿಪಡಿಸಬೇಕು. ಯಾರೂ ಸರಿ ಮಾಡದೇ ಈಗ ವಾಹನ ಚಾಲಕರು ಪರಿತಪಿಸುವಂತೆ ಮಾಡಿರುವುದು ಯಾವ ನ್ಯಾಯ? ನಗರಪಾಲಿಕೆ ಆಯುಕ್ತರು, ಅಧೀಕ್ಷಕ ಇಂಜಿನಿಯರ್ ಇತ್ತ ಕೂಡಲೇ ಗಮನಹರಿಸಿ ಕೊರಕಲು ಬಿದ್ದಿರುವ ರಸ್ತೆ ಸರಿಪಡಿಸಲಿ.

–ನಾಗೇಂದ್ರ, ಹೆಬ್ಬಾಳು, ಮೈಸೂರು.

ಕೇಂದ್ರ ಬಜೆಟ್: ಕರ್ನಾಟಕಕ್ಕೆ ಮಲತಾಯಿ ಧೋರಣೆ

ಮಾನ್ಯರೆ,

ರಾಜ್ಯದಿಂದ ಒಟ್ಟು 19 ಸಂಸದರು, ಇದರಲ್ಲಿ ನಾಲ್ವರು ಸಚಿವರು ಇದ್ದಾರೆ. ಆದರೂ ಕರ್ನಾಟಕಕ್ಕೆ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ತೀವ್ರ ಅನ್ಯಾಯವಾಗಿದ್ದು, ಯಾವುದೇ ಅನುದಾನವೂ ಇಲ್ಲ ಹೊಸ ಘೋಷಣೆಗಳನ್ನು ಮಾಡದೇ 'ಮಲತಾಯಿ ಧೋರಣೆ' ಅನುಸರಿಸಲಾಗಿದೆ.

ಮೇಕೆದಾಟು, ಭದ್ರಾ ಮೇಲ್ದಂಡೆ ಯೋಜನೆಗಳ ಬಗ್ಗೆ ಪ್ರಸ್ತಾಪವಿಲ್ಲ. ಬೃಹತ್ ಉದ್ಯಮಗಳ ಪುನಶ್ಚೇತನಕ್ಕೂ ನೆರವು ನೀಡದೆ ಕೇವಲ ಆಂಧ್ರ ಹಾಗೂ ಬಿಹಾರ ರಾಜ್ಯಗಳಿಗೆ ಭರಪೂರ ಅನುದಾನ ನೀಡುವ ಮೂಲಕ ಈ ಎರಡು ರಾಜ್ಯಗಳ ಮುಖ್ಯಮಂತ್ರಿಗಳಿಗೆ 'ಉಪಕಾರ ಸ್ಮರಣೆ'ಯ ಮಹಾಪೂರವನ್ನೆ ಬಜೆಟ್‌ನಲ್ಲಿ ಹರಿಸಲಾಗಿದೆ. ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾದ ವಿತ್ತ ಸಚಿವರು ಕರ್ನಾಟಕವನ್ನೇ ಕಡೆಗಣಿಸಿರುವುದು ಎಷ್ಟು ಸಮಂಜಸ.

ಕಾಂಗ್ರೆಸ್ ಉಚಿತ ಗ್ಯಾರಂಟಿ ಯೋಜನೆಗಳ ಭರಾಟೆಯ ನಡುವೆಯೂ 19 (ಬಿಜೆಪಿ–ಜೆಡಿಎಸ್ ಮೈತ್ರಿ –17+2) ಸಂಸದರನ್ನು ಆಯ್ಕೆ ಮಾಡಿ ಕಳಿಸಿದ್ದಕ್ಕೆ ನರೇಂದ್ರ ಮೋದಿಯವರು 'ಖಾಲಿ ಚೊಂಬಿನ' ಬಳುವಳಿ ನೀಡಿರುವುದು ದುರದೃಷ್ಟಕರ. ಈ ಬಗ್ಗೆ ರಾಜ್ಯದ ಸಂಸದರು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ.

– ಹೆಚ್. ಆರ್. ಪ್ರಸಾದ್, ವಿವೇಕಾನಂದನಗರ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429-34512

ದೀಪ ಸಾಲು

ಇದು ಗಾಡ್‌ಫಾದರ್ಸ್ ಯುಗ!



ಗುರುಪೂರ್ಣಿಮೆ ಗುರುನಮನಕ್ಕೆ ಶಿಷ್ಯಸಂಕುಲ ಪ್ರೀತಿಯಿಂದ ನಮಸ್ಕರಿಸಿದ ದಿನ. 'ಹಕ್ಕಿಯ ಅಕ್ಷಿಯಲ್ಲದೆ ಬೇರೇನೂ ಕಾಣದು ಗುರುದೇವ' ಹಾಗೆಂದವನು ಅರ್ಜುನ. ಮೇಲೆ ಹಕ್ಕಿಯ ಅಕ್ಷಿಗೆ ಗುರಿಯಿಡುವ ತವಕ ಅರ್ಜುನನಿಗೆ, ತನ್ನ ಪ್ರೀತಿಯ ಶಿಷ್ಯ ಗುರಿಗೆ ಬಾಣ ಹೂಡಿ ಹೊಡೆದೇ ತೀರುತ್ತಾನೆನ್ನುವ ಅಭಿಮಾನ ಗುರುವಿಗೆ, ಒಂದಕ್ಕೊಂದು ಸಮ್ಮಿಳಿತ ಸಾವಧಾನ. ಗುರುಶಿಷ್ಯರ ಆತ್ಮಾನುಸಂಧಾನ. ಅಂದರೆ ಗುರುವಿನ ಗುಲಾಮನಾದ ಶಿಷ್ಯನಿಗೆ ತನ್ನ ಕೈಚಳಕದ ಸಕಲವನ್ನೂ ಧಾರೆಯೆರೆದ ಗುರುಪರಂಪರೆಗೆ, ಭಾರತದ ನೆಲದಲ್ಲಿ ಕಥಾನಕಗಳ ಕಾವಲಿದೆ. ಆದರೆ ಅಭಿಮಾನದ ಆವೇಶದಲ್ಲಿ ಆಡುವ ಮಾತಿಗೆ ಕೆಲವೊಮ್ಮೆ ಅವಸಾನದ ಕತೆಗಳು ಹುಟ್ಟುತ್ತವೆ. ಗುರು ದ್ರೋಣಾಚಾರ್ಯರಿಗೆ ಪಾಂಡವರು, ಕೌರವರು ಇಬ್ಬರೂ ಶಿಷ್ಯರೆ, ಸಕಲ ರಾಜಪರಿವಾರಕ್ಕೆ ಗುರುಸ್ಥಾನದಲ್ಲಿದ್ದವರು ದ್ರೋಣರು. ಆದರೆ ಶಿಷ್ಯನ ಕಲಿಕೆಯ ಆಸಕ್ತಿ ಕಂಡು ಗುರುದ್ರೋಣರು ಅರ್ಜುನನಿಗೆ ಜಗತ್ತಿನ ಸರ್ವಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡುತ್ತೇನೆಂದು ವಚನವಿತ್ತ ಸಂದರ್ಭವೇ ವಿಪರ್ಯಾಸ. ಅಂದರೆ ಭಾಷೆ ಕೊಟ್ಟೆನಲ್ಲ ಎಂಬ ಒಂದೇ ಕಾರಣಕ್ಕೆ ಶಿಷ್ಯನ ಇತಿ–ಮಿತಿಗಳನ್ನು ಮೀರಿ ಗುರುವೇ ಬೆನ್ನ ಹಿಂದೆ ನಿಂತು ಶಿಷ್ಯನನ್ನು ಸಾಧನೆಯ ಶಿಖರವೇರಿಸುವ ಪ್ರಸಂಗಕ್ಕೆ ಗುರು ದ್ರೋಣರು ಸಾಕ್ಷಿಯಾಗಿ ಬಿಟ್ಟರು.

ಅರ್ಜುನನಿಗೆ ಸರಿಸಾಟಿಯಾಗಿ ಸಕಲ ವಿದ್ಯಾ ಸಂಪನ್ನತೆಯಿದ್ದೂ ಸಾಧನೆಗೈದರೂ ಕರ್ಣನಂಥಾ ವ್ಯಕ್ತಿತ್ವಕ್ಕೆ ಗುರು ಮನ್ನಣೆ ಸಿಗಲಿಲ್ಲ. ಜನಮನ್ನಣೆಯಲ್ಲಿ ಕರ್ಣನ ಅಸಲೀ ಪರಾಕ್ರಮದ ಪರಾಕಾಷ್ಠೆಗೆ ಕೀರ್ತಿಯ ಉತ್ತುಂಗದಲ್ಲಿ ಸ್ಥಾನ ನೀಡಿದವರು ಕಾವ್ಯದ ಓದುಗ ಸಹೃದಯರು. ಅಂದರೆ ವ್ಯವಸ್ಥೆ ಮತ್ತು ಪ್ರಶಂಸೆಗಳು ಯಾವಾಗಲೂ ಪ್ರಜೆಗಳು ಮತ್ತು ಪ್ರಭುಗಳು ಎಂಬ ವ್ಯತ್ಯಾಸದಲ್ಲೇ ಸಾಗಿದ ಉದಾಹರಣೆಗಳು ನಮ್ಮನ್ನು ಯೋಚಿಸುವಂತೆ ಮಾಡುತ್ತವೆ. ಮಹಾಭಾರತದಲ್ಲಿ ಇಲ್ಲದ್ದು ಜಗತ್ತಿನಲ್ಲಿಯೇ ಯಾವುದೂ ಇಲ್ಲ ಎಂಬ ಮಾತೊಂದಿದೆ. ಅಂದರೆ ಮನುಷ್ಯನ ಮನೋವ್ಯಾಕುಲತೆಗಳು, ಸಣ್ಣತನಗಳು, ಆಸ್ತಿಯದಾಹ, ಅಧಿಕಾರದ ಲಾಲಸೆ, ಪುತ್ರ ವ್ಯಾಮೋಹ, ದಾಯಾದಿ ಕಲಹ, ಒಂದೇ, ಎರಡೇ, ಇಡೀ ಮನುಷ್ಯ ಪ್ರಕೃತಿಯ ಜೀವ ವೈವಿಧ್ಯಗಳನ್ನು ವಿಕೃತಿಗಳ ಸಮೇತ ಆಕೃತಿಗಿಳಿಸಿದ ಕಾವ್ಯ ಮಹಾಭಾರತ. ಇಂಥ ಮಹಾಭಾರತ ಯಾವುದೋ ಕಾಲದಲ್ಲಿ ಸೃಷ್ಟಿಯಾಗಿ ಆ ಕಾಲಕ್ಕೇ ಸೀಮಿತಗೊಂಡು ತನ್ನ ಕಾಲಮಾನದ ಮಿತಿಗೇ ಮುಗಿದು ಹೋಗಲಿಲ್ಲ. ಮನುಷ್ಯನ ನಡವಳಿಕೆ ಮತ್ತು ಅಂತರಂಗದ ಮನೋ ವ್ಯಾಪಾರಗಳನ್ನೇ ಕೇಂದ್ರವಾಗಿಸಿಕೊಂಡು ಕಟ್ಟಿದ ಪರಿಣಾಮ ಆ ಕಾವ್ಯ ಸಾರ್ವಕಾಲಿಕವಾಗಿ ವರ್ತಮಾನದಲ್ಲೂ ನಮ್ಮನ್ನು ಪ್ರಭಾವಿಸಿವೆ.

ತಾಂತ್ರಿಕವಾಗಿ ನಾವು ಎಷ್ಟೇ ಎತ್ತರಕ್ಕೇರಿದ್ದರೂ ನಮ್ಮ ಟೆಕ್ನಾಲಜಿಯ ಸೌಂದರ್ಯದಲ್ಲಿ ಕುರುಕ್ಷೇತ್ರದ ಪ್ರಸಂಗ ಹೇಗೆ ಕಾಣಿಸಬಹುದು. ಬಬ್ರುವಾಹನನ ಬಾಣದ ಬಿರುಸು ಕೃಷ್ಣಸಂಧಾನದ ಚಾಕಚಕ್ಯತೆಗಳು, ದುರ್ಯೋಧನನ ಹಠ, ದ್ರೌಪದಿಯ ಛಲ ಹೀಗೆ ಹತ್ತಾರು ವಿಷಯಗಳು ನಮ್ಮ ಬೆಳ್ಳಿತೆರೆಯನ್ನು, ನಮ್ಮ ರಂಗಭೂಮಿಯನ್ನು, ನಮ್ಮ ಸಂಶೋಧನಾ ಪ್ರಬಂಧಗಳನ್ನು, ನಮ್ಮ ವಿಚಾರಸಂಕಿರಣಗಳನ್ನು, ನಮ್ಮ ವಾದ–ಸಂವಾದಗಳನ್ನು, ವಾದ–ವಿವಾದಗಳನ್ನು, ಮತ್ತೆ ಮತ್ತೆ ಕೆಣಕಿ ಪ್ರಭಾವಿಸುವಷ್ಟು ಅದು ಸಾರ್ವಕಾಲಿಕ ಸತ್ಯದಂತೆ ಗೋಚರಿಸಿವೆ. ಮಹಾಭಾರತ ಧಾರಾವಾಹಿ ಬಂದ ಕಾಲದಲ್ಲಿ ಬೀದಿಯಲ್ಲಿ ಜನರೇ ಕಾಣದಷ್ಟು, ರಸ್ತೆಗಳು ಖಾಲಿ ಖಾಲಿಯಾಗಿರುತ್ತಿದ್ದ ದಿನಗಳಿದ್ದವು. ಹಳ್ಳಿಗಳಲ್ಲಿ ಭಾರತದ ಕತೆಯಾಧರಿಸಿದ ನಾಟಕ ಪರಂಪರೆ ಭರತಖಂಡದ ಬೇರೆ ಬೇರೆ ರಾಜ್ಯ ಭಾಷೆಗಳಲ್ಲಿ ಪ್ರಯೋಗಗೊಂಡು ಗ್ರಾಮ ಭಾರತದ ರಂಜನೆಯನ್ನು ಸಂತುಷ್ಟಿಗೊಳಿಸಿದೆ. ಇಂಥ ಭಾರತದ ಕತೆಯನ್ನು ಕನ್ನಡದ ಕಾವ್ಯ ಪರಂಪರೆ ಪಂಪ, ರನ್ನ, ಕುಮಾರವ್ಯಾಸರಂಥ ಮಹಾಕವಿಗಳ ಮನಸ್ಸನ್ನೂ ಬಿಡಲಿಲ್ಲ. ಅಂದರೆ ಕನ್ನಡ ಕಾವ್ಯಪರಂಪರೆಯಲ್ಲಿ ಇಂದಿಗೂ ರತ್ನಸದೃಶರಾದ ಈ ಮೂವರು ಕನ್ನಡದ ಕವಿಗಳು ಮಹಾಭಾರತದ ಕತೆಯನ್ನೇ ಆಧರಿಸಿ ಕನ್ನಡ ಕಾವ್ಯ ಪರಂಪರೆಗೆ ಅದನ್ನು ಒಗ್ಗಿಸಿಕೊಂಡು ಕಾವ್ಯ ಹೆಣೆದ ಪರಿ ಅನನ್ಯ. ಕುಮಾರವ್ಯಾಸನಂತೂ ಭಾರತದ ಕತೆಯನ್ನು ಇದು 'ಹಾದರದ ಕತೆ ಸೋದರ ವಧೆ' ಎಂಬ ಕಥನ ಕಾರಣವನ್ನು ನಿರೂಪಿಸಿದರೆ, ಪಂಪ 'ಕರ್ಣ ರಸಾಯನಮಲ್ತೆ ಭಾರತ' ಎಂಬ ತೀರ್ಮಾನಕ್ಕೆ ಬಂದು ಬಿಡುತ್ತಾನೆ. ಅಂದರೆ ಭಾರತದ ಕಥೆ ದೃಶ್ಯ ಮಾಧ್ಯಮಗಳಿಲ್ಲದ ಕಾಲದಲ್ಲಿ ಕಿವಿಗೆ ರಸಾಯನ ಎಂಬರ್ಥದಲ್ಲಿ ಪ್ರಯೋಗಿಸಿದರೆ ದೃಶ್ಯಮಾಧ್ಯಮ ಸಶಕ್ತವಾಗಿರುವ ನಮ್ಮ ಕಾಲದಲ್ಲಿ ಇದು ಕಣ್ಣಿಗೂ ರಸಾಯನವೇ! ಪಂಪ ಮನಸ್ಸಿನಲ್ಲಿ ಕೇವಲ ಕಿವಿಗೆ ರಸಾಯನವಲ್ತೇ ಭಾರತ ಎಂದು ಹೇಳುವ ಉದ್ದೇಶವಿದ್ದಂತೇ ತೋರುವುದಿಲ್ಲ. ಅಲ್ಲಿ ಕರ್ಣನ ಉದಾತ್ತ ಪ್ರತಿಭೆ ಕಾಲಚಕ್ರಕ್ಕೆ ಸಿಲುಕಿ ಮುರುಟಿ ಹೋದ ಕತೆಯೇ ಪ್ರಧಾನ ಪ್ರಸ್ತುತಿ ಎಂದು ಹೇಳುವ ಉಮ್ಮೇದಿಯಿರಬಹುದು ಎಂಬ ಕನ್ನಡ ಸಾಹಿತ್ಯ ವಿಮರ್ಶೆಯ ಅಭಿಮತ ಒಪ್ಪತಕ್ಕದ್ದೇ. ಅಂದರೆ ಕರ್ಣನ ವ್ಯಕ್ತಿತ್ವಕ್ಕೆ ಇದ್ದ ಅಸಲೀಯತ್ತಿಗೆ ವಿಧಿಯ ಕ್ರೂರನಗೆ ಅಪಯಶಸ್ಸಿನ ಅಟ್ಟಹಾಸ, ಹೇಗೆ ಮಗ್ಗುಲು ಮುಳ್ಳಾಗಿ ಅವನ ದಾರಿಯುದ್ದಕ್ಕೂ ಕಾಡುತ್ತವೆ ಎಂಬುದು ಎಂಥವರಿಗೂ ಆತನಿಗೊಂದು ಹೃದಯದಲ್ಲಿ ಸ್ಥಾನ ಕೊಡೋಣ ಎನ್ನಿಸುತ್ತದೆ. ಇಂದು ಕರ್ಣನ ವ್ಯಕ್ತಿತ್ವದ ಮಾದರಿಯನ್ನೇ ಹತ್ತಾರು ಪ್ರತಿಭೆಗಳು ಜಗತ್ತಿನ ಕಲೆ, ಸಾಂಸ್ಕೃತಿಕ, ರಾಜಕಾರಣ, ಆರ್ಥಿಕ ಚಟುವಟಿಕೆಗಳು, ಮುಂತಾದ ಬಹುಮುಖ್ಯ ಕ್ಷೇತ್ರಗಳ ಪ್ರಾಂಗಣದಲ್ಲೇ ದನಿಯಿದ್ದೂ ಹಾಡದಂತಾದ, ಶಕ್ತಿಯಿದ್ದೂ ಓಡದಂತಾದ, ಪ್ರತಿಭೆಯಿದ್ದೂ ಜಯಿಸದಂತಾದ ಅಸಂಖ್ಯಾತ ಕರ್ಣಸಂಕುಲ ನಮ್ಮ ನಡುವೆ ಇದೆ. ನಮ್ಮ ನಮ್ಮ ಪುಟ್ಟ ಪ್ರಪಂಚದಲ್ಲೇ ನಾವೂ ಇಂಥದರಲ್ಲಿ ಒಬ್ಬರಾಗಿರಬಹುದು. ಮಹಾಕಾವ್ಯ ಹೇಳಿ ಹೋದ ಮನುಷ್ಯ ಪ್ರಪಂಚದ ಸತ್ಯ ಇದು.

ಇದೇ ಮಹಾಭಾರತದ ಉಪಾಖ್ಯಾನದಲ್ಲಿ ಬರುವ ಮತ್ತೊಂದು ಪ್ರಸಂಗದಲ್ಲಿ ಅಸುರರ ರಾಜಗುರು ಶುಕ್ರಾಚಾರ್ಯರೆಂಬ ಮುನಿವರೇಣ್ಯ, ತನ್ನ ಮಗಳಾದ ದೇವಯಾನಿಯ ಮೇಲೆ ಪುತ್ರಿ ವ್ಯಾಮೋಹಕ್ಕೆ ಒಳಗಾಗಿ ಆಕೆ ಹೇಳಿದಂತೆಲ್ಲಾ ಕೇಳುವ ವ್ಯಾಮೋಹದ ತಂದೆಯಾಗಿ ಕಾಣಿಸಿಕೊಂಡ ಕತೆಯಿದೆ.

ದೇವಗುರು ಬೃಹಸ್ಪತಿಯ ಮಗ ಕಚ. ದೇವತೆಗಳಿಗೂ ರಾಕ್ಷಸರಿಗೂ ಸದಾ ವೈರತ್ವ. ಶುಕ್ರಾಚಾರ್ಯರಿಗೆ ಸಂಜೀವಿನಿ ವಿದ್ಯೆ ಗೊತ್ತಿತ್ತು. ಸಂಜೀವಿನಿ ವಿದ್ಯೆಗೆ ಸತ್ತವರನ್ನು ಬದುಕಿಸುವ ಜೀವಶಕ್ತಿ ಇತ್ತು ಎಂಬುದು ನಂಬಿಕೆ. ಹೇಗಾದರೂ ಮಾಡಿ ದೇವಸಂಕುಲದ ಪ್ರತಿನಿಧಿಯಾದ ಕಚನಿಗೆ ಅದನ್ನು ಕಲಿಯಬೇಕೆಂಬ ಹಂಬಲ. ಅದಕ್ಕಾಗಿ ಶುಕ್ರಾಚಾರ್ಯರ ಬಳಿ ಶಿಷ್ಯ ವೃತ್ತಿ. ಕಚನ ವಿಷಯ ರಾಕ್ಷಸರಿಗೆ ಗೊತ್ತಾಗಿ ದೇವ ಗುರುವಿನ ಪುತ್ರನ ಹತ್ಯೆಗೆ ಸಂಚು ರೂಪಿಸಿ ಕಚ ಸಾಯುವಂತೆ ಮಾಡುತ್ತಾರೆ. ಆದರೆ ದೇವಯಾನಿಯ ಬೇಡಿಕೆಯಂತೆ ತಂದೆಯಾದ ಶುಕ್ರಾಚಾರ್ಯ ಮತ್ತೆ ಮೃತ್ಯು ಸಂಜೀವಿನಿ ವಿದ್ಯೆಯಿಂದ ಕಚನಿಗೆ ಪುನರ್ಜನ್ಮ ನೀಡುತ್ತಾರೆ. ಆಗ ಅಸುರರು ಉಪಾಯ ಹೂಡಿ ಕಚನ ಮೇಲೆ ಗುರುಪುತ್ರಿ ದೇವಯಾನಿಗೆ ಪ್ರೇಮವಿದೆ. ಗುರು ಶುಕ್ರಾಚಾರ್ಯರಿಗೆ ಬಲವಾದ ಪುತ್ರಿ ವ್ಯಾಮೋಹವಿದೆ. ದೇವಯಾನಿಗೆ ಕಚನ ಸಾಮೀಪ್ಯ ಗೆಳೆತನಗಳು ಬೇಕು, ಶುಕ್ರಾಚಾರ್ಯರಿಗೆ ಮಗಳ ಸಂತೋಷ ಬೇಕು. ಕಚನಿಗೆ ಗುರು ಶುಕ್ರಾಚಾರ್ಯರಿಗೆ ಗೊತ್ತಿರುವ ಮೃತ್ಯು ಸಂಜೀವಿನಿ ವಿದ್ಯೆ ಕಲಿಯಬೇಕು. ಅಸುರರಾದ ನಾವಿದನ್ನು ಹೇಗಾದರೂ ಮಾಡಿ ತಡೆಯಬೇಕು. ಅದಕ್ಕಾಗಿ ಏನು ಮಾಡಬೇಕು? ಕಚನನ್ನು ಕೊಂದು ಸುಟ್ಟು ಭಸ್ಮ ಮಾಡಿ ಆ ಬೂದಿಯನ್ನೇ ಸೋಮರಸದಲ್ಲಿ ಸೇರಿಸಿ ಗುರುಗಳು ಅದನ್ನು ಕುಡಿಯುವಂತೆ ಮಾಡಿದರೆ ಆಗ ಗುರುಗಳು ಕಚನನ್ನು ಬದುಕಿಸಲು ಮೃತ್ಯು ಸಂಜೀವಿನಿ ಪಠಿಸಿದರೆ ಕಚ ಜೀವಂತವಾಗಿ ಹೊರಬರುತ್ತಾನೆ. ಆದರೆ ಗುರುಗಳು ಸಾಯುತ್ತಾರೆ! ಈ ಸತ್ಯ ಗೊತ್ತಾದರೆ ಗುರುಗಳು ತಮ್ಮ ಸಾವಿಗೆ ಹೆದರಿ ಕಚನನ್ನು ಬದುಕಿಸಲಾರರು ಎಂಬುದು ಅಸುರರ ಲೆಕ್ಕಾಚಾರ.

ಕಾರಣ ಕಚ ಸೋಮರಸದ ಜೊತೆ ಮಿಳಿತಗೊಂಡು ಶುಕ್ರಾಚಾರ್ಯರ ಹೊಟ್ಟೆ ಸೇರಿದ್ದಾನೆ. ಇಷ್ಟಾಗಿಯೂ ಶುಕ್ರಾಚಾರ್ಯರು ಮಗಳ ಮೇಲಿನ ವ್ಯಾಮೋಹದಿಂದ ಮಗಳಿಗೆ ಬೇಕಾದ ಸಖನನ್ನು ಬದುಕಿಸಲು ಮೃತ್ಯುಸಂಜೀವಿನಿಯನ್ನು ಬೋಧಿಸಿ ಅವನಿಗೆ ಜೀವಕೊಟ್ಟು ತಾವು ಸಾಯುವ ತೀರ್ಮಾನಕ್ಕೆ ಬರುತ್ತಾರೆ. ಹಾಗೆಯೇ ಮಾಡುತ್ತಾರೆ. ತನ್ನ ಹೊಟ್ಟೆಯೊಳಗಿದ್ದ ಕಚನಿಗೆ ಮೃತ್ಯುಸಂಜೀವಿನಿಯನ್ನು ಬೋಧಿಸುತ್ತಾರೆ. ಕಚ ಶುಕ್ರಾಚಾರ್ಯರ ಹೊಟ್ಟೆಯೊಡೆದುಕೊಂಡು ಆಚೆ ಬರುತ್ತಾನೆ. ಗುರು ಶುಕ್ರಾಚಾರ್ಯರು ಸಾಯುತ್ತಾರೆ. ಮತ್ತದೇ ಮರು ಕ್ಷಣದಲ್ಲಿ ಕಚ ಗುರುಗಳ ಹೊಟ್ಟೆಯೊಳಗಿದ್ದಾಗ ಬೋಧಿಸಿಕೊಂಡ ಮೃತ್ಯುಸಂಜೀವಿನಿಯನ್ನು ಗುರುಗಳ ಮೇಲೆಯೇ ಪ್ರಯೋಗಿಸಿ ಶುಕ್ರಾಚಾರ್ಯರನ್ನು ಬದುಕಿಸುತ್ತಾನೆ. ಮುಂದೆ ದೇವಯಾನಿಯ ಮೋಹಪಾಶಕ್ಕೆ ಒಳಗಾಗದ ಕಚ ಗುರುಪುತ್ರಿಯಿಂದ ಶಾಪಗ್ರಸ್ಥನಾಗುತ್ತಾನೆ. ಆತನಿಗೆ ಮೃತ್ಯುಸಂಜೀವಿನಿ ಫಲಿಸದೇ ಹೋಗಲಿ ಎಂಬುದು ಆಕೆಯ ಶಾಪ. ಆದರೆ ಕಲಿತ ವಿದ್ಯೆ ಲೋಕಕಲ್ಯಾಣಕ್ಕಾಗಿ ಎಂಬ ಉದ್ದೇಶದಿಂದ ಬಂದ ಆತ ತನ್ನಿಂದ ಬೋಧಿಸಲ್ಪಟ್ಟವರಿಂದ ಮೃತ್ಯುಸಂಜೀವಿನಿ ಊರ್ಜಿತವಾಗುತ್ತದೆ ಎಂಬುದು ಕಚನ ವಿಶ್ವಾಸ. ಕತೆ ಏನೇ ಇರಲಿ ಮುಂದೆ ಆಕೆ ಬ್ರಹ್ಮಚಾರಿಯಾದ ಕಚನಿಗೆ ಮೋಹಪಾಶದ ವಿಷಯದಲ್ಲಿ ಶಾಪ ಕೊಟ್ಟಿದ್ದಕ್ಕೆ ಪ್ರತಿಯಾಗಿ ದೇವಯಾನಿ ಕ್ಷತ್ರಿಯನನ್ನು ಮದುವೆಯಾಗುವಂತೆ ಕಚ ಶಾಪಕೊಡುತ್ತಾನೆ. ಅಲ್ಲಿಂದ ರಾಜ ಯಾಯಾತಿಯನ್ನು ಮದುವೆಯಾಗಿ ಕತೆ ಕವಲೊಡೆಯುತ್ತದೆ.

ಇಲ್ಲಿ ಅಸಲೀಯತ್ತಿನ ಪ್ರಶ್ನೆ ಎಂದರೆ ಕರ್ಣ ಪರಾಕ್ರಮಿಯಾಗಿದ್ದೂ ಗುರುಪರಶುರಾಮರ, ಭೂಮಿ ತಾಯಿಯ ಶಾಪ ಸಂಚಕಾರ. ಅರ್ಜುನನಿಗೆ ಪರಾಕ್ರಮದ ಜೊತೆ ಗುರುವಿನ ವಿಶೇಷ ಮಮಕಾರ.

ಅಲ್ಲಿ ಲೋಕ ಕಲ್ಯಾಣಕ್ಕಾಗಿ ಬಂದ ದೇವಗುರು ಬೃಹಸ್ಪತಿಯ ಮಗನಿಗೆ ಪುತ್ರಿ ವ್ಯಾಮೋಹದಲ್ಲಿ ಬಂಧಿಯಾದ ಶುಕ್ರಾಚಾರ್ಯರ ಮಮಕಾರ, ಅಸುರರ ತಿರಸ್ಕಾರ, ಈ ಮನುಷ್ಯ ಪ್ರಕೃತಿಯ ಭಾವಾವೇಶಗಳಲ್ಲಿ ಶಕ್ತಿಯಿದ್ದೂ ಗಾಡ್ ಫಾದರ್‌ಗಳ ಕೃಪೆ ಕೆಲಸ ಮಾಡಿದೆ ಎಂದ ಮೇಲೆ ನಮ್ಮ ಕಾಲದಲ್ಲಿ ದೊಡ್ಡ ಸ್ಥಾನದಲ್ಲಿರುವವರು ಪುತ್ರ ವ್ಯಾಮೋಹಿಗಳಾಗಿ, ಪುತ್ರಿ ವ್ಯಾಮೋಹಿಗಳಾಗಿ, ಶಿಷ್ಯ ವ್ಯಾಮೋಹಿಗಳಾಗಿ, ಸ್ವಜನಪಕ್ಷಪಾತಿಗಳಾಗಿ, ಕುಟುಂಬ ವ್ಯಾಮೋಹಿಗಳಾಗಿ ಸ್ವಲ್ಪ ಶಕ್ತಿ, ಪ್ರತಿಭೆ, ಪಾಂಡಿತ್ಯ, ದುಡಿಮೆ, ಶ್ರಮ, ಸಂಘಟನೆ ಇತ್ಯಾದಿಗಳಲ್ಲಿರುವವರಿಗೆ ಬೆಂಗಾವಲಾಗಿ ನಿಂತ ಕಾರಣದಿಂದಲೇ ಅವರ ಸುತ್ತಮುತ್ತ ಇರುವವರೇ ಕೆಲವರು ಮುಖ್ಯವಾಹಿನಿಯಲ್ಲಿ ಮುಂಚೂಣಿಗೆ ಬಂದು ನಿಲ್ಲುತ್ತಾರೆ. ಕರ್ಣನಂಥವರು, ಕಚನಂಥವರು ಶಾಪಗ್ರಸ್ಥರಾಗುತ್ತಾರೆ. ಇದು ಗಾಡ್‌ಫಾದರ್‌ಗಳ ಯುಗ. ಎಲ್ಲದರಲ್ಲೂ ಎಲ್ಲದಕ್ಕೂ ಇಲ್ಲಿ ಗಾಡ್‌ಫಾದರ್‌ಗಳು ಬೇಕು. ಹಾಗಂತ ನಾನು ಹೇಳುತ್ತಿಲ್ಲ! ನಮ್ಮ ಮಹಾಕಾವ್ಯ ಪರಂಪರೆ ಇಂಥ ಪಾತ್ರಗಳ ಮುಖೇನ ಹೇಳಿ ಹೋಗಿದೆ. ಇಷ್ಟಾಗಿಯೂ ಗಾಡ್‌ಫಾದರ್‌ಗಳಿಲ್ಲದೆ ಯಾರ ಸಹಕಾರವೂ ಸಿಗದೆ ಪ್ರತಿಭಾ ಕುಸುಮಗಳು ಅಲ್ಲಲ್ಲಿ ಅರಳಿವೆ. ಯಾರ ಸಪೋರ್ಟು ಸಿಗದೆ ತಮ್ಮ ಎಫರ್ಟಿನಿಂದಲೇ ಗೌರವಕ್ಕೆ ಪಾತ್ರರಾಗಿ ಭಾರತದ ಬೋರ್ಡುಗಳಂತೆ ಬದುಕಿದವರು ಹಲವರಿದ್ದಾರೆ. ನಾವು ಯಾವ ಕೆಟಗರಿಯಲ್ಲಿದ್ದೇವೆಯೋ ಗೊತ್ತಿಲ್ಲ.

ಅರೆಬೆಂದ ಇಟ್ಟಿಗೆಗಳ ಸೌಂಡೇ ಜಾಸ್ತಿ ಇರುವ ಈ ಕಾಲದಲ್ಲಿ ಹದವರಿತು ಬೆಂದು ಬಾಳಿದ ಅರಮನೆಯ ಗುರುಮನೆಯ ನೆರೆಮನೆಯ ಚೌಕಟ್ಟಿಗೆ ಇಟ್ಟಿಗೆಯಾಗಿ ಕುಳಿತವರ ಬೆನ್ನ ಹಿಂದೆ ಯಾವ್ಯಾವ ಕತೆಗಳೋ! ಯಾವ್ಯಾವ ವ್ಯಥೆಗಳೋ ಬಲ್ಲವರಾರು ಗುರುದೇವ! ಕೆನೆಕಟ್ಟಿದ ಬಾಳ್ವೆಯಲ್ಲೂ ಅಸಲೀಯತ್ತಿನ ನೀತಿ ನಿರೂಪಣೆಗೆ ನಿಲುಗಡೆಗಳಿದ್ದಾವೆ. ಆ ನಿಲ್ದಾಣಗಳಿಂದ ಹೆಕ್ಕಿದ ಕತೆಗಳಲ್ಲಿ ವರ್ತಮಾನದ ತರ್ಕಗಳಿವೆ. ಏನಂತೀರಿ?

> “ ಇದು ಗಾಡ್‌ಫಾದರ್‌ಗಳ ಯುಗ. ಎಲ್ಲದರಲ್ಲೂ ಎಲ್ಲದಕ್ಕೂ ಇಲ್ಲಿ ಗಾಡ್‌ಫಾದರ್‌ಗಳು ಬೇಕು. ಹಾಗಂತ ನಾನು ಹೇಳುತ್ತಿಲ್ಲ! ನಮ್ಮ ಮಹಾಕಾವ್ಯ ಪರಂಪರೆ ಇಂಥ ಪಾತ್ರಗಳ ಮುಖೇನ ಹೇಳಿ ಹೋಗಿದೆ. ಇಷ್ಟಾಗಿಯೂ ಗಾಡ್‌ಫಾದರ್‌ಗಳಿಲ್ಲದೆ ಯಾರ ಸಹಕಾರವೂ ಸಿಗದೆ ಪ್ರತಿಭಾ ಕುಸುಮಗಳು ಅಲ್ಲಲ್ಲಿ ಅರಳಿವೆ. ಯಾರ ಸಪೋರ್ಟು ಸಿಗದೆ ತಮ್ಮ ಎಫರ್ಟಿನಿಂದಲೇ ಗೌರವಕ್ಕೆ ಪಾತ್ರರಾಗಿ ಭಾರತದ ಬೋರ್ಡುಗಳಂತೆ ಬದುಕಿದವರು ಹಲವರಿದ್ದಾರೆ. ನಾವು ಯಾವ ಕೆಟಗರಿಯಲ್ಲಿದ್ದೇವೆಯೋ ಗೊತ್ತಿಲ್ಲ.

ರಾಹುಲ್ ಗಾಂಧಿ ಭಾಷಣಕ್ಕೆ ಮುಖ ಮುಚ್ಚಿ, ತಲೆ ಚಚ್ಚಿಕೊಂಡ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್!

ನವದೆಹಲಿ: ಸಂಸತ್ ಕಲಾಪದಲ್ಲಿ ಬಜೆಟ್ ಮೇಲಿನ ಚರ್ಚೆಯ ವೇಳೆ ರಾಹುಲ್ ಗಾಂಧಿ ಭಾಷಣ ಮಾಡುವಾಗ ನಿರ್ಮಲಾ ಸೀತಾರಾಮನ್ ತಲೆ ಚಚ್ಚಿಕೊಂಡ ವಿಡಿಯೋ ಎಲ್ಲೆಡೆ ವೈರಲ್ ಆಗತೊಡಗಿದೆ.



ಕೇಂದ್ರ ಬಜೆಟ್‌ನ್ನು ಮಧ್ಯಮ ವರ್ಗ, ಹಿಂದುಳಿದ ವರ್ಗಗಳ ವಿರೋಧಿ ಬಜೆಟ್ ಎಂದು ರಾಹುಲ್ ಗಾಂಧಿ ತಮ್ಮ ಭಾಷಣದಲ್ಲಿ ಟೀಕಾಪ್ರಹಾರ ನಡೆಸಿದರು. ಬಜೆಟ್ ತಯಾರಿಕೆಯ ತಂಡದಲ್ಲಿ ವೈವಿಧ್ಯತೆಯ ಕೊರತೆಯ ಬಗ್ಗೆ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ ರಾಹುಲ್ ಗಾಂಧಿ, ಒಳಗೊಳ್ಳುವಿಕೆಗೆ ಸಂಬಂಧಿಸಿದಂತೆ ಮೋದಿ ಸರ್ಕಾರವನ್ನು ಪ್ರಶ್ನಿಸಿದ್ದಾರೆ. ತಮ್ಮ ಆರೋಪಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ ರಾಹುಲ್ ಗಾಂಧಿ ಬಜೆಟ್ ಪೂರ್ವದಲ್ಲಿ ನಡೆಯುವ ಸಾಂಪ್ರದಾಯಿಕ ಹಲ್ವಾ ಸಮಾರಂಭದ ಪೋಸ್ಟರ್ ಅನ್ನು ಪ್ರದರ್ಶಿಸಿದ್ದು, ಬಜೆಟ್ ತಯಾರಿಕೆಯ ತಂಡದಲ್ಲಿದ್ದ 20 ಅಧಿಕಾರಿಗಳ ಪೈಕಿ ದಲಿತರು, ಒಬಿಸಿ, ಆದಿವಾಸಿಗಳ ಅನುಪಸ್ಥಿತಿಯನ್ನು ಉಲ್ಲೇಖಿಸಿದರು. ಈ ಫೋಟೋದಲ್ಲಿ ಬಜೆಟ್ ಹಲ್ವಾ ವಿತರಣೆ ಮಾಡಲಾಗುತ್ತಿದೆ. ಇದರಲ್ಲಿ ಒಬ್ಬ ಒಬಿಸಿ, ಬುಡಕಟ್ಟು ಅಥವಾ ದಲಿತ ಅಧಿಕಾರಿಯೂ ಕಾಣುತ್ತಿಲ್ಲ. ದೇಶದ ಹಲ್ವಾವನ್ನು ವಿತರಣೆ ಮಾಡಲಾಗುತ್ತಿದೆ. ಆದರೆ ಅದರಲ್ಲಿ ಶೇ.73 ರಷ್ಟು ಪ್ರಾತಿನಿಧ್ಯ ಇಲ್ಲವೇ ಇಲ್ಲ. 20 ಅಧಿಕಾರಿಗಳು ದೇಶದ ಬಜೆಟ್ ಅನ್ನು ತಯಾರಿಸಿದ್ದಾರೆ. ಹಿಂದೂಸ್ಥಾನದ ಹಲ್ವಾ ವಿತರಣೆ 20 ಜನರು ಮಾಡುವ ಕೆಲಸವೆ? ಎಂದು ದೇಶದ ಬಹುಸಂಖ್ಯಾತ ಜನಸಂಖ್ಯೆಯನ್ನು ಬಜೆಟ್‌ನಿಂದ ಹೊರಗಿಡಲಾಗಿದೆ ಎಂಬುದನ್ನು ಸೂಚ್ಯವಾಗಿ ಹೇಳಲು ಯತ್ನಿಸಿದರು. ರಾಹುಲ್ ಗಾಂಧಿಯ ಈ ಮಾತಿಗೆ ನಿರ್ಮಲಾ ಸೀತಾರಾಮನ್ ಹತಾಶರಾಗಿ ತಲೆ ಮೇಲೆ ಕೈ ಇಟ್ಟುಕೊಂಡು ತಲೆ ಚಚ್ಚಿಕೊಂಡ ವಿಡಿಯೋ ಈಗ ವೈರಲ್ ಆಗತೊಡಗಿದೆ.

ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಸಮಿತಿ ರಚನೆಗೆ ಸುಪ್ರೀಂಕೋರ್ಟ್ ಗ್ರೀನ್ ಸಿಗ್ನಲ್

ಬೆಂಗಳೂರು, ಜು. 29– ನಿವೃತ್ತ ನ್ಯಾಯಮೂರ್ತಿ ಶ್ರೀಕೃಷ್ಣ ನೇತೃತ್ವದ ಸಮಿತಿಯ ವರದಿಯನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿದ್ದು, ವರದಿ ಆಧರಿಸಿ ಗೋಕರ್ಣ ಮಹಾಬಲೇಶ್ವರ ದೇವಸ್ಥಾನ ಸಮಿತಿ ರಚನೆ ಬಗ್ಗೆ ನಿರ್ದೇಶನ ನೀಡಿದೆ.

ಜಿಲ್ಲಾ ನ್ಯಾಯಾಧೀಶರು ಸಮಿತಿಯ ಭಾಗವಾಗಿರತಕ್ಕದ್ದು ಅಥವಾ ಎಡಿಜೆ ಶ್ರೇಣಿಗಿಂತ ಕಡಿಮೆಯಿಲ್ಲದ ಯಾವುದೇ ಸದಸ್ಯರನ್ನು ನೇಮಿಸಬೇಕು ಎಂದು ಸುಪ್ರೀಂಕೋರ್ಟ್ ಸೋಮವಾರ ಆದೇಶ ಹೊರಡಿಸಿದೆ.



ಸಮಿತಿಗೆ ನೇಮಕಗೊಂಡವರು ನ್ಯಾಯಮೂರ್ತಿ ಶ್ರೀಕೃಷ್ಣರೊಂದಿಗೆ ಸಮಾಲೋಚಿಸಬಹುದು. ಸಮಾಲೋಚಿಸಿ ಸಮಿತಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು. ಅಲ್ಲದೇ ಅಧ್ಯಕ್ಷರು ಆಯ್ಕೆಯ ಮತವನ್ನು ಹೊಂದಿರುತ್ತಾರೆ. ಅಧ್ಯಕ್ಷರು ಮತ್ತು ಉಪಾಧ್ಯಕ್ಷರನ್ನ ಹೊರತುಪಡಿಸಿ ಸದಸ್ಯರು ಸಲಹೆ ನೀಡಬಹುದು. ಅಧ್ಯಕ್ಷರ ನಿರ್ಧಾರದ ಮೇಲೆ ಇತರ ಸದಸ್ಯರು ವೀಟೋ ಅಧಿಕಾರ ಚಲಾಯಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಇನ್ನು ಸರ್ಕಾರ ನಾಲ್ವರು ಖಾಸಗಿ ಸದಸ್ಯರನ್ನು ನೇಮಕ ಮಾಡಬಹುದು. ಆದ್ರೆ, ನಾಲ್ವರು ಖಾಸಗಿ ಸದಸ್ಯರು ಉಪಧಿವಾಂತರಾಗಿರಬೇಕು ಎಂದು ಕೆಲ ಸಲಹೆ ಸೂಚನೆಗಳನ್ನು ನೀಡಿ ಮುಂದಿನ ವಿಚಾರಣೆಯನ್ನು ಸೆಪ್ಟಂಬರ್‌ಗೆ ಮುಂದೂಡಿದೆ.

ಹೇಮಂತ್ ಸೊರೆನ್‌ಗೆ ಜಾಮೀನು: ಇಡಿ ಸಲ್ಲಿಸಿದ್ದ ಮೇಲ್ಮನವಿ ವಜಾ

ನವದೆಹಲಿ: ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಹೇಮಂತ್ ಸೊರೆನ್‌ಗೆ ಜಾಮೀನು ನೀಡಿರುವುದನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇಡಿ) ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಿರಸ್ಕರಿಸಿದ್ದು, ಜಾರ್ಖಂಡ್ ಹೈಕೋರ್ಟ್ ಅತ್ಯಂತ ತರ್ಕಬದ್ಧ ತೀರ್ಪು ನೀಡಿದೆ ಎಂದು ಹೇಳಿದೆ.



ಹೇಮಂತ್ ಸೊರೆನ್

ಜಾರ್ಖಂಡ್ ಹೈಕೋರ್ಟ್ ತೀರ್ಪನ್ನು ನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿ ಕೆವಿ ವಿಶ್ವನಾಥನ್ ಅವರನ್ನೊಳಗೊಂಡ ಸುಪ್ರೀಂಕೋರ್ಟ್‌ನ ದ್ವಿಸದಸ್ಯ ಪೀಠ ಎತ್ತಿ ಹಿಡಿದಿದೆ. ಪ್ರಕರಣದಲ್ಲಿ ರಾಜ್ಯ ಹೈಕೋರ್ಟ್‌ನ ಅವಲೋಕನಗಳು ವಿಚಾರಣಾ ನ್ಯಾಯಾಲಯದ ಮೇಲೆ ಪ್ರಭಾವ ಬೀರಬಾರದು. ಇದು ಅತ್ಯಂತ ತರ್ಕಬದ್ಧವಾದ ತೀರ್ಪು ಆಗಿದೆ. ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಿಸುವುದಿಲ್ಲ ಎಂದು ಸ್ಪಷ್ಟಪಡಿಸಿತು.

ಹೈಕೋರ್ಟ್ ಆದೇಶ ಎತ್ತಿ ಹಿಡಿದ ಸುಪ್ರೀಂಕೋರ್ಟ್!

ವಿಚಾರಣೆಯ ವೇಳೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್‌ವಿ ರಾಜು, ಸೊರೆನ್‌ಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ವಿರೋಧಿಸಿದರು. ಸೋರೆನ್ ವಿರುದ್ಧ ಇಡಿ ಪ್ರಕರಣವನ್ನು ದೃಢೀಕರಿಸುವ ದಾಖಲೆಗಳಿವೆ ಎಂದು ರಾಜು ಸುಪ್ರೀಂಕೋರ್ಟ್‌ಗೆ ತಿಳಿಸಿದರು.

ಸೊರೇನ್ ಅವರ ಜಾಮೀನು ರದ್ದುಗೊಳಿಸುವಂತೆ ರಾಜು ಬಲವಾದ ಮನವಿ ಮಾಡಿದರೂ, ಸುಪ್ರೀಂ ಕೋರ್ಟ್, ಅವರ ಹೇಳಿಕೆಗೆ ವಿಶ್ವಾಸಾರ್ಹತೆ ನೀಡಲು ನಿರಾಕರಿಸಿತು ಮತ್ತು ಹೇಮಂತ್ ಅವರಿಗೆ ಯಾಕೆ ಜಾಮೀನು ನೀಡಲಾಗಿದೆ ಎಂಬುದರ ಬಗ್ಗೆ ಹೈಕೋರ್ಟ್ ಮಾನ್ಯವಾದ ಕಾರಣ ನೀಡಿದೆ ಎಂದು ನ್ಯಾಯಪೀಠ ಹೇಳಿತು. ಇದರಿಂದಾಗಿ ವಿಚಾರಣಾ ನ್ಯಾಯಾಲಯ, ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ನಲ್ಲಿ ಹೋರಾಡುತ್ತಿದ್ದ ಹೇಮಂತ್ ಸೊರೇನ್ ಅವರಿಗೆ ಇದೀಗ ನೆಮ್ಮದಿ ಸಿಕ್ಕಂತಾಗಿದೆ.



ಅಭಿನಂದನೆ...

ಮೇಘಾಲಯದ ರಾಜ್ಯಪಾಲರಾಗಿ ನೇಮಕಗೊಂಡಿರುವ ಸಿ.ಎಚ್. ವಿಜಯಶಂಕರ್ ಅವರನ್ನು ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಅಭಿನಂದಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

‘ಅನೈರ್ಮಲ್ಯ ನಗರ’ವೆಂಬ ಅಪಖ್ಯಾತಿಯತ್ತ ಸಾಗುತ್ತಿದೆಯೇ ಮೈಸೂರು!?

● ಕಂಡಕಂಡಲ್ಲಿ ಕಸ; ಪರಿಣಾಮ ದುರ್ವಾಸನೆ ● ಸಾಂಕ್ರಾಮಿಕ ರೋಗ ಹರಡುವ ಭೀತಿಯಲ್ಲಿ ಜನ ● ತಲೆಕೆಡಿಸಿಕೊಳ್ಳದ ಪಾಲಿಕೆ ಆರೋಗ್ಯ ವಿಭಾಗ



ಮೈಸೂರಿನ ಬನ್ನಿಮಂಟಪದ ಕೈಗಾರಿಕಾ ಪ್ರದೇಶ ಎ ಲೇಔಟ್‌ನಲ್ಲಿರುವ ರಾಜಕಾಲುವೆಯ ದುಸ್ಥಿತಿ.

ಮೈಸೂರು,ಜು.29(ಪಿಎಂ)– ರಸ್ತೆಬದಿಯಲ್ಲಿ ರಾಶಿ ರಾಶಿ ತರಾವರಿ ತ್ಯಾಜ್ಯ... ಈ ಪೈಕಿ ಬಗೆ ಬಗೆಯ ಪ್ಲಾಸ್ಟಿಕ್ ತ್ಯಾಜ್ಯಯದ್ದೇ ಅಗ್ರಸ್ಥಾನ... ಅಂತೆಯೇ ಅಲ್ಲಿ ಹಸಿ–ಒಣ ಕಸದ ಮಿಶ್ರಣದಿಂದ ಹೊರಸೂಸುವ ದುರ್ವಾಸನೆ... ಮತ್ತೊಂಡೆಡೆ ರಾಜಕಾಲುವೆಯಲ್ಲೂ ಪ್ಲಾಸ್ಟಿಕ್ ಸೇರಿದಂತೆ ನಾನಾ ತ್ಯಾಜ್ಯದ ಕಾರುಬಾರು... ಜೊತೆಗೆ ಬೆಳೆದು ನಿಂತಿರುವ ಗಿಡಗಂಟಿಗಳ ನಡುವೆ ಸರಾಗವಾಗಿ ಹರಿಯದೇ ಅಲ್ಲಲ್ಲಿ ನಿಂತ ಕೊಳಚೆ ನೀರು... ಇಂತಹ ಅನೈರ್ಮಲ್ಯದ ತಾಣ ಸೊಳ್ಳೆ ಹಾಗೂ ನೊಣಗಳ ಸಂತನಾಭಿವೃದ್ಧಿಗೆ ವರದಾನವಾಗಿದೆ.

ಬನ್ನಿಮಂಟಪದ ಜೋಡಿ ತೆಂಗಿನ ಮರದ ಸ್ಮಶಾನ ರಸ್ತೆ, ಇಲ್ಲಿನ ಇಂಡಸ್ಟ್ರಿಯಲ್ ಎ ಲೇಔಟ್, ಹನುಮಂತನಗರದ ಬಹುತೇಕ ಸ್ಥಳದಲ್ಲಿ ಇಂತಹ ಅನೈರ್ಮಲ್ಯ ತಾಂಡವವಾಡುತ್ತಿದ್ದರೂ ಮೈಸೂರು ಮಹಾನಗರ ಪಾಲಿಕೆ ಕಣ್ಮುಚ್ಚಿ ಕುಳಿತಿದೆ. ಈ ರೀತಿಯ ದುಸ್ಥಿತಿ ಕೇವಲ ಈ ಪ್ರದೇಶಗಳಿಗೆ ಮಾತ್ರ ಸೀಮಿತವಾಗಿಲ್ಲ. ಮೈಸೂರು ನಗರದ ಹಲವೆಡೆ ಇದೇ ಪರಿಸ್ಥಿತಿ ಇದ್ದರೂ ಪಾಲಿಕೆ ಗಂಭೀರವಾಗಿ ತೆಗೆದುಕೊಂಡಿಲ್ಲ. ಜೀವಕ್ಕೆ ಮಾರಕವಾಗುವ ಡೆಂಗ್ಯೂ ಇಡೀ ರಾಜ್ಯವನ್ನೇ ಕಾಡುತ್ತಿದ್ದು, ಇದಕ್ಕೆ ಮೈಸೂರು ಸಹ ಹೊರತಲ್ಲ. ಈ ಸೋಂಕಿಗೆ ಮೂಲವೇ ಸೊಳ್ಳೆ.

ಮಳೆ ಬಂದಾಗ ಇಂತಹ ಸೊಳ್ಳೆಗಳಿಗೆ ಆಶ್ರಯತಾಣವಾಗುತ್ತಿವೆ ಮೈಸೂರಿನ ರಸ್ತೆ ಗುಂಡಿಗಳು. ಅನೈರ್ಮಲ್ಯವೇ ಅನಾರೋಗ್ಯಕ್ಕೆ ಕಾರಣವೆಂಬ ಸತ್ಯದ ಅರಿವಿದ್ದರೂ ಪಾಲಿಕೆ ಅಶುಚಿತ್ವದ ಸ್ಥಳಗಳನ್ನು ಸ್ವಚ್ಛಗೊಳಿಸಿ, ನಿರಂತರವಾಗಿ ಸ್ವಚ್ಛತೆ ಕಾಯ್ದುಕೊಳ್ಳುವಲ್ಲಿ ಬದ್ಧತೆಯನ್ನೇ ತೋರುತ್ತಿಲ್ಲ. ನಗರಪಾಲಿಕೆ ಆರೋಗ್ಯಾಧಿಕಾರಿ, ಸ್ಥಳ ಪರಿಶೀಲಿಸಿ, ಸ್ವಚ್ಛತೆಗೊಳಿಸಲು ಕ್ರಮ ವಹಿಸದೇ ಸಾಂಕ್ರಾಮಿಕ ರೋಗಗಳು ಹರಡುವ ಸನ್ನಿವೇಶಕ್ಕೆ ಕಾರಣರಾಗುತ್ತಿದ್ದಾರೆ ಎಂಬ ದೂರು ನಾಗರಿಕರಿಂದ ವ್ಯಾಪಕವಾಗಿ ಕೇಳಿ ಬರುತ್ತಿದೆ.

‘ಸ್ವಚ್ಛ ನಗರಿ’ ಎಂಬ ಹಿರಿಮೆ ಗಳಿಸಿದ್ದ ಮೈಸೂರು ಇದೀಗ ‘ಅನೈರ್ಮಲ್ಯ ನಗರ’ವೆಂಬ ಅಪಖ್ಯಾತಿಯತ್ತ ಸಾಗುವಂತಾಗುತ್ತಿದೆಯೇ ಎನ್ನುವಂತಾಗಿದೆ. ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನ ರಸ್ತೆಯಲ್ಲಿ ಹೈವೇ ವೃತ್ತದ ಬಳಿಯೇ ಹಳ್ಳಕೊಳ್ಳ ನಿರ್ಮಾಣಗೊಂಡು ಮಳೆ ಬಂದಾಗ ನೀರು ನಿಂತು ಸೊಳ್ಳೆಯ ಉತ್ಪತ್ತಿಗೆ ಕಾರಣವಾಗುತ್ತಿದೆ. ಮತ್ತೊಂದೆಡೆ ಸ್ಮಶಾನದ ಎದುರಿನ ಬಡಾವಣೆಯಿಂದ ಮಳೆ ಬಂದಾಗ ಒಳಚರಂಡಿಯ ನೀರು ರಸ್ತೆಯುದ್ದಕ್ಕೂ ಹರಿಯುವ ಸನ್ನಿವೇಶ ನಿರ್ಮಾಣವಾಗಿದೆ. ಎಷ್ಟೋ ದಿನಗಳಿಂದ ಇಲ್ಲಿ ಇದೇ ಪರಿಸ್ಥಿತಿ ಇದ್ದರೂ ಪಾಲಿಕೆ ಮಾತ್ರ ಪರಿಹರಿಸುವ ಗೋಜಿಗೆ ಮುಂದಾಗಿಲ್ಲ.

ಗುಂಡಿ ಉದ್ಭವ: ಹೈವೇ ವೃತ್ತದಿಂದ ಜೋಡಿ ತೆಂಗಿನಮರ ಸ್ಮಶಾನ ರಸ್ತೆಗೆ ಪ್ರವೇಶ ಪಡೆಯುತ್ತಿದ್ದಂತೆ ಗುಂಡಿಯೊಂದರ ದರ್ಶನವಾಗುತ್ತಿದೆ. ಇತ್ತೀಚೆಗಷ್ಟೇ ಈ ಗುಂಡಿ ಉದ್ಭವವಾಗಿದ್ದು, ಹತ್ತಿರದಲ್ಲಿ ಹೋಗಿ ನೋಡಿದರೆ ಸುಮಾರು ನಾಲ್ಕು ಅಡಿಯವರೆಗೆ ಆಳ ಉಂಟಾಗಿರುವುದು ಕಂಡು ಬರುತ್ತಿದೆ. ಸ್ಥಳೀಯರು ಇದರ ಸುತ್ತಲು ಇಟ್ಟಿಗೆ ಮತ್ತು ಗಿಡ–ಗಂಟಿ ಇಟ್ಟು ಪಾದಚಾರಿಗಳು ಹಾಗೂ ವಾಹನ ಸವಾರರು ಗುಂಡಿಯತ್ತ ಸುಳಿಯದಂತೆ ಮಾಡಿದ್ದಾರೆ. ಆದರೆ ಇದನ್ನು ಸರಿಪಡಿಸಬೇಕಾದ ಪಾಲಿಕೆ ಅಧಿಕಾರಿಗಳು ಮಾತ್ರ ಇತ್ತ ಸುಳಿಯುತ್ತಲೇ ಇಲ್ಲ.

ಕಟ್ಟುನಿಟ್ಟಿಲ್ಲದ ಪಾಲಿಕೆ ಕ್ರಮ; ಮತ್ತದೇ ದುಸ್ಥಿತಿ

ಹಳ್ಳ ಹಿಡಿಯಿತೇ ಪಾಲಿಕೆಯ ನೈಟ್ ರೇಡ್ ಕಾರ್ಯಾಚರಣೆ ಎಂಬ ಪ್ರಶ್ನೆ ಉದ್ಭವಿಸಿದೆ. ಕಾರಣ ಪಾಲಿಕೆ ಕಾರ್ಯಾಚರಣೆ ಮೂಲಕ ಸ್ವಚ್ಛಗೊಳಿಸಿದ್ದ ಸ್ಥಳಗಳು ಇದೀಗ ಮತ್ತೆ ಅದೇ ದುಸ್ಥಿತಿಗೆ ಮರಳಿವೆ. ರಾತ್ರಿ ವೇಳೆ ರಸ್ತೆಬದಿ ತ್ಯಾಜ್ಯ ಹಾಕುತ್ತಿದ್ದವರ ವಿರುದ್ಧ ಕಾರ್ಯಾಚರಣೆ ನಡೆಸುವ ಉತ್ಸಾಹ ಕೇವಲ ಒಂದೆರಡು ದಿನಕ್ಕೆ ಸೀಮಿತವಾಗಿದ್ದೇ ಇಂತಹ ದುರವಸ್ಥೆಗೆ ಕಾರಣವೆಂದು ನಾಗರಿಕರು ದೂರುತ್ತಿದ್ದಾರೆ.

ರಸ್ತೆಬದಿಯಲ್ಲಿ ಕಸ ಹಾಕುವುದನ್ನು ತಪ್ಪಿಸಲು ಮೈಸೂರು ಮಹಾನಗರ ಪಾಲಿಕೆ ಇತ್ತೀಚೆಗಷ್ಟೇ ನೈಟ್ ರೇಡ್ ಕಾರ್ಯಾಚರಣೆ ಪ್ರಾರಂಭಿಸಿತ್ತು. ಆ ಮೂಲಕ ಅಂತಹ ಅನೇಕ ಸ್ಥಳಗಳನ್ನು ಗುರುತಿಸಿ ಸ್ವಚ್ಛಗೊಳಿಸಿ ಅಲ್ಲಿ ಕಸ ಹಾಕದಂತೆ ಹಾಗೂ ಹಾಕಿದರೆ ದಂಡ ವಿಧಿಸುವ ಎಚ್ಚರಿಕೆ ಫಲಕ ಸಹ ಅಳವಡಿಸಿತ್ತು. ಆದರೆ ಇದೀಗ ಅಂತಹ ಸ್ಥಳಗಳಲ್ಲಿ ಮತ್ತೆ ತ್ಯಾಜ್ಯ ಗುಡ್ಡೆ ಹಿಡಿಯುವಂತಾಗಿದೆ. ಶಾಸ್ತ್ರಕ್ಕೆ ಎಂಬಂತೆ ಒಂದೆರಡು ದಿನ ಕಾರ್ಯಾಚರಣೆ ನಡೆಸಿ ಸುಮ್ಮನಾದ ಪ್ರತಿಫಲವಿದು ಎನ್ನದೇ ವಿಧಿಯಿಲ್ಲ ಎನ್ನುತ್ತಿದ್ದಾರೆ ಸಾರ್ವಜನಿಕರು.

ಬನ್ನಿಮಂಟಪದ (ಹನುಮಂತನಗರ) ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಪಕ್ಕದಲ್ಲಿ ಎಚ್ಚರಿಕೆ ಫಲಕ ಅಳವಡಿಸಿದ್ದರೂ ಮತ್ತೆ ಕಸ ಹಾಕಲಾಗುತ್ತಿದೆ. ಅಲ್ಲದೆ, ಇಲ್ಲಿನ ಖಾಲಿ ನಿವೇಶನವೂ ತ್ಯಾಜ್ಯದಿಂದ ಬಹುತೇಕ ತುಂಬಿ ಹೋಗಿದೆ. ಜೊತೆಗೆ ಬನ್ನಿಮಂಟಪ ಕೈಗಾರಿಕಾ ಎ ಬಡಾವಣೆ ಹಾಗೂ ಹನುಮಂತನಗರ ಮಧ್ಯೆ ಇರುವ ರಾಜಕಾಲುವೆ ಪಕ್ಕದ ರಸ್ತೆಬದಿಯಲ್ಲೂ ಇದೇ ರೀತಿ ಫಲಕ ಅಳವಡಿಸಿದ್ದರೂ ಮತ್ತೆ ಇಲ್ಲಿ ಕಸದ ರಾಶಿ ಗುಡ್ಡೆಯಿಡಿಯುವಂತಾಗಿದೆ. ಪಾಲಿಕೆ ಕಾರ್ಯಾಚರಣೆ ನಡೆಸಿ, ಸ್ವಚ್ಛಗೊಳಿಸಿದ ಇಂತಹ ಬಹುತೇಕ ಸ್ಥಳಗಳಲ್ಲಿ ಮತ್ತೆ ಅದೇ ದುಸ್ಥಿತಿ ನಿರ್ಮಾಣವಾಗಿದ್ದರೆ ಅಚ್ಚರಿಯಿಲ್ಲ. ಒಟ್ಟಾರೆ ಪಾಲಿಕೆ ಆರೋಗ್ಯ ವಿಭಾಗದ ನಿರ್ಲಕ್ಷ್ಯಕ್ಕೆ ನಗರದ ನೈರ್ಮಲ್ಯ ಕಣ್ಮರೆಯಾಗುತ್ತಿದೆ.



ಬನ್ನಿಮಂಟಪದ ಜೋಡಿ ತೆಂಗಿನಮರ ಸ್ಮಶಾನ ರಸ್ತೆಯಲ್ಲಿ ಇರುವ ಆಳುದ್ದ ಗುಂಡಿ.



ರಸ್ತೆಬದಿಯಲ್ಲಿ ತ್ಯಾಜ್ಯ ಗುಡ್ಡೆ ಹಿಡಿದಿರುವುದು. ಇದೇ ಸ್ಥಳದಲ್ಲಿ ನಗರಪಾಲಿಕೆ ಆಗಾಗ್ಗೆ ತ್ಯಾಜ್ಯ ವಿಲೇವಾರಿ ಪ್ರಕ್ರಿಯೆ ಸಹ ನಡೆಸುತ್ತಿದೆ.

ರಸ್ತೆಯಲ್ಲೇ ಕಸ ವಿಲೇವಾರಿ: ಜೋಡಿ ತೆಂಗಿನಮರ ಸ್ಮಶಾನ ರಸ್ತೆಯ ಬದಿಯಲ್ಲಿ (ಸ್ಮಶಾನದ ಕಾಂಪೌಂಡ್ ಕಡೆ) ಶುಚಿತ್ವ ಎನ್ನುವುದು ಮರೀಚಿಕೆಯಾಗಿದೆ. ಇಲ್ಲಿ ಉದ್ದಕ್ಕೂ ತರಾವರಿ ತ್ಯಾಜ್ಯ ಬಿದ್ದಿದ್ದು, ಅಲ್ಲಲ್ಲಿ ಕಸ ಗುಡ್ಡೆ ಸಹ ಹಿಡಿದಿದೆ. ಅಲ್ಲದೆ, ಇದೇ ರಸ್ತೆಬದಿಯು ಪಾಲಿಕೆಗೆ ಕಸ ವಿಲೇವಾರಿ ಘಟಕವೂ ಆಗಿ ಪರಿಣಮಿಸಿದೆ! ಆಗಾಗ್ಗೆ ಇಲ್ಲಿ ತ್ಯಾಜ್ಯ ತುಂಬಿದ ಆಟೋಗಳನ್ನು ಸಾಲಾಗಿ ನಿಲ್ಲಿಸಿ ತ್ಯಾಜ್ಯ ವಿಲೇವಾರಿ ಪ್ರಕ್ರಿಯೆ ಸಹ ನಡೆಸಲಾಗುತ್ತಿದ್ದು, ಇದು ಸಹ ಈ ರಸ್ತೆಯ ಅನೈರ್ಮಲ್ಯಕ್ಕೆ ಕಾರಣವಾಗುತ್ತಿದೆ. ಕಸ ವಿಲೇವಾರಿ ಪ್ರಕ್ರಿಯೆಗೆ ಸೂಕ್ತ ಸ್ಥಳ ನಿಗದಿಪಡಿಸಿಕೊಳ್ಳಲು ಪಾಲಿಕೆಗೆ ಸಾಧ್ಯವಾಗದೇ ಇರುವುದು ವಿಪರ್ಯಾಸವೇ ಸರಿ.

ಇದೇ ರಸ್ತೆಯಲ್ಲಿ ಹಾದು ಹೋಗಿರುವ ರಾಜಕಾಲುವೆಯಲ್ಲಿ (ಜೆಎನ್ ನರ್ಮ್ ಯೋಜನೆಯಡಿ ಮನೆಗಳು ಇರುವ ಎದುರು) ಗಿಡ ಗಂಟಿ ಬೆಳೆದಿರುವುದು ಮಾತ್ರವಲ್ಲದೆ, ಮರದ ರೆಂಬೆ–ಕೊಂಬೆಗಳು ಬಿದ್ದಿವೆ. ಜೊತೆಗೆ ಪ್ಲಾಸ್ಟಿಕ್ ಮಾತ್ರವಲ್ಲದೆ, ವಿವಿಧ ರೀತಿಯ ತ್ಯಾಜ್ಯಗಳು ಇದ್ದು, ಇಲ್ಲಿ ಸೂಸುವ ದುರ್ವಾಸನೆಯು ವಾಕರಿಕೆ ತರುತ್ತದೆ. ಅಲ್ಲದೆ, ಇಲ್ಲಿಂದ ತಿರುವು ಪಡೆದು ಹನುಮಂತನಗರದತ್ತ ಸಾಗಿರುವ ರಾಜಕಾಲುವೆಯಲ್ಲಿ ಅಲ್ಲಲ್ಲಿ ತ್ಯಾಜ್ಯ ತಾಂಡವವಾಡುತ್ತಿದ್ದು, ಇದೂ ಸೇರಿದಂತೆ ಇಲ್ಲಿ ಬೆಳೆದಿರುವ ಗಿಡಗಂಟಿ ತೆರವುಗೊಳಿಸಿ, ನೀರು ಸರಾಗವಾಗಿ ಸಾಗುವಂತೆ ಮಾಡಬೇಕೆಂಬುದನ್ನು ನಗರಪಾಲಿಕೆ ಮರೆತೇ ಬಿಟ್ಟಂತಿದೆ.





ಬನ್ನಿಮಂಟಪದ (ಹನುಮಂತನಗರ) ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸಮೀಪ ರಸ್ತೆಬದಿಯಲ್ಲಿ ಸ್ವಚ್ಛಗೊಳಿಸಿದ್ದ ಸ್ಥಳದಲ್ಲಿ ಮತ್ತೆ ತ್ಯಾಜ್ಯ ಸುರಿದಿರುವುದು. ಮತ್ತೊಂದು ಚಿತ್ರದಲ್ಲಿ ರಾಜಕಾಲುವೆ ಪಕ್ಕದ ರಸ್ತೆಯಲ್ಲಿಯೂ ಸ್ವಚ್ಛಗೊಳಿಸಿದ್ದ ಸ್ಥಳದಲ್ಲಿ ಮತ್ತೆ ತ್ಯಾಜ್ಯ ಹಾಕಿರುವುದು.

ಮೈಸೂರಿನ ಮಣಿಪಾಲ್ ಆಸ್ಪತ್ರೆ ಕಾಪಿಕಾನ್‌ನೊಂದಿಗೆ ಪಾಲುದಾರಿಕೆ



ಮಂಡ್ಯ ಇನ್‌ಸ್ಟಿಟ್ಯೂಟ್ ಓಫ್ ಮೆಡಿಕಲ್ ಸೈನ್ಸ್ ಮತ್ತು ಮಂಡ್ಯದ ಬಾಲಗಂಗಾಧರನಾಥ ಆದಿಚುಂಚನಗಿರಿ ವಿಶ್ವವಿದ್ಯಾಲಯದಲ್ಲಿ ಕಾಪಿಕಾನ್–2024 ಸಮ್ಮೇಳನ ಜು.26ರಿಂದ 28ರವರೆಗೆ ನಡೆಯಿತು.

ಮೈಸೂರು, ಜು. 29– ಕರ್ನಾಟಕದ 41ನೇ ವಾರ್ಷಿಕ ಸಮ್ಮೇಳನವಾಗಿರುವ ಕಾಪಿಕಾನ್–2024, ಜುಲೈ 26ರಿಂದ 28ರವರೆಗೆ ಮಂಡ್ಯ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ (MIMS) ಮತ್ತು ಮಂಡ್ಯದ ಬಾಲಗಂಗಾಧರನಾಥ ಆದಿಚುಂಚನಗಿರಿ ವಿಶ್ವವಿದ್ಯಾಲಯದಲ್ಲಿ ನಡೆಯಿತು.

ಮೈಸೂರಿನ ಮಣಿಪಾಲ್ ಆಸ್ಪತ್ರೆಯು ಈ ಕಾರ್ಯಕ್ರಮಕ್ಕಾಗಿ ಕರ್ನಾಟಕದೊಂದಿಗೆ ಕೈಜೋಡಿಸಿದ್ದು, ಆ ಮೂಲಕ ವೈದ್ಯಕೀಯ ಜ್ಞಾನವನ್ನು ಹೆಚ್ಚಿಸುವುದು ಮತ್ತು ಆರೋಗ್ಯ ರಕ್ಷಣೆಯಲ್ಲಿ ವೃತ್ತಿಪರ ಬೆಳವಣಿಗೆಯನ್ನು ಬೆಂಬಲಿಸಲು ಅವರ ಬದ್ಧತೆಯನ್ನು ಹೊಂದಿದೆ. 800–1000 ವೈದ್ಯರು ಮತ್ತು ವೈದ್ಯಕೀಯ ಸ್ನಾತಕೋತ್ತರ ಪದವೀಧರರು ಹಾಜರಿದ್ದು, ಈ ಸಮ್ಮೇಳನವು ಕರ್ನಾಟಕ ಮತ್ತು ಹೊರಗಿನ ವೈದ್ಯಕೀಯ ವೃತ್ತಿಪರರನ್ನು ಸಂಪರ್ಕಿಸುವ ಪ್ರಮುಖ ಕಾರ್ಯಕ್ರಮವಾಗಿ ಹೊರಹೊಮ್ಮಿತು.

ಸಮ್ಮೇಳನದಲ್ಲಿ ಮಣಿಪಾಲ್ ಆಸ್ಪತ್ರೆಯ ಡಾ.ಮಹದೇವ್, ಡಾ.ಲಕ್ಷ್ಮೀ ನರಸಿಂಹನ್ ಮತ್ತು ಡಾ.ರಾಜೀವ್ ಲೋಚನ್ ಮಾಹಿತಿಯುಕ್ತ ಉಪನ್ಯಾಸಗಳನ್ನು ನೀಡಿದರು.

8 ತಿಂಗಳ ಬಳಿಕ ಕೋಮಾದಿಂದ ಹೊರಬಂದು ಲಾರಿ ಡಿಕ್ಕಿಯಾಗಿ ಸತ್ತ!

ಫ್ಲೋರಿಡಾ: ವರ್ಷಗಳ ಹಿಂದೆ ಸಂಭವಿಸಿದ ಬೈಕ್ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಕೋಮಾ ಸ್ಥಿತಿಗೆ ಜಾರಿದ್ದವನಿಗೆ ಬರೋಬ್ಬರಿ 244 (ಎಂಟು ತಿಂಗಳು) ದಿನಗಳ ಬಳಿಕ ಪ್ರಜ್ಞೆ ಬಂದಿತ್ತು. ಇದೊಂದು ಪವಾಡ ಎಂದು ವೈದ್ಯರು ಹೇಳಿದ್ದರು. ಆದರೆ, ವಿಧಿಯಾಟ ಬೇರೆ ಇತ್ತು. ಕೆಲವೇ ದಿನಗಳ ಹಿಂದೆ ಸಂಭವಿಸಿದ ಅಪಘಾತದಲ್ಲಿ ಆತ ಜೀವ ಬಿಟ್ಟಿದ್ದಾನೆ. ಡ್ರೂ ಕೊಹ್ನ್‌ಗೆ 22 ವರ್ಷ ವಯಸ್ಸಾಗಿದ್ದಾಗ 2017ರಲ್ಲಿ ಬೈಕ್ ಅಪಘಾತ ಸಂಭವಿಸಿತ್ತು. ಗಂಭೀರವಾಗಿ ಗಾಯಗೊಂಡಿದ್ದ ಡ್ರೂ ಕೊಹ್ನ್ ಮಿದುಳಿಗೆ ಗಾಯವಾಗಿತ್ತು. ಅಂದಿನಿಂದಲೂ ಆತನ ಚಿಕಿತ್ಸೆ ಮುಂದುವರೆದಿತ್ತಾದರೂ ಕಳೆದ ವರ್ಷ ಆತ ಕೋಮಾಗೆ ಜಾರಿದ್ದ. ಇನ್ನೇನು ಆತ ಬದುಕುಳಿಯುವ ಸಾಧ್ಯತೆ ಅತೀ ಕಡಿಮೆ ಎಂದು ಡ್ರೂ ಕೊಹ್ನ್ ಅವರ ತಾಯಿಗೆ ಮನವರಿಕೆ ಮಾಡಿದ ವೈದ್ಯರು, ಆತನ ಅಂಗಾಂಗ ದಾನ ಮಾಡಿ ಬೇರೆಯವರಿಗೆ ನೆರವಾಗಿ ಎಂದು ಮನವಿ ಮಾಡಿದರು. ಆದರೆ, ತನ್ನ ಮಗನ ಬಗ್ಗೆ ಅಪಾರ ಪ್ರೀತಿ ಹೊಂದಿದ್ದ ಡ್ರೂ ಕೊಹ್ನ್ ತಾಯಿ, ಆತನ ಅಂಗಾಂಗ ದಾನ ಮಾಡಲು ನಿರಾಕರಿಸಿದ್ದರು. ಆತ ಬದುಕುಳಿಯುತ್ತಾನೆ. ಪ್ರಜ್ಞೆ ಮರಳಿ ಬರುತ್ತದೆ ಎಂದು ಭರವಸೆ ಹೊಂದಿದ್ದರು.



ಬಿ.ಎಸ್. ಶೋಭಾಗೆ ಪಿಎಚ್.ಡಿ



ಮೈಸೂರು, ಜು.29– ಡಾ. ಆರ್. ದೀಪ ಅವರ ಮಾರ್ಗದರ್ಶನದಲ್ಲಿ ಬಿ.ಎಸ್. ಶೋಭಾ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ಕ್ಲಾಸಿಫಿಕೇಷನ್ ಅಂಡ್ ಟ್ರಾಕಿಂಗ್ ಆಫ್ ವೆಹಿಕಲ್ಸ್ ಇನ್ ಟ್ರಾಫಿಕ್ ವೀಡಿಯೋಸ್ ಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಕಮಲ ಚಕ್ರವ್ಯೂಹವನ್ನು 6 ಮಂದಿ ನಿಯಂತ್ರಿಸುತ್ತಾರೆ



ನವದೆಹಲಿ: ಮೋದಿ ನೇತೃತ್ವದ ಬಿಜೆಪಿ ಸರ್ಕಾರವು ಯುವಕರು, ರೈತರು, ಮಹಿಳೆಯರು ಮತ್ತು ಸಣ್ಣ ಉದ್ಯಮಗಳ ಸುತ್ತ ಚಕ್ರವ್ಯೂಹವನ್ನು (ಮಹಾಭಾರತದ ಮಹಾಕಾವ್ಯದಲ್ಲಿ ಉಲ್ಲೇಖಿಸಿರುವ ಯುದ್ಧ ರಚನೆ) ರಚಿಸುತ್ತಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ.

ಸದನವನ್ನು ಉದ್ದೇಶಿಸಿ ಮಾತನಾಡಿದ ಅವರು, ಕಮಲ (ಬಿಜೆಪಿಯ ಚಿಹ್ನೆ) ರಚನೆಯ ಕೇಂದ್ರದಲ್ಲಿ ನರೇಂದ್ರ ಮೋದಿ, ಅಮಿತ್ ಷಾ, ಮೋಹನ್ ಭಾಗವತ್, ಅಜಿತ್ ಧೋವಲ್, ಮುಖೇಶ್ ಅಂಬಾನಿ ಮತ್ತು ಗೌತಮ್ ಅದಾನಿ 6 ಜನರು ಇದ್ದಾರೆ. ಸಾವಿರಾರು ವರ್ಷಗಳ ಹಿಂದೆ, ಕುರುಕ್ಷೇತ್ರದ ಚಕ್ರವ್ಯೂಹದಲ್ಲಿ ಅಭಿಮನ್ಯುವನ್ನು ಆರು ಜನರು ಕೊಂದರು. ನಾನು ಸ್ವಲ್ಪ ಸಂಶೋಧನೆ ಮಾಡಿದ್ದೇನೆ. ಚಕ್ರವ್ಯೂಹವನ್ನು ಪದ್ಮವ್ಯೂಹ ಎಂದೂ ಕರೆಯುತ್ತಾರೆ. ಅದು ಕಮಲದ ಆಕಾರದಲ್ಲಿದೆ ಎಂದು ಅಧ್ಯಯನದ ನಂತರ ತಿಳಿಯಿತು ಎಂದು ರಾಹುಲ್ ಹೇಳಿದರು.

ಚಕ್ರವ್ಯೂಹವು ಕಮಲದ ಹೂವಿನ ಆಕಾರದಲ್ಲಿದೆ. 21ನೇ ಶತಮಾನದಲ್ಲಿ ಹೊಸ ಚಕ್ರವ್ಯೂಹವನ್ನು ರಚಿಸಲಾಗಿದೆ. ಅದರ ಚಿಹ್ನೆಯನ್ನು ಪ್ರಧಾನಿ ಮೋದಿ ಎದೆಯ ಮೇಲೆ ಧರಿಸುತ್ತಾರೆ. ಹೇಗೆ ಅಭಿಮನ್ಯು ಚಕ್ರವ್ಯೂಹದಲ್ಲಿ ಸಿಕ್ಕಿಬಿದ್ದನೋ ಅದೇ ಈಗ ಭಾರತಕ್ಕೆ ಆಗುತ್ತಿದೆ. ದೇಶದ ಯುವಕರು, ರೈತರು, ತಾಯಂದಿರು ಮತ್ತು ಸಹೋದರಿಯರ ಅದೇ ರೀತಿ ಮಾಡಲಾಗುತ್ತಿದೆ. ದ್ರೋಣಾಚಾರ್ಯ, ಕರ್ಣ, ಕೃಪಾಚಾರ್ಯ, ಕೃತವರ್ಮ, ಅಶ್ವತ್ಥಾಮ ಮತ್ತು ಶಕುನಿ ಅಭಿಮನ್ಯುವನ್ನು ಸುತ್ತುವರೆದು ಕೊಂದರು. ಇಂದಿಗೂ ಚಕ್ರವ್ಯೂಹದಲ್ಲಿ ಆರು ಜನರಿದ್ದಾರೆ. ಆರು ಜನರು ಕೇಂದ್ರವನ್ನು ನಿಯಂತ್ರಿಸುತ್ತಾರೆ ಎಂದು ಹೇಳಿದರು.

ಒಂದನೇ ಪುಟದಿಂದ

ಕೇಂದ್ರದಿಂದ ಮಾರ್ಗಸೂಚಿ ಬಿಡುಗಡೆ

ಒತ್ತಡ ತಗ್ಗಿಸುವುದು ಹಾಗೂ ಪ್ರಾಯೋಗಿಕ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡುವ ಉದ್ದೇಶವನ್ನು ಇದು ಹೊಂದಿದೆ. ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನ (ಎನ್‌ಸಿಇಆರ್‌ಟಿ) ಅಂಗಸಂಸ್ಥೆಯಾದ ಪಂಡಿತ್ ಸುಂದರ್‌ಲಾಲ್ ಶರ್ಮಾ (ಪಿಎಸ್‌ಎಸ್) ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಫಾರ್ ವೊಕೇಷನಲ್ ಎಜುಕೇಷನ್ ಈ ಕುರಿತು ಮಾರ್ಗಸೂಚಿಯನ್ನು ಅಭಿವೃದ್ಧಿಪಡಿಸಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ (2020) ನಾಲ್ಕನೇ ವರ್ಷಾಚರಣೆ ಸಂದರ್ಭದಲ್ಲಿ ಅದನ್ನು ಬಿಡುಗಡೆ ಮಾಡಲಾಗಿದೆ.

6ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ 10 ದಿನಗಳ ಬ್ಯಾಗ್‌ರಹಿತ ದಿನಗಳನ್ನು ಪರಿಚಯಿಸಬೇಕು ಎಂದು ಎನ್‌ಇಪಿ–2020 ಶಿಫಾರಸು ಮಾಡಿತ್ತು. ಅದಕ್ಕೆ ಪೂರಕವಾಗಿ ಮಾರ್ಗಸೂಚಿ ಹೊರಡಿಸಲಾಗಿದೆ.

ಮಾರ್ಗಸೂಚಿಯಲ್ಲಿ ಏನಿದೆ: ಶಿಕ್ಷಣದ ಜತೆಗೆ ಮಕ್ಕಳಲ್ಲಿ ಕೌಶಲ ವೃದ್ಧಿಸುವುದು ಹಾಗೂ ಆ ಮೂಲಕ ಅವರ ಭವಿಷ್ಯದ ವೃತ್ತಿ ಮಾರ್ಗಕ್ಕೆ ನೆರವಾಗುವ ಉದ್ದೇಶವನ್ನು ಒಳಗೊಂಡಿದೆ. ಮರಗೆಲಸ, ವಿದ್ಯುತ್ ಕೆಲಸ, ಲೋಹದ ಕೆಲಸ, ತೋಟಗಾರಿಕೆ, ಕುಂಬಾರಿಕೆ ಸೇರಿದಂತೆ ವಿವಿಧ ವೃತ್ತಿಪರ ಕುಶಲತೆಯನ್ನು ವಿದ್ಯಾರ್ಥಿಗಳು ಈ ಅವಧಿಯಲ್ಲಿ ಕಲಿಯುವ ಅವಕಾಶ ಪಡೆಯಲಿದ್ದಾರೆ. ರಾಜ್ಯಗಳು ಮತ್ತು ಸ್ಥಳೀಯ ಸಮುದಾಯದವರು ಸ್ಥಳೀಯ ಕೌಶಲ ಅಗತ್ಯಗಳಿಗೆ ತಕ್ಕಂತೆ ಇವುಗಳನ್ನು ನಿರ್ಧರಿಸಬಹುದು. 6ರಿಂದ 8ನೇ ತರಗತಿ ಓದುವ ಪ್ರತಿ ವಿದ್ಯಾರ್ಥಿಯೂ ಒಂದು ಕೋರ್ಸ್ ಅನ್ನು ಆಯ್ಕೆ ಮಾಡಿ ಕೊಳ್ಳಬೇಕು. ಬ್ಯಾಗ್‌ರಹಿತ 10 ದಿನಗಳ ಅವಧಿಯಲ್ಲಿ ಈ ವಿದ್ಯಾರ್ಥಿಗಳು ಬಡಗಿಗಳು, ತೋಟಗಾರಿಕೆಯಲ್ಲಿ ತೊಡಗಿರುವವರು, ಕುಂಬಾರರು ಮತ್ತು ಇತರ ಸ್ಥಳೀಯ ವೃತ್ತಿಪರ ತಜ್ಞರ ಬಳಿ ‘ಇಂಟರ್ನ್’ ಆಗಿ ಕಾರ್ಯ ನಿರ್ವಹಿಸಬೇಕು. ಶೈಕ್ಷಣಿಕ ವರ್ಷದಲ್ಲಿ ಎರಡು ಅಥವಾ ಮೂರು ಹಂತಗಳಲ್ಲಿ 10 ದಿನಗಳ ಬ್ಯಾಗ್‌ರಹಿತ ದಿನಗಳ ಚಟುವಟಿಕೆಗಳಿಗೆ ಅವಕಾಶ ಕಲ್ಪಿಸುವುದು ಸೂಕ್ತ

ಅಭಿವೃದ್ಧಿಗೆ ಬೃಂದಾವನಕ್ಕೆ ಹೊಸರೂಪ

ಯಾರ ಜಮೀನು ವಶಪಡಿಸಿಕೊಳ್ಳುವುದಿಲ್ಲ. ಸರ್ಕಾರದ ಜಮೀನಿನಲ್ಲೇ ಅಭಿವೃದ್ಧಿ ಮಾಡಲಾಗುವುದು. ಇಷ್ಟವಿದ್ದವರು ಜಮೀನು ನೀಡಬಹುದು. ಯಾರಿಗೂ ಒತ್ತಾಯ ಮಾಡುವುದಿಲ್ಲ. ಅಣೆಕಟ್ಟಿನ ಭದ್ರತೆಯನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ರೂಪಿಸಲಾಗುವುದು ಎಂದು ಹೇಳಿದರು.

ಕನ್ನಂಬಾಡಿ ಕಟ್ಟೆ ನಮ್ಮೆಲ್ಲರ ಅನ್ನದ ತಟ್ಟೆ: ಕನ್ನಂಬಾಡಿ ಕಟ್ಟೆ ನಮ್ಮೆಲ್ಲರ ಅನ್ನದ ತಟ್ಟೆ. ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಮತ್ತು ತಮಿಳುನಾಡಿನವರು ಈ ನದಿಯ ಮೂಲಕ ಅನ್ನ ಬೆಳೆಯುತ್ತಿದ್ದೇವೆ. ಎಲ್ಲರ ಪಾಲಿನ ಜೀವನದಿ ಕಾವೇರಿಗೆ 92 ವರ್ಷ ಕಳೆದರೂ ನಮನ ಸಲ್ಲಿಸುತ್ತಿದ್ದೇವೆ. ತಾಯಿ ಚಾಮುಂಡೇಶ್ವರಿಯಲ್ಲಿ ಈ ವರ್ಷ ಉತ್ತಮ ಮಳೆಯಾಗಲಿ ಎಂದು ಬೇಡಿಕೊಂಡಿದ್ದೆವು. ನಮ್ಮ ಬದುಕು ಉಳಿಸು ಎಂದು ಭಕ್ತಿಯಿಂದ ಪ್ರಾರ್ಥನೆ ಸಲ್ಲಿಸಿದ್ದೆವು, ಮನುಷ್ಯ ಪ್ರಯತ್ನಕ್ಕೆ ಸೋಲಾಗಬಹುದು. ಆದರೆ ಪ್ರಾರ್ಥನೆಗೆ ಎಂದೂ ಸೋಲಾಗುವುದಿಲ್ಲ ಎನ್ನುವುದಕ್ಕೆ ಕಾವೇರಿ ತಾಯಿ ತುಂಬಿ ಹರಿಯುತ್ತಿರುವುದೇ ಸಾಕ್ಷಿ. ಸ್ವರ್ಣಗೌರಿ ಹಬ್ಬದ ದಿನ ಮನೆಯ ಹೆಣ್ಣುಮಕ್ಕಳಿಗೆ ಬಾಗಿನ ಅರ್ಪಿಸಿದಂತೆ ಶುಭಗಳಿಗೆಯ ಅಭಿಜಿನ್ ಲಗ್ನದಲ್ಲಿ ಕಾವೇರಿ ತಾಯಿಗೆ ಬಾಗಿನ ಅರ್ಪಿಸಲಾಗಿದೆ ಎಂದರು.

ತಮಿಳುನಾಡಿಗೆ ನಾನು ಅಥವಾ ಸಿದ್ದರಾಮಯ್ಯ ಅವರು ನೀರು ಬಿಟ್ಟಿಲ್ಲ. ತಾಯಿ ಕೃಪೆಯಿಂದ ಹೆಚ್ಚು ಮಳೆ ಬಂದಿದೆ ಆದ ಕಾರಣ ನೀರು ಅವರಿಗೆ ಹೋಗಿದೆ. ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದ ನಂತರ ಮಳೆ ಬರಲಿಲ್ಲ, ನೀರು ಬರಲಿಲ್ಲ ಎಂದು ಅಪಪ್ರಚಾರ ಮಾಡುತ್ತಿದ್ದರು. ಅವರಿಗೆಲ್ಲ ಈಗ ತಕ್ಕ ಉತ್ತರ ಸಿಕ್ಕಿದೆ. ಮೇಲೆ ಇರುವ ಮೋಡಕ್ಕೆ ಕೆಳಗೆ ಯಾವ ಸರ್ಕಾರ ಅಧಿಕಾರದಲ್ಲಿ ಇದೆ ಎನ್ನುವುದು ಗೊತ್ತಿರುವುದಿಲ್ಲ ಎಂದು ಹೇಳಿದರು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಬರ ಬರುತ್ತದೆ ಎಂದು ಟೀಕೆ ಮಾಡಿದರು. ಆದರೂ ನಾವು ಜನಪರವಾಗಿ ಕೆಲಸ ಮಾಡಿದೆವು. ಏಕೆಂದರೆ ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ. ಯಾರನ್ನೂ ನಾನು ಟೀಕೆ ಮಾಡುವುದಿಲ್ಲ. ನಮ್ಮ ಕೆಲಸಗಳು ಅವರಿಗೆ ಮುಂದಿನ ದಿನಗಳಲ್ಲಿ ಉತ್ತರ ನೀಡುತ್ತವೆ ಎಂದು ತಿಳಿಸಿದರು.

ಕಾವೇರಿ ಜಲಾನಯನ ಪ್ರದೇಶಕ್ಕೆ ಹೊಸ ರೂಪ ನೀಡಲು ನಮ್ಮ ಸರ್ಕಾರ ಮುಂದಾಗಿದೆ. ಕಳೆದ ವರ್ಷ ಎಲ್ಲಾ ಕಾಲುವೆಗಳನ್ನು ಸ್ವಚ್ಛಗೊಳಿಸಲಾಗಿದೆ. ಕಾಲುವೆಯ ಕೊನೆ ಭಾಗದ ರೈತರಿಗೂ ನೀರು ತಲುಪಬೇಕು ಎಂದು 1964–65 ರ ಕಾನೂನಿಗೆ ತಿದ್ದುಪಡಿ ತಂದು ಈ ಬಾರಿಯ ವಿಧಾನಸಭೆಯಲ್ಲಿ ಮಂಡನೆ ಮಾಡಿ ಹೊಸ ಕಾನೂನು ತಂದಿದ್ದೇವೆ. ರೈತರ ಬದುಕು ಹಸನಾಗಬೇಕು ಎಂದು ಜಿಲ್ಲೆಯಲ್ಲಿ ಕೃಷಿ ವಿಶ್ವವಿದ್ಯಾನಿಲಯ ಸ್ಥಾಪಿಸಬೇಕು ಎಂಬ ಕನಸನ್ನು ಸಚಿವ ಚಲುವರಾಯಸ್ವಾಮಿ ಅವರು ಹೊಂದಿದ್ದಾರೆ. ಇದು ಮಂಡ್ಯ ಜಿಲ್ಲೆಯ ರೈತರ ಬದುಕಿಗೆ ದೊಡ್ಡ ಮಾರ್ಗದರ್ಶನ ಸಿಗಲಿದೆ. ರೈತನಿಗೆ ಬಡ್ತಿ, ಸಂಬಳ, ನಿವೃತ್ತಿ ಎಂಬುದಿಲ್ಲ. ಆದ ಕಾರಣಕ್ಕೆ ರೈತರನ್ನು ನಾವು ಉಳಿಸಬೇಕಿದೆ ಎಂದರು.

ನೀರುಗಂಟಿ, ರೈತ, ಎಂಜಿನಿಯರ್‌ಗೆ ಪ್ರಶಸ್ತಿ: ಮುಂದಿನ ವರ್ಷ ಕಬಿನಿ, ಕೆಆರ್‌ಎಸ್, ಹೇಮಾವತಿ ವಿಭಾಗದಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸಿದ ಮೂವರು ನೀರುಗಂಟಿ(ಸವಡೆಯರು), ಓರ್ವ ಪ್ರಗತಿಪರ ರೈತ ಮತ್ತು ಓರ್ವ ಎಂಜಿನಿಯರ್ ಅನ್ನು ಗುರುತಿಸಿ ಅವರಿಗೆ ಕಾವೇರಿ ನೀರಾವರಿ ನಿಗಮದಿಂದ ಪ್ರಶಸ್ತಿ ನೀಡಲಾಗುವುದು ಎಂದು ಡಿ.ಕೆ.ಶಿವಕುಮಾರ್ ಘೋಷಿಸಿದರು.

ಅಂಧರ ಸಹಕಾರ ಸಂಘಗಳಿಗಾಗಿ ನೂತನ ಸಾಫ್ಟ್‌ವೇರ್

ಸಿತಾರಾ ಸಾಫ್ಟ್‌ವೇರ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ರಂಗರಾವ್ ಕೃಷ್ಣ ಮಾಹಿತಿ

ಮೈಸೂರು, ಜು.29–ನಗರದ ಸಿತಾರಾ ಐಟಿ ಇನೋವೇಷನ್ಸ್ ಪ್ರೈವೇಟ್ ಲಿ. ವತಿಯಿಂದ ನಗರದ ಜೆ.ಎಲ್.ಬಿ ರಸ್ತೆಯ ಖಾಸಗಿ ಹೋಟೆಲ್‌ನಲ್ಲಿ ಅಂಧರಿಗಾಗಿ ಏಷ್ಯಾದಲ್ಲಿ ಮೊಟ್ಟ ಮೊದಲ ಬಾರಿಗೆ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಗಳಿಗಾಗಿ ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದೆ.

ಕಾರ್ಯಕ್ರಮದಲ್ಲಿ ಸಿತಾರಾ ಸಾಫ್ಟ್‌ವೇರ್ ಕಂಪನಿ ಅಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕ ರಂಗರಾವ್ ಕೃಷ್ಣ ಮಾತನಾಡಿ, ಏಷ್ಯಾದಲ್ಲಿಯೇ ಮೊಟ್ಟಮೊದಲ ಬಾರಿಗೆ ಅಂಧರಿಗಾಗಿ ಕ್ರೆಡಿಟ್‌ಕೋ–ಆಪರೇಟಿವ್ ಸೊಸೈಟಿಗಳಿಗಾಗಿ ಸಾಫ್ಟ್‌ವೇರ್‌ನ್ನು ಅಭಿವೃದ್ಧಿಪಡಿಸಿ, ಸಹಕಾರ ಸಂಘಗಳು, ಸಾರ್ವಜನಿಕ ವಿತರಣಾ ವ್ಯವಸ್ಥೆ, ಅತೀ ಹೆಚ್ಚು ಗ್ರಾಹಕರನ್ನು ಒಳಗೊಂಡಿರುವ ಇನ್ನಿತರ ಚಟುವಟಿಕೆಗಳನ್ನು ಹೊಂದಿರುವುದರಿಂದ ಲೆಕ್ಕಪತ್ರ ಹಾಗೂ ಪುಸ್ತಕಗಳ ವಹಿವಾಟು ನಡೆಸಲು ಪ್ರಸ್ತುತ ಸಂದರ್ಭದಲ್ಲಿ ಕಷ್ಟಕರವಾಗಿದೆ. ಆದ್ದರಿಂದ ಇದಕ್ಕೆ ಪರಿಹಾರವಾಗಿ ನೂತನವಾಗಿ ಸಿತಾರಾ ಐಟಿ ಇನೋವೇಷನ್ ಕಂಪನಿಯು ಸುಸ್ಥಿರ ಹೊಂದಿರುವ ಅಭಿವೃದ್ಧಿಯನ್ನು ಸಾಫ್ಟ್‌ವೇರ್‌ನಲ್ಲಿ ಒದಗಿಸಿದೆ. ಅದರಲ್ಲೂ ಅಂಧರ ಸಹಕಾರ ಸಂಘಗಳಿಗೆ ಸಾಫ್ಟ್‌ವೇರ್ ಅನ್ನು ಸಿದ್ಧಪಡಿಸುವುದು ಒಂದು ದೊಡ್ಡ ಸವಾಲಾಗಿತ್ತು. ಏಕೆಂದರೆ ಅದರ ಬಳಕೆಗೆ ಅನುಗುಣವಾಗಿ ಅಂಧರಿಗೆ ಕಾರ್ಯಗತಗೊಳಿಸಲು ಮೌಖಿಕವಾದ ಸೂಚನೆಗಳನ್ನು ಸಾಫ್ಟ್‌ವೇರ್‌ನಲ್ಲಿ ತಿಳಿಸಬೇಕಿತ್ತು. ಅದನ್ನು ವಿಶೇಷವಾಗಿ ಧ್ವನಿ ಆಧಾರಿತ ಸೂಚನೆಗಳನ್ನು ಅಳವಡಿಸಿ ಕಂಪ್ಯೂಟರ್‌ನ್ನು ನೋಡದೆ ಇರುವವರಿಗೂ, ಬಳಕೆದಾರರಿಗೂ ಸಹಾಯಕವಾಗಲೆಂದು ಈ ‘ವೆಬ್ ಬೇಸ್ಡ್’ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಿದೆ ಎಂದು ತಿಳಿಸಿದರು.

ಇದು ಅಂಧರಿಗೆ ಸಹಕಾರ ಕ್ಷೇತ್ರದಲ್ಲಿ ಪರಿಹಾರ ಕಂಡುಕೊಳ್ಳುವಲ್ಲಿ ಹೆಚ್ಚು ಸಹಕಾರಿಯಾಗುತ್ತದೆ. ಅಲ್ಲದೆ ಧ್ವನಿ ಆಧಾರಿತ ಸಾಫ್ಟ್‌ವೇರ್ ಅನ್ನು ಅಭಿವೃದ್ಧಿಪಡಿಸಿರುವುದು ಕೂಡ ಇದೇ ಏಷ್ಯಾದಲ್ಲಿಯೇ ಮೊಟ್ಟಮೊದಲ ಬಾರಿಗೆ ಎಂದರು.

ಆದಿಚುಂಚನಗಿರಿ ಶಾಖಾ ಮಠದ ಸೋಮೇಶ್ವರ ಸ್ವಾಮೀಜಿ ಜ್ಯೋತಿ ಬೆಳಗಿಸಿ ಮಾತನಾಡಿ, ಇಂದು ಸಹಕಾರ ಕ್ಷೇತ್ರ ಸಮಾಜದಲ್ಲಿ ಅತಿದೊಡ್ಡ ಕ್ಷೇತ್ರವಾಗಿದೆ. ಈ ಕ್ಷೇತ್ರದಲ್ಲಿ ಅಂಧರು ತಮ್ಮ ಕಾರ್ಯವೈಖರಿಯನ್ನು ನಡೆಸಲು ಧ್ವನಿ ಮುದ್ರಿತ ಸಾಫ್ಟ್‌ವೇರ್‌ನ್ನು ಅಳವಡಿಸಿರುವುದು ಶ್ಲಾಘನೀಯ ವಿಚಾರ. ನೊಂದವರ ಮನಸ್ಸುಗಳಿಗೆ ಸಹಾಯ, ಸಹಕಾರ ನೀಡುವುದು ನಮ್ಮೆಲ್ಲರ ಕರ್ತವ್ಯವೆಂದು ವಿವರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಕೆ.ಎಸ್.ಇ.ಸಿ ಸೊಸೈಟಿ ಫಾರ್ ಬ್ಲೈಂಡ್‌ನ ಅಧ್ಯಕ್ಷ ವೀರಕ್ಯಾತಯ್ಯ ಮಾತನಾಡಿ, ಸಾಫ್ಟ್‌ವೇರ್ ಬಳಸಬೇಕಾದರೆ ಅದರ ಬಗ್ಗೆ ತಿಳುವಳಿಕೆ ಜ್ಞಾನ ಅರಿತಿರಬೇಕು. ಶೇ.70ರಿಂದ 80ರಷ್ಟು ಸಾಫ್ಟ್‌ವೇರ್‌ಗಳು ಕೆಲಸ ನಿರ್ವಹಿಸುತ್ತವೆ. ಇನ್ನು ಉಳಿದ ಶೇ.20ರಷ್ಟು ಮನುಷ್ಯ ಮಾತ್ರ ಕೆಲಸ ನಿರ್ವಹಿಸುತ್ತಾನೆ. ನಮ್ಮಂತಹ ಅಂಧರಿಗೆ ಸಾಫ್ಟ್‌ವೇರ್‌ನಿಂದ ಧ್ವನಿಯನ್ನು ಗ್ರಹಿಸಿ ಅದನ್ನು ಅರ್ಥ ಮಾಡಿಕೊಳ್ಳುವುದು ಅತ್ಯಂತ ಸುಲಭದ ಕೆಲಸ ಎಂದು ತಿಳಿಸಿ ರಾಜ್ಯದಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಸ್ಥಾಪಿತವಾಗಿರುವುದರಿಂದ ಅಂಧರ ಬಾಳಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಸುಮಾ ಕೃಷ್ಣ, ಅಭಿಷೇಕ್, ರೋ.ಸುನಿಲ್ ಬಾಳಿಗಾ, ಶೃಂಗೇರಿ ಶಾಖಾ ಮಠದ ಮೈಸೂರಿನ ಧರ್ಮದರ್ಶಿಗಳಾದ ಹೆಚ್.ರಾಮಚಂದ್ರ, ರಾಕೇಶ್ ಕೆ.ಬಿ, ಅರುಣ್ ಇನ್ನಿತರರು ಉಪಸ್ಥಿತರಿದ್ದರು. ಕಾರ್ಯಕ್ರಮಕ್ಕೆ ರಂಗರಾವ್ ಕೃಷ್ಣ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನು ಹಾಡಿದರೆ, ಕೀರ್ತಿ ಸಿ.ವಿ. ಕಾರ್ಯಕ್ರಮ ನೆರವೇರಿಸಿಕೊಟ್ಟರು.



ಸಿತಾರಾ ಐಟಿ ಇನೋವೇಶನ್ಸ್ ಪ್ರೈ.ಲಿ. ಹಮ್ಮಿಕೊಂಡಿದ್ದ ಬ್ಯಾಂಕಿಂಗ್ ವೆಬ್ ಅಪ್ಲಿಕೇಶನ್ ಸಾಫ್ಟ್‌ವೇರ್ ಅನಾವರಣ ಕಾರ್ಯಕ್ರಮವನ್ನು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಸಿತಾರಾ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಂಗರಾವ್ ಕೃಷ್ಣ, ಕರ್ನಾಟಕ ರಾಜ್ಯ ಕೆಎಸ್‌ಇಸಿ ಸೊಸೈಟಿ ಫಾರ್ ಬ್ಲೈಂಡ್‌ನ ಅಧ್ಯಕ್ಷ ವೀರಕ್ಯಾತಯ್ಯ, ಸುಮಾ ಕೃಷ್ಣ, ಅಭಿಷೇಕ್, ರಾಕೇಶ್ ಕೆ.ಬಿ. ಅರುಣ್ ಅವರನ್ನು ಕಾಣಬಹುದು.

ಸಿಎಂ ವಿರುದ್ಧ ಕಪ್ಪು ಬಾವುಟ ಪ್ರದರ್ಶನಕ್ಕೆ ಮುಂದಾಗಿದ್ದ ದಸಂಸ ಕಾರ್ಯಕರ್ತರ ಬಂಧನ, ಬಿಡುಗಡೆ

ಮಂಡ್ಯ,ಜು.29– ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಮೀಸಲಿರಿಸಿದ್ದ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅನುದಾನವನ್ನು ಗ್ಯಾರಂಟಿ ಯೋಜನೆಗೆ ವರ್ಗಾವಣೆ ಮಾಡಿರುವ ರಾಜ್ಯ ಸರ್ಕಾರದ ಕ್ರಮ ವಿರೋಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಲು ಮುಂದಾಗಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರನ್ನು ಪೊಲೀಸರು ಮಂಡ್ಯದಲ್ಲಿ ಬಂಧಿಸಿ, ನಂತರ ಬಿಡುಗಡೆ ಮಾಡಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಲು ದಸಂಸ ಕಾರ್ಯಕರ್ತರು ಮುಂದಾಗಿದ್ದರು.

ಕೃಷ್ಣರಾಜಸಾಗರದಲ್ಲಿ ಕಾವೇರಿ ಮಾತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಗಿನ ಸಮರ್ಪಣೆ ಕಾರ್ಯಕ್ರಮ ನಿಗದಿಯಾಗಿದ್ದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕಪ್ಪು ಬಾವುಟ ಪ್ರದರ್ಶಿಸಲು ಸಮಿತಿ ಕಾರ್ಯಕರ್ತರು ನಗರದ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಜಮಾಯಿಸಿದ್ದರು, ಸಮಿತಿಯ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ, ಜಿಲ್ಲಾಧ್ಯಕ್ಷ ಬಿ.ಆನಂದ್, ಸಿದ್ದಯ್ಯ ದೊಡ್ಡಬೂವಹಳ್ಳಿ, ಸುಶ್ಮಿತಾ, ಎನ್.ಸಿ.ರಾಜು ನಿಡಘಟ್ಟ ಸೇರಿದಂತೆ ಒಟ್ಟು 18 ಮಂದಿಯನ್ನು ಪೊಲೀಸರು ಬಂಧಿಸಿದರು.

ಪರಿಶಿಷ್ಟರ ಮೀಸಲು ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅನುದಾನದಲ್ಲಿ 25.282 ಕೋಟಿ ರೂಗಳನ್ನು ಗ್ಯಾರಂಟಿ ಯೋಜನೆಗೆ ವರ್ಗಾವಣೆ ಮಾಡಿದ್ದಲ್ಲದೆ ರಾಜ್ಯ ಸರ್ಕಾರ 105.469 ಕೋಟಿ ಹಣವನ್ನು ದುರ್ಬಳಕೆ ಮಾಡಿಕೊಂಡಿದೆ, ಅದೇ ರೀತಿ ವಾಲ್ಮೀಕಿ ನಿಗಮದಲ್ಲಿ 187 ಕೋಟಿ ಭ್ರಷ್ಟಾಚಾರ ನಡೆಸಿ ಹಣ ಗುಳುಂ ಮಾಡಲಾಗಿದೆ. ಆರ್ಥಿಕ ಅಶಿಸ್ತಿನ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಗ್ಯಾರಂಟಿ ಯೋಜನೆಗೆ ಪಡೆದಿರುವ 25,282 ಕೋಟಿ, ವಾಲ್ಮೀಕಿ ನಿಗಮದಲ್ಲಿ ನಡೆದಿರುವ 187 ಕೋಟಿ ಮತ್ತು ಕಳೆದ ಹತ್ತು ವರ್ಷದಲ್ಲಿ ಆಳುವ ಸರ್ಕಾರಗಳು ವಾಪಸ್ ಪಡೆದಿರುವ 80,000 ಕೋಟಿ ಹಣವನ್ನು ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರತಿ ಕುಟುಂಬಕ್ಕೆ ತಲಾ 25 ಲಕ್ಷ ಹಂಚಿಕೆ ಮಾಡಬೇಕು, ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅನುದಾನ ಸದ್ಬಳಕೆ ಮಾಡದೆ ದುರ್ಬಳಕೆ ಮಾಡಿಕೊಂಡಿರುವ ಅಧಿಕಾರಿ ಮತ್ತು ಜನಪ್ರತಿನಿಧಿಗಳ ವಿರುದ್ಧ ಪ್ರಕರಣ ದಾಖಲಿಸಿ ಜೈಲಿಗೆ ಕಳುಹಿಸಬೇಕು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಬಹುಕೋಟಿ ಭ್ರಷ್ಟಾಚಾರ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು, ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ನೀತಿ ನಾಟಕ ನಿಲ್ಲಿಸಿ ಹೊರಗುತ್ತಿಗೆ ಪದ್ಧತಿ ರದ್ದು ಮಾಡಿ ಸರ್ಕಾರಿ ಸೇವಾ ನೇಮಕಾತಿಯಂತೆ ನೇಮಕ ಪ್ರಕ್ರಿಯೆ ನಡೆಸಬೇಕು ಎಂದು ಒತ್ತಾಯಿಸಿದರು.

ಕಾವೇರಿ ನದಿ ನೀರು ಹಂಚಿಕೆ ವಿವಾದ ಮುಕ್ತಿಗಾಗಿ ಸಂವಿಧಾನಾತ್ಮಕವಲ್ಲದ ಎಲ್ಲಾ ನ್ಯಾಯಾಲಯ ಪ್ರಾಧಿಕಾರ ತೀರ್ಪನ್ನು ತಿರಸ್ಕರಿಸಬೇಕು, ಸಂವಿಧಾನದತ್ತವಾಗಿ ಕೇಂದ್ರ ಸರ್ಕಾರ ರಾಷ್ಟ್ರೀಯ ಜಲನೀತಿ ರೂಪಿಸುವವರೆಗೆ ಕಾವೇರಿ ಕೊಳ್ಳದ ಜಲಾಶಯಗಳಲ್ಲಿ ನೀರು ಇದ್ದಾಗ ಮಾತ್ರ ತಮಿಳುನಾಡಿಗೆ ನೀರು ಹರಿಸಲಾಗುವುದು ಎಂದು ರಾಜ್ಯ ಸರ್ಕಾರ ಘೋಷಿಸಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ರೈತರ ಸಮಸ್ಯೆಗೆ ಸ್ಪಂದಿಸುವ ಶಕ್ತಿ ಇರುವುದು ಕಾವೇರಿ ಮಾತೆಗೆ

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ

ಕೆಆರ್‌ಎಸ್, ಜು.29–ರೈತರ ಸಮಸ್ಯೆಗೆ ನಿಜವಾಗಿ ಸ್ಪಂದಿಸುವ ಕಾರ್ಯವು ಕಾವೇರಿ ಮಾತೆಯದ್ದಾಗಿದೆ. ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾವೇರಿ ಮಾತೆಗೆ ಪೂಜೆ ಹಾಗೂ ಬಾಗಿನ ಸಲ್ಲಿಸಿದ ಅವಿಸ್ಮರಣೀಯ ದಿನವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರು ತಿಳಿಸಿದರು.



ಈ ನಾಡಿನಲ್ಲಿ ಬಹುಶ: ಲಕ್ಷಾಂತರ ಅಣೆಕಟ್ಟುಗಳಿದ್ದು, ರಾಜ್ಯದಲ್ಲೂ ಸಹ ನೂರಾರು ಅಣೆಕಟ್ಟುಗಳಿವೆ ಆದರೆ ಕೆಆರ್‌ಎಸ್‌ನ ಕಾವೇರಿ ಎಂದರೆ ಅಂತಾರಾಷ್ಟ್ರೀಯ ಮಟ್ಟದಲ್ಲೂ ಹೆಸರುವಾಸಿಯಾಗಿದ್ದು, ಒಂದು ಭಾವನಾತ್ಮಕ ಅಣೆಕಟ್ಟಾಗಿದೆ. ಇದಕ್ಕಿಂತ ದೊಡ್ಡ ಅಣೆಕಟ್ಟುಗಳು ರಾಜ್ಯದಲ್ಲಿ ಇದ್ದರೂ ಸಹ ಕೆಆರ್‌ಎಸ್‌ನಷ್ಟು ಮನಸೆಳೆದಿರುವ ಅಣೆಕಟ್ಟು ಯಾವುದು ಇಲ್ಲ. ಇಂತಹ ಅಣೆಕಟ್ಟಿನ ನಿರ್ಮಾಣಕ್ಕೆ ಕಾರಣರಾಗಿರುವಂತಹ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಅವರ ಕೀರ್ತಿಯನ್ನು ಪ್ರತಿಯೊಬ್ಬರೂ ಒಪ್ಪಲೇಬೇಕು ಎಂದರು.

ಮುಖ್ಯಮಂತ್ರಿಯವರು ಕೆಆರ್‌ಎಸ್‌ಗೆ ಕಾವೇರಿ ಮಾತೆಗೆ 3ನೇ ಬಾರಿ ಬಾಗಿನವನ್ನು ಅರ್ಪಿಸುವ ಸುಯೋಗ ಇಂದು ಒದಗಿ ಬಂದಿದೆ. ದೇವರ ಕೃಪೆಯಿಂದ ಇಂದು ಕೆಆರ್‌ಎಸ್ ತುಂಬಿರುವ ಅದ್ಭುತವಾದ ಘಳಿಗೆಯಲ್ಲಿ ಈ ನಾಡಿನ ಕಾವೇರಿ ತಾಯಿಗೆ ನಿಮ್ಮೆಲ್ಲರ ಸಮ್ಮುಖದಲ್ಲಿ ಬಾಗಿನವನ್ನು ಅರ್ಪಿಸಲಾಗಿದೆ. ಎಲ್ಲರ ಆಶೀರ್ವಾದ ನಮ್ಮ ಮೇಲಿರಲಿ ಎಂದು. ವಿಶ್ವದರ್ಜೆಯಲ್ಲಿ ಬೃಂದಾವನವನ್ನು ನಿರ್ಮಾಣ ಮಾಡಲಾಗುವುದು. ಮಂಡ್ಯ ಜಿಲ್ಲೆ ರೈತರ ಜಿಲ್ಲೆಯಾಗಿದ್ದು ನೂತನವಾಗಿ ಸಕ್ಕರೆ ಕಾರ್ಖಾನೆ ಹಾಗೂ ಕೃಷಿ ವಿಶ್ವವಿದ್ಯಾನಿಲಯವನ್ನು ಕಟ್ಟಿಸಲಾಗುವುದು. ಎಲ್ಲಾ ವಿಚಾರದಲ್ಲೂ ನಮ್ಮ ಸರ್ಕಾರ ಬದ್ಧತೆಯನ್ನು ತೋರುತ್ತದೆ ಎಂದರು.

ಕೃಷಿ ಇಲಾಖೆಯಿಂದ ಶಿಫಾರಸ್ಸು ಮಾಡಲಾದ ತಳಿಗಳನ್ನು ಮಾತ್ರ ಬಳಸಲು ರೈತರಿಗೆ ಸೂಚನೆ

ಮಂಡ್ಯ,ಜು.29– ರೈತರಿಗೆ ಅವಶ್ಯಕತೆ ಇರುವ ಬಿತ್ತನೆ ಬೀಜಗಳನ್ನು (ಭತ್ತ, ರಾಗಿ, ದ್ವಿದಳಧಾನ್ಯ ಹಾಗೂ ಇತರೆ) ರೈತ ಸಂಪರ್ಕ ಕೇಂದ್ರ, ಸಹಕಾರ ಸಂಘ ಹಾಗೂ ಎಫ್‌ಪಿಓಗಳ ಮುಖಾಂತರ ಸಹಾಯಧನದಲ್ಲಿ ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳನ್ನು ವಿತರಿಸಲಾಗುತ್ತಿದೆ ಮತ್ತು ಖಾಸಗಿ ಬಿತ್ತನೆ ಬೀಜ ಮಾರಾಟಗಾರರಿಂದ ಬಿತ್ತನೆ ಬೀಜಗಳನ್ನು ಮಾರಾಟ ಮಾಡಲಾಗುತ್ತಿದ್ದು, ಜಿಲ್ಲೆಗೆ ಶಿಫಾರಸ್ಸು ಮಾಡಲಾದ ತಳಿಗಳನ್ನು ಮಾತ್ರ ರೈತರು ಬಳಕೆ ಮಾಡುವಂತೆ ಕೃಷಿ ಇಲಾಖೆ ಸೂಚಿಸಿದೆ.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿಕೆ.ಶಿವಕುಮಾರ್‌ರವರು ರೈತರಿಗೆ ಬಿತ್ತನೆ ಬೀಜ ವಿತರಿಸಿದರು. ಈ ವೇಳೆ ಕೃಷಿ ಸಚಿವ ಚಲುವರಾಯಸ್ವಾಮಿ ಇನ್ನಿತರಿದ್ದರು.

ಕೃಷಿ ಇಲಾಖೆ ವತಿಯಿಂದ ಭತ್ತದ ಉತ್ಪಾದನೆ ಹೆಚ್ಚಿಸಲು ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ಬಿತ್ತನೆ ಬೀಜ ಹಾಗೂ ಕೃಷಿ ಪರಿಕರ ಮಾರಾಟಗಾರರಿಗೆ ತರಬೇತಿ ನೀಡಲಾಗಿದ್ದು, ರೈತರು ಹತ್ತಿರದ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳು, ಕೃಷಿ ವಿದ್ಯಾಲಯದ ವಿಜ್ಞಾನಿಗಳು ಹಾಗೂ ಕೃಷಿ ಪರಿಕರ ಮಾರಾಟಗಾರರಿಂದ ಭತ್ತದ ಬೆಳೆಯಲ್ಲಿ ಉತ್ಪಾದಕತೆ ಹೆಚ್ಚಿಸಲು ತಾಂತ್ರಿಕ ಮಾಹಿತಿಯನ್ನು ಪಡೆಯಲು ಕೋರಿದೆ.

ಭೂಮಿ ಸಿದ್ದತೆ ಸಂದರ್ಭದಲ್ಲಿ ಪ್ರತಿ ಎಕರೆಗೆ 4 ಟನ್ ಕಾಂಪೋಸ್ಟ್/ಕೊಟ್ಟಿಗೆ ಗೊಬ್ಬರ ಮತ್ತು 8 ಕೆ.ಜಿ ಸತುವಿನ ಸಲ್ಫೇಟ್, ಲಘು ಪೋಷಕಾಂಶವನ್ನು ಮಣ್ಣಿಗೆ ಸೇರಿಸುವುದು ಹಾಗೂ ಭತ್ತದ ಬೆಳೆಗೆ ಶಿಫಾರಸ್ಸು ಮಾಡಲಾದ ಪ್ರಮಾಣದಲ್ಲಿ ವಿವಿಧ ಹಂತಗಳಲ್ಲಿ ರಸಗೊಬ್ಬರವನ್ನು ಎಕರೆಗೆ ಸಾರಜನಕ(40), ರಂಜಕ(20), ಪೊಟ್ಯಾಷ್(20) ಮಾತ್ರ ಬಳಕೆ ಮಾಡಬೇಕು.

800 ಗ್ರಾಂ ಅಜೋಸ್ಪಿರಿಲ್ಲಂ ಅನ್ನು 25 ಕೆ.ಜಿ ಚೆನ್ನಾಗಿ ಕಳಿತ ಕಾಂಪೋಸ್ಟ್ ಗೊಬ್ಬರದ ಜೊತೆ ಬೆರೆಸಿ ಮುಖ್ಯ ಭೂಮಿಗೆ ನಾಟಿಗೆ ಮುಂಚೆ ಎರಚಿ ಉಳುಮೆ ಮಾಡುವುದು. 800 ಗ್ರಾಂ (ಪಿಎಸ್‌ಬಿ) ರಂಜಕ ಕರಗಿಸುವ ಜೀವಾಣು ಗೊಬ್ಬರವನ್ನು 4 ಕೆ.ಜಿ ಕೊಟ್ಟಿಗೆ ಗೊಬ್ಬರ ಹಾಗೂ 4 ಕೆ.ಜಿ ಮಣ್ಣಿನೊಡನೆ ಬೆರೆಸಿ ಪ್ರತಿ ಎಕರೆಗೆ ಭತ್ತ ನಾಟಿ ಮಾಡಿದ 6–8 ನೇ ದಿನಗಳಲ್ಲಿ ಎರಚುವುದರಿಂದ ಬೆಳೆಗಳಿಗೆ ನೇರವಾಗಿ ಸಾರಜನಕ, ರಂಜಕ, ಪೊಟ್ಯಾಷ್ ಹಾಗೂ ಇತರೆ ಲಘು ಪೋಷಕಾಂಶಗಳು ಲಭ್ಯವಾಗುವುದು ಹಾಗೂ ಸಾರಜನಕವನ್ನು ಭೂಮಿಯಲ್ಲಿ ಹೆಚ್ಚು ಹಿಡಿದಿಟ್ಟುಕೊಂಡು ನಿಧಾನವಾಗಿ ಸಸ್ಯಗಳಿಗೆ ಬಿಡುಗಡೆಯಾಗುವಂತೆ ಮಾಡಲು ನ್ಯಾನೋ ಯೂರಿಯಾ ಬಳಕೆ ಮಾಡಬೇಕು.

ಸೂಕ್ತ ತಳಿಗಳ ಆಯ್ಕೆ, ನೀರು ನಿರ್ವಹಣೆ. ಜೈವಿಕ ಗೊಬ್ಬರ ಬಳಕೆ, ಸಮಗ್ರ ಪೋಷಕಾಂಶಗಳ ನಿರ್ವಹಣೆ, ಸಮಗ್ರ ಕೀಟ ಹಾಗೂ ರೋಗ ನಿರ್ವಹಣೆ ಮಾಡುವುದರ ಮೂಲಕ ಭತ್ತದ ಉತ್ಪಾದನೆ ಹೆಚ್ಚಿಸಲು ಸೂಕ್ತ ಕ್ರಮ ವಹಿಸುವಂತೆ ಮಂಡ್ಯ ಉಪವಿಭಾಗದ ಉಪ ಕೃಷಿ ನಿರ್ದೇಶಕರಾದ ಶ್ರೀಮತಿ ಮಾಲತಿ.ಕೆ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ಪೇಟೆ ಟಿಎಪಿಸಿಎಂಎಸ್ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯಕ್ಕೆ ಸೋಲು

ಬಿ.ಎಲ್.ದೇವರಾಜು ಅಧ್ಯಕ್ಷರಾಗಿ ಮುಂದುವರಿಕೆ

ಕೆ.ಆರ್.ಪೇಟೆ,ಜು.29– ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸಕ್ಕೆ ಸೋಲುಂಟಾಗಿದ್ದು, ಟಿಎಪಿಸಿಎಂಎಸ್ ಅಧ್ಯಕ್ಷರಾಗಿ ಬಿ.ಎಲ್.ದೇವರಾಜು ಮುಂದುವರೆದಿದ್ದಾರೆ ಎಂದು ಚುನಾವಣಾಧಿಕಾರಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಭರತ್‌ಕುಮಾರ್ ಘೋಷಿಸಿದರು.

ಇಂದು ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯ ಸಭೆಗೆ ಬಿ.ಎಲ್.ದೇವರಾಜು ಮತ್ತು ಅವರ ಬೆಂಬಲಿತ ನಿರ್ದೇಶಕರಾದ ಐಚನಹಳ್ಳಿ ಶಿವಣ್ಣ, ಶಶಿಧರ್ ಸಂಗಾಪುರ, ಅರೆಬೊಪ್ಪನಹಳ್ಳಿ ಅಶೋಕ್ ಹಾಗೂ ಸುಕನ್ಯಾ ಲಕ್ಷ್ಮಣ್ ಸೇರಿ ಐದು ಜನ ನಿರ್ದೇಶಕರು ಮಾತ್ರ ಹಾಜರಾಗಿದ್ದರು. ಅವಿಶ್ವಾಸ ನಿರ್ಣಯ ಸಭೆಗೆ ಕೋರಂ ಇಲ್ಲದ ಕಾರಣ ಚುನಾವಣಾಧಿಕಾರಿಯಾಗಿದ್ದ ಸಹಕಾರ ಇಲಾಖೆಯ ಅಧಿಕಾರಿ ಭರತ್‌ಕುಮಾರ್ ಅಧ್ಯಕ್ಷ ಬಿ.ಎಲ್.ದೇವರಾಜು ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿದ್ದು ಬಿ.ಎಲ್.ದೇವರಾಜು ಅವರು ಅಧ್ಯಕ್ಷರಾಗಿ ಮುಂದುವರೆದಿದ್ದಾರೆಂದು ಮಧ್ಯಾಹ್ನ 2ಗಂಟೆಗೆ ಪ್ರಕಟಿಸಿದರು.

ಬಿ.ಎಲ್.ದೇವರಾಜು ಜೆಡಿಎಸ್ ತ್ಯಜಿಸಿ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದು ಪರಾಜಿತರಾಗಿದ್ದರು. ಜೆಡಿಎಸ್‌ನ ಬೆಂಬಲದಿಂದ ಚುನಾಯಿತರಾಗಿ ಕಾಂಗ್ರೆಸ್ ಸೇರಿದ ಕಾರಣ ಟಿಎಪಿಸಿಎಂಎಸ್ ನಿರ್ದೇಶಕ ಎಸ್.ಎಲ್.ಮೋಹನ್ ನೇತೃತ್ವದಲ್ಲಿ ಕೆಲವು ಸದಸ್ಯರು ಅವಿಶ್ವಾಸ ಮಂಡನೆಗೆ ಅಗತ್ಯವಾದ 10 ಜನ ನಿರ್ದೇಶಕರ ಸಹಿಯುಳ್ಳ ಪತ್ರವನ್ನು ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ ಸಲ್ಲಿಸಿ ಅವಿಶ್ವಾಸ ಮಂಡಿಸಲು ದಿನಾಂಕ ನಿಗದಿಪಡಿಸುವಂತೆ ಮನವಿ ಮಾಡಿದ್ದರು. ಈ ಮನವಿಯ ಹಿನ್ನೆಲೆಯಲ್ಲಿ ಕೆ.ಆರ್.ಪೇಟೆ ಪಟ್ಟಣದ ಟಿಎಪಿಸಿಎಂಎಸ್ ಸಭಾಂಗಣದಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸಭೆಯನ್ನು ಸಹಕಾರ ಅಭಿವೃದ್ಧಿ ಅಧಿಕಾರಿಗಳು ಆಯೋಜಿಸಿದ್ದರು. ಆದರೆ ಹಿಂದೆ ಬೆಂಬಲ ಸೂಚಿಸಿ ಸಹಿಹಾಕಿದ್ದ ನಿರ್ದೇಶಕಿ ಸುಕನ್ಯಾ ಲಕ್ಷ್ಮಣ್ ತಮ್ಮ ನಿಷ್ಠೆ ಬದಲಿಸಿ ಹಾಲಿ ಅಧ್ಯಕ್ಷ ಬಿ.ಎಲ್.ದೇವರಾಜು ಪರ ನಿಂತರು. ಇದರಿಂದಾಗಿ ಅವಿಶ್ವಾಸ ನಿರ್ಣಯಕ್ಕೆ ಅಗತ್ಯವಾದ 10 ಜನ ಸದಸ್ಯರ ಬೆಂಬಲ ಇಲ್ಲದ ಕಾರಣ ಉಳಿದ 9 ಜನ ನಿರ್ದೇಶಕರು ಸಭೆಗೆ ಗೈರು ಹಾಜರಾದರು. ಇದರಿಂದಾಗಿ ಎಸ್.ಎಲ್.ಮೋಹನ್ ನೇತೃತ್ವದಲ್ಲಿ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿದ್ದು ಬಿ.ಎಲ್.ದೇವರಾಜು ಅಧ್ಯಕ್ಷರಾಗಿ ಮುಂದುವರೆಸಲಾಗಿದೆ ಎಂದು ಚುನಾವಣಾಧಿಕಾರಿ ಭರತ್‌ಕುಮಾರ್ ಘೋಷಣೆ ಮಾಡಿದರು.

ಅವಿಶ್ವಾಸ ನಿರ್ಣಯಕ್ಕೆ ಸೋಲುಂಟಾಗಿ ಬಿ.ಎಲ್.ದೇವರಾಜು ಅವರಿಗೆ ಜಯ ಸಿಕ್ಕ ಹಿನ್ನೆಲೆಯಲ್ಲಿ ಕೇಂದ್ರ ಸೆನ್ಸಾರ್ ಮಂಡಳಿಯ ನಿರ್ದೇಶಕ ಬಸ್ ಕೃಷ್ಣೇಗೌಡ, ಪುರಸಭಾ ಸದಸ್ಯರಾದ ಕೆ.ಸಿ.ಮಂಜುನಾಥ್, ಡಿ.ಪ್ರೇಂ ಕುಮಾರ್, ಕೆ.ಕೆ.ಪುರುಷೋತ್ತಮ್, ಜಿ.ಎ.ರಾಯಪ್ಪ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯೆ ಬಿ.ಸಿ.ಮೀನಾಕ್ಷಿ ರಮೇಶ್, ವಕೀಲರ ಸಂಘದ ಅಧ್ಯಕ್ಷ ಎನ್.ಆರ್.ರವಿಶಂಕರ್, ಕಾರ್ಯದರ್ಶಿ ಆರ್.ಕೆ.ರಾಜೇಗೌಡ, ವಕೀಲರಾದ ಬಿ.ಗಣೇಶ್, ಹೆಚ್.ಆರ್. ಕೃಷ್ಣ ಕುಮಾರ್, ನಿರ್ದೇಶಕರಾದ ಅರೆಬೊಪ್ಪನಹಳ್ಳಿ ಅಶೋಕ್, ಐಚನಹಳ್ಳಿ ಶಿವಣ್ಣ, ಶಶಿಧರ್ ಸಂಗಾಪುರ, ಸುಕನ್ಯ ಲಕ್ಷ್ಮಣ್, ಮುಖಂಡರಾದ ಬಣ್ಣೇನಹಳ್ಳಿ ಶ್ರೀನಿವಾಸ್, ಎ.ಸಿ.ದೇವರಾಜು, ಸಿ.ಆರ್.ಪಿ.ಕುಮಾರ್, ಬೋಜರಾಜು, ಬಳ್ಳೇಕೆರೆ ಗಣೇಶ್, ಅಣ್ಣಪ್ಪ, ತಮ್ಮಣ್ಣ, ದೊಡ್ಡ ಗಾಡಿಗನಹಳ್ಳಿ ಲೋಕಿ ಮತ್ತಿತರರು ಅಭಿನಂದಿಸಿದರು.

ಒಂದನೇ ಪುಟದಿಂದ

ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲಿ

ಮೆಟ್ಟೂರು ಜಲಾಶಯ ಭರ್ತಿಯಾಗಿ ಉಳಿದ ನೀರು ಸಮುದ್ರದ ಪಾಲಾಗುವುದನ್ನು ತಡೆಯುವ ಸಲುವಾಗಿ ಬಾಕಿ ನೀರನ್ನು ಉಳಿಸಿಕೊಳ್ಳಲು ಮೇಕೆದಾಟು ಬಳಿ ಡ್ಯಾಂ ಕಟ್ಟಬೇಕೆಂಬ ಉದ್ದೇಶ ಹೊಂದಿದ್ದೇವೆ. ಇದರಿಂದ ಹೆಚ್ಚು ಅನುಕೂಲ ತಮಿಳುನಾಡಿಗೆ ಆಗಲಿದೆ. ಆದರೂ ಸಹ ಅವರು ರಾಜಕೀಯಕ್ಕೋಸ್ಕರ ಕ್ಯಾತೆ ತೆಗೆದಿದ್ದಾರೆ ಎಂದು ಹೇಳಿದರು.

ನಾವು ಮೇಕೆದಾಟಿಗಾಗಿ ಎರಡು ವರ್ಷಗಳ ಹಿಂದೆ ಪಾದಯಾತ್ರೆ ಮಾಡಿದ್ದೆವು. ನಮ್ಮ ಮೇಲೆ ಕೇಸುಗಳನ್ನು ಸಹ ಹಾಕಿದರು. ಇದನ್ನು ಕೇಳಿದರೆ ನಮ್ಮ ವಿರುದ್ಧವೇ ಮಾತನಾಡುತ್ತಾರೆ. ಮೇಕೆದಾಟು ನಮ್ಮ ಹಕ್ಕು. ಅಣೆಕಟ್ಟೆಯನ್ನು ತಮಿಳುನಾಡಿನಲ್ಲಿ ಕಟ್ಟುತ್ತಿಲ್ಲ. ನಮ್ಮ ರಾಜ್ಯದಲ್ಲಿ ಕಟ್ಟುತ್ತಿರುವುದರಿಂದ ಸಂಕಷ್ಟ ಬಂದಾಗ ನೀರು ಹಂಚಿಕೊಳ್ಳಬಹುದು. ಈ ನಿಟ್ಟಿನಲ್ಲಿ ತಮಿಳುನಾಡು ಸಹ ವಿರೋಧ ಮಾಡಬಾರದೆಂದು ಸಲಹೆ ನೀಡಿದರು.

ಕೆಲಸಕ್ಕೆ ಬಾರದನ್ನು ಮಾತಾಡ್ತಾರೆ: ಮೇಕೆದಾಟು ಯೋಜನೆಗೆ ಅನಗತ್ಯವಾಗಿ ತಮಿಳುನಾಡು ತಕರಾರು ಮಾಡುತ್ತಿದೆ. ಒಂದು ದಿನವಾದರೂ ಬಿಜೆಪಿ, ಜೆಡಿಎಸ್ ಸಂಸದರು ಈ ಬಗ್ಗೆ ಸದನದಲ್ಲಿ ಮಾತನಾಡಲ್ಲ. ಕೆಲಸಕ್ಕೆ ಬಾರದ ವಿಚಾರಗಳ ಬಗ್ಗೆ ಮಾತನಾಡುತ್ತಾರೆ. ಬಜೆಟ್‌ನಲ್ಲಿ ರಾಜ್ಯಕ್ಕೆ ಒಂದು ರೂಪಾಯಿ ಕೂಡಾ ಕೊಟ್ಟಿಲ್ಲ ಕ್ಷುಲ್ಲಕ ವಿಚಾರ ಪ್ರಸ್ತಾಪ ಮಾಡಿ, ಹತ್ತು ದಿನ ನಡೆಯುವ ವಿಧಾನಸಭೆ ಅಧಿವೇಶನವನ್ನು 8 ದಿನಕ್ಕೆ ಮುಗಿಸುವಂತೆ ಮಾಡಿದರು ಎಂದು ಕಿಡಿಕಾರಿದರು.

ಸದನದಲ್ಲಿ ಪ್ರವಾಹ, ಕೃಷಿ, ನೀರಾವರಿ, ಮೇಕೆದಾಟು, ಮಹದಾಯಿ, ಕೃಷ್ಣಾ ಮೇಲ್ದಂಡೆ ಸಮಸ್ಯೆಗಳು ಹಾಗೂ ರಾಜ್ಯಕ್ಕೆ ಕೇಂದ್ರದಿಂದ ಬರಬೇಕಾದ ಅನುದಾನದ ಬಗ್ಗೆ ಒಂದು ದಿನವೂ ಮಾತನಾಡಲಿಲ್ಲ. ರಾಜ್ಯಕ್ಕೆ ಸಂಬಂಧಿಸಿದ ವಿಚಾರದ ಬಗ್ಗೆ ಜನರನ್ನು ತಪ್ಪು ದಾರಿಗೆಳೆಯುವ ಕೆಲಸವನ್ನು ಮಾಡುತ್ತಿದ್ದಾರೆ. ರಾಜ್ಯದ ಜನ ರಾಜಕೀಯವಾಗಿ ಬುದ್ಧಿವಂತರಿದ್ದು, ಸತ್ಯವನ್ನು ಅರ್ಥಮಾಡಿಕೊಳ್ಳುವ ಶಕ್ತಿ ನಮ್ಮ ಜನರಿಗಿದೆ ಎಂದು ಹೇಳಿದರು.

ಕಾವೇರಿ ನಮ್ಮೆಲ್ಲರ ಜೀವನದಿ. ಕನ್ನಂಬಾಡಿ ಕಟ್ಟೆಯ ಸಾಮರ್ಥ್ಯ 49.452 ಟಿಎಂಸಿ. ಹೆಚ್ಚು ಕಡಿಮೆ ಡ್ಯಾಂ ಪೂರ್ಣ ತುಂಬಿದೆ. ಸಂತೋಷದಿಂದ ನಾನು, ಡಿ.ಕೆ.ಶಿವಕುಮಾರ್, ಚಲುವರಾಯಸ್ವಾಮಿ ಸೇರಿದಂತೆ ಸಚಿವರು, ಶಾಸಕರು ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ, ಗೌರವದಿಂದ ಬಾಗಿನ ಅರ್ಪಿಸಿದ್ದೇವೆ. ಪ್ರತಿ ವರ್ಷ ಕನ್ನಂಬಾಡಿ ಕಟ್ಟೆ ಇದೇ ರೀತಿ ತುಂಬಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇವೆ ಎಂದು ತಿಳಿಸಿದರು.

ಕಾವೇರಿ ಜಲಾನಯನ ಪ್ರದೇಶದ ನಾಲ್ಕು ಜಲಾಶಯಗಳಲ್ಲಿ 114 ಟಿಎಂಸಿ ನೀರು ಇದೆ. ಇಲ್ಲಿ ಅನೇಕ ನಾಲೆಗಳು ಬರುತ್ತವೆ. ಅದರಲ್ಲಿ ವಿಶ್ವೇಶ್ವರಯ್ಯ ನಾಲೆ ಕನ್ನಂಬಾಡಿ ಅಣೆಕಟ್ಟೆ ಬಳಿ ಇದೆ. ಈ ನಾಲೆ 1932ರಲ್ಲಿ ಪೂರ್ಣವಾಯಿತು. ಅದನ್ನು ನಾವು ಆಧುನೀಕರಣ ಮಾಡಲು ಪ್ರಯತ್ನ ಮಾಡಿದ್ದೆವು. ಈ ಹಿಂದೆ ನಾನು ಮುಖ್ಯಮಂತ್ರಿಯಾಗಿದ್ದಾಗ 250–300 ಕೋಟಿ ರೂ. ಆಧುನೀಕರಣಕ್ಕೆ ಕೊಟ್ಟಿದ್ದೆ. ಆದರೆ ಕೆಲಸ ಆಗಿರಲಿಲ್ಲ. ಈಗ ಆಧುನೀಕರಣ ಮಾಡದಿದ್ದರೆ ಕೊನೆ ಭಾಗದ ರೈತ ಜಮೀನಿಗೆ ನೀರು ಸಿಗುವುದು ಕಷ್ಟವಾಗಿರುತ್ತಿತ್ತು. ನಮ್ಮ ಸರ್ಕಾರ ನಾಲಾ ಆಧುನೀಕರಣ ಮಾಡಿದ್ದು, ಇನ್ನು ಎಲ್ಲೆಲ್ಲಿ ಆಧುನೀಕರಣ ಮಾಡುವ ಅವಶ್ಯಕತೆ ಇದೆಯೋ ಅಲ್ಲೂ ಸಹ ನಾಲಾ ಆಧುನೀಕರಣ ಕಾಮಗಾರಿ ನಡೆಯಲಿದೆ ಎಂದರು.

ನಮಗೆ ಜನ 136 ಸೀಟು ಕೊಟ್ಟಿದ್ದೇ ಹೊರತು ಬಿಜೆಪಿ, ಜೆಡಿಎಸ್‌ನವರಲ್ಲ. ನಮ್ಮ ಸರ್ಕಾರವನ್ನು ಕ್ಷುಲ್ಲಕ ವಿಚಾರವಿಟ್ಟುಕೊಂಡು ದುರ್ಬಲ ಮಾಡಲು ಪ್ರಯತ್ನಿಸುತ್ತಿದ್ದಾರೆ. ದೇಶದಲ್ಲಿ ಅನೇಕ ರಾಜ್ಯದಲ್ಲಿ ದುರ್ಬಲ ಮಾಡಿದ್ದು, ಇಲ್ಲೂ ಅದೇ ರೀತಿ ಮಾಡಲು ಹುನ್ನಾರ ನಡೆಸುತ್ತಿದ್ದಾರೆ. ನಮ್ಮ ಸರ್ಕಾರ ಬಂದಮೇಲೆ ಕೃಷಿ ಇಲಾಖೆಯಲ್ಲಿ ಒಂದೂ ಸಮಸ್ಯೆಯಾಗದೇ ರೈತರಿಗೆ ಗೊಬ್ಬರ, ಬೀಜ, ಸಸಿ ವಿತರಣೆ ಮಾಡಿದ್ದೇವೆ. ಹಿಂದೆ ಗೋಲಿಬಾರ್ ಆಗಿ ರೈತರು ಸತ್ತರು. ನಮ್ಮ ಆಡಳಿತದಲ್ಲಿ ಆ ರೀತಿ ಆಗಿಲ್ಲ. ಬೀಜ, ಗೊಬ್ಬರ, ಔಷಧಿ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ಚಲುವರಾಯಸ್ವಾಮಿಗೆ ಸೂಚನೆ ನೀಡಿ, ದಾಸ್ತಾನು ಮಾಡಿಕೊಳ್ಳುವಂತೆ ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಕಳೆದ ವರ್ಷ ಭೀಕರ ಬರಗಾಲವಿತ್ತು. ಆಗ ಕೇಂದ್ರ ಸರ್ಕಾರ ಪರಿಹಾರ ಕೊಡಲಿಲ್ಲ. 3544 ಕೋಟಿ ಪರಿಹಾರ ಹಣವನ್ನು ಸುಪ್ರೀಂಕೋರ್ಟ್ ಆದೇಶದ ಮೇರೆಗೆ ಕೇಂದ್ರದವರು ಕೊಟ್ಟರು. ಆ ಹಣವನ್ನು ಪೂರ್ಣ ಜನರಿಗೆ ಹಂಚಿದ್ದೇವೆ. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಅಕೌಂಟ್‌ನಲ್ಲಿ 700 ಕೋಟಿಗೂ ಹೆಚ್ಚು ಕೋಟಿ ಹಣ ಇದೆ. ರಾಜ್ಯ ಸರ್ಕಾರ ಕರ್ನಾಟಕದಲ್ಲಿ ಅಭಿವೃದ್ಧಿ ಮಾಡಲು ಹಣ ಇಲ್ಲ ಎಂದು ಆರೋಪಿಸುತ್ತಾರೆ. ಆದರೆ ಅದು ಶುದ್ಧ ಸುಳ್ಳು ಎಲ್ಲಾ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಬಿಜೆಪಿ, ಜೆಡಿಎಸ್‌ನವರಿಗೆ ಧಮ್ ಇಲ್ಲ. ಗ್ಯಾರಂಟಿ ನಿಲ್ಲಿಸಿ ಎಂದು ನೇರವಾಗಿ ಹೇಳಲಿ. ಬಡವರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಎಂಬ ಭಯದಿಂದ ಹೇಳದೇ ಗ್ಯಾರಂಟಿ ಯೋಜನೆಗೆ ಹಣ ಹಾಕಿ ಅಭಿವೃದ್ಧಿಗೆ ಹಣ ಇಲ್ಲ ಅಂತಾರೆ ಎಂದು ಕಿಡಿಕಾರಿದರು.

ನಮ್ಮನ್ನು ದಲಿತ ವಿರೋಧಿ ಎನ್ನುತ್ತಾರೆ. ನಾವು ದಲಿತರಿಗೆ ಮಾಡಿದಷ್ಟು ಕೆಲಸವನ್ನು ಬೇರೆ ಯಾವ ಸರ್ಕಾರವೂ ಮಾಡಲು ಸಾಧ್ಯವಿಲ್ಲ. ಬಿಜೆಪಿ ದಲಿತ ವಿರೋಧಿ ಅವರಿಂದ ಪಾಠ ಕಲಿಯುವ ಅಗತ್ಯವಿಲ್ಲ. ಎಸ್‌ಸಿಪಿ, ಟಿಎಸ್‌ಪಿ ಕಾಯ್ದೆ ನಮ್ಮ ಸರ್ಕಾರ ಮಾಡಿದಾಗ ಬಿಟ್ಟರೆ ಬಿಜೆಪಿ ಅಧಿಕಾರದಲ್ಲಿರುವ ಯಾವ ರಾಜ್ಯದಲ್ಲೂ ಇಲ್ಲ. ಕಾಯ್ದೆಯಡಿ 24 ಪರ್ಸೆಂಟ್ ದಲಿತರಿಗೆ 39 ಸಾವಿರದ 121 ಕೋಟಿ ಖರ್ಚು ಮಾಡುತ್ತಿದೆ. ಆದರೆ ಕೇಂದ್ರ ಸರ್ಕಾರ ಇಡೀ ದೇಶದಲ್ಲಿ ದಲಿತರಿಗೆ ಕೇವಲ 65 ಸಾವಿರ ಕೋಟಿಯನ್ನು ಮಾತ್ರ ಮೀಸಲಿಟ್ಟಿದೆ. ದಲಿತರ ಬಗ್ಗೆ ಮಾತನಾಡಲು ಯಾವುದೇ ನೈತಿಕತೆ ಬಿಜೆಪಿಗಿಲ್ಲ ಎಂದು ಟೀಕಿಸಿದರು.

ಕಂಡವರ ಮಕ್ಕಳ ಬೆಳೆಸೋರ್‍ಯಾರು?

ಮುಂದಿನ ತಲೆಮಾರಿಗೆ ಏನು ಕೊಟ್ರು ಎನ್ನುವುದೇ ಪ್ರಶ್ನೆ ಎಂದಿದ್ದಾರೆ. ಎಲ್ಲಾ ರಾಜಕೀಯ ಪಕ್ಷಗಳಲ್ಲೂ ಇದೇ ಕಥೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಜೆಡಿಎಸ್‌ನಲ್ಲಿ ಮಂತ್ರಿಗಳ ಮಕ್ಕಳಿಗೆ ಟಿಕೆಟ್ ಸಿಕ್ಕಿದೆ. ಇದಕ್ಕೆ ಬಿಜೆಪಿ ಕೂಡ ಹೊರತಾಗಿಲ್ಲ. ನಮ್ಮ ಪಕ್ಷದಲ್ಲೂ ಮಾಜಿ ಸಿಎಂ ಯಡಿಯೂರಪ್ಪ ಸಾಹೇಬ್ರಿಂದ ಹಿಡಿದು ಹಲವು ನಾಯಕರ ಮಕ್ಕಳಿಗೇ ಟಿಕೆಟ್ ಸಿಕ್ಕಿದೆ. ಎಲ್ಲರಿಗೂ ಅವರವರ ಮಕ್ಕಳದ್ದೇ ಚಿಂತೆ. ಹೀಗಾದರೆ ಸಮಾಜದ ಬಗ್ಗೆ ಕಾಳಜಿ ಇರುವ ಕಂಡೋರ ಮಕ್ಕಳು ಹೇಗೆ ಮುಂದೆ ಬರೋದು. ಹೀಗೇ ಮುಂದುವರೆದರೆ ರಾಜ್ಯದ ರಾಜಕೀಯವನ್ನು ಐದಾರು ಕುಟುಂಬಗಳು ಮಾತ್ರ ನಿಯಂತ್ರಿಸುತ್ತವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಚಲನಚಿತ್ರೋದ್ಯಮ, ಸಾಹಿತ್ಯ, ಕ್ರೀಡೆ ಸೇರಿದಂತೆ ವಿವಿಧ ಕ್ಷೇತ್ರಗಳ ಸಾಧಕರ ಮಕ್ಕಳನ್ನು ಗಮನಿಸಿ. ಅವರು ತಮ್ಮ ತಂದೆಯ ಶೇ.10ರಷ್ಟು ಸಾಧನೆ ಮಾಡುವುದಕ್ಕೂ ಸಾಧ್ಯವಾಗಿಲ್ಲ. ಆದರೆ ರಾಜಕೀಯದಲ್ಲಿ ಮಾತ್ರ ದೊಡ್ಡ ರಾಜಕಾರಣಿಗಳು ತಮ್ಮ ಮಕ್ಕಳನ್ನೂ ದೊಡ್ಡ ರಾಜಕಾರಣಿಗಳಾಗಿ ಮಾಡುತ್ತಿದ್ದಾರೆ. ತಮ್ಮ ಮಕ್ಕಳೇ ಮಂತ್ರಿಯಾಗಬೇಕು, ಸಿಎಂ ಆಗಬೇಕು ಎಂದು ಹಪಹಪಿಸುತ್ತಾರೆ. ಇದನ್ನೆಲ್ಲಾ ಪತ್ರಕರ್ತರು ತಮ್ಮ ಬರವಣಿಗೆ ಮೂಲಕ ತಿದ್ದಬೇಕು. ಸಾಮಾಜಿಕ ಕಾಳಜಿಯೊಂದಿಗೆ ಜನರಿಗೆ ಸತ್ಯ ತಿಳಿಸುವ ಕೆಲಸವನ್ನು ಪತ್ರಿಕೋದ್ಯಮ ಮಾಡದಿದ್ದರೆ ಮತ್ಯಾರು ಮಾಡಲು ಸಾಧ್ಯ. ಬರವಣಿಗೆ ಮುಂದುವರೆಸುವಂತೆ ನನ್ನನ್ನೂ ತುಂಬಾ ಜನ ಒತ್ತಾಯಿಸಿದ್ದಾರೆ. ನಾನು ಒಂದು ವೇಳೆ ಬರೆಯುವುದಕ್ಕೆ ಮುಂದಾದರೆ ಮೊದಲು ಬಿಜೆಪಿಯನ್ನೇ ತೊಳೆಯುತ್ತೇನೆ. ನನಗೆ ಎಲ್ಲಾ ಪಕ್ಷಗಳ ಬಗ್ಗೆಯೂ ಗೊತ್ತಿದೆ. ಎಲ್ಲರ ವ್ಯವಹಾರಗಳೂ ಗೊತ್ತಿದೆ. ಅವರ ಜೊತೆ ಪಾರ್ಟಿಗೆ ಹೋದರೆ ನಮಗೂ ಅದೇ ಬುದ್ಧಿ ಬರುತ್ತದೆ. ಹಾಗಾಗಿ ನಾನು ಅವರೊಂದಿಗೆ ಪಾರ್ಟಿಗೆ ಹೋಗಲ್ಲ ಎಂದು ಹೇಳಿದ್ದಾರೆ.

ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂಟ–2024

ಹಾಕಿ: ಭಾರತ–ಅರ್ಜೆಂಟೀನಾ ಪಂದ್ಯ ರೋಚಕ ಡ್ರಾ



ಪ್ಯಾರಿಸ್: ಪಂದ್ಯ ಮುಕ್ತಾಯಕ್ಕೆ ಇನ್ನೊಂದು ನಿಮಿಷ ಬಾಕಿ ಇರುವಾಗ ನಾಯಕ ಹರ್ಮನ್‌ಪ್ರೀತ್ ಸಿಂಗ್ ಬಾರಿಸಿದ ಮನಮೋಹಕ ಗೋಲ್ ನೆರವಿನಿಂದ ಭಾರತದ ಹಾಕಿ ತಂಡ ಸೋಲಿನ ದವಡೆಯಿಂದ ಪಾರಾಯಿತು.

ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾಕೂಟದ 'ಬಿ' ಗುಂಪಿನಲ್ಲಿರುವ ಭಾರತ ಸೋಮವಾರ ತನ್ನ 2ನೇ ಲೀಗ್ ಪಂದ್ಯದಲ್ಲಿ ಅರ್ಜೆಂಟೀನಾ ಎದುರು 1–1 ಅಂತರದ ರೋಚಕ ಡ್ರಾ ಸಾಧಿಸಿತು. ಈ ಫಲಿತಾಂಶದೊಂದಿಗೆ ಭಾರತ ಹಾಕಿ ತಂಡ ಅಂಕಪಟ್ಟಿಯಲ್ಲಿ 3ನೇ ಸ್ಥಾನ ಪಡೆಯಿತು.

ಜಿದ್ದಾಜಿದ್ದಿನಿಂದ ಕೂಡಿದ್ದ ಪಂದ್ಯದಲ್ಲಿ ಅರ್ಜೆಂಟೀನಾ ಪರ ಸ್ಟ್ರೈಕರ್ ಲೂಕಾಸ್ ಮಾರ್ಟಿನರ್ಝ್ ಪಂದ್ಯದ 22ನೇ ನಿಮಿಷದಲ್ಲಿ ಫೀಲ್ಡ್ ಗೋಲ್ ಬಾರಿಸಿ ತಂಡಕ್ಕೆ ಮುನ್ನಡೆ ಒದಗಿಸಿಕೊಟ್ಟರು. ಬಳಿಕ ಪಂದ್ಯದ ಬಹುಪಾಲು ಸಮಯ ಅತ್ಯುತ್ತಮ ಡಿಫೆನ್ಸ್ ಮೂಲಕ ಅರ್ಜೆಂಟೀನಾ ತಂಡ 1–0 ಅಂತರದ ಮೇಲುಗೈ ಪಡೆದುಕೊಂಡಿತ್ತು. ಇನ್ನೇನು ಅರ್ಜೆಂಟೀನಾ ಪಂದ್ಯವನ್ನು 1–0 ಅಂತರದಲ್ಲಿ ಗೆಲ್ಲಲಿದೆ ಎನ್ನುವಷ್ಟರಲ್ಲಿ ಭಾರತದ ಪರ ನಾಯಕ ಹರ್ಮನ್‌ಪ್ರೀತ್ ಸಿಂಗ್, ಸಿಕ್ಕ ಪೆನಾಲ್ಟಿ ಕಾರ್ನರ್ ಅನ್ನು ಅದ್ಭುತ ಗೋಲ್ ಆಗಿ ಪರಿವರ್ತಿಸಿ ಆಘಾತ ತಪ್ಪುವಂತೆ ಮಾಡಿದರು.

ಜಿದ್ದಾಜಿದ್ದಿನ ಪೈಪೋಟಿ: ಪಂದ್ಯದ ಮೊದಲ ಅವಧಿಯ 15 ನಿಮಿಷ ಉಭಯ ತಂಡಗಳು ಗೋಲ್ ಗಳಿಸಲು ಆಕ್ರಮಣಕಾರಿ ಆಟ ವಾಡಿದರೂ ಯಶಸ್ಸು ಸಿಗಲಿಲ್ಲ. ಸ್ಟ್ರೈಕರ್ ಅಭಿಷೇಕ್ ರಿವರ್ಸ್ ಹಿಟ್ ಮೂಲಕ ಚೆಂಡನ್ನು ಗೋಲ್ ಪೆಟ್ಟಿಗೆ ಸೇರಿಸುವ ಪ್ರಯತ್ನ ಮಾಡಿದರು. ಆದರೆ ಅರ್ಜೆಂಟೀನಾದ ಭದ್ರ ಡಿಫೆನ್ಸ್ ಅದನ್ನು ತಡೆದು ನಿಲ್ಲಿಸಿತ್ತು. ಪರಿಣಾಮ ಮೊದಲ ಅವಧಿ ಗೋಲ್ ರಹಿತ ಸಮಬಲದಲ್ಲಿ ಅಂತ್ಯಗೊಂಡಿತು.

ಬಳಿಕ ಎರಡನೇ ಅವಧಿಯಲ್ಲಿ ಮಾರ್ಟಿನರ್ಝ್ ಅದ್ಭುತ ಚಾಕಚಕ್ಯತೆಯೊಂದಿಗೆ ಫೀಲ್ಡ್ ಗೋಲ್ ಬಾರಿಸಿದರು. ಬಳಿಕ ಸಮಬಲದ ಗೋಲ್ ಸಲುವಾಗಿ ಭಾರತ ನಡೆಸಿದ ಸತತ ಪ್ರಯತ್ನಗಳು ವಿಫಲವಾದವು. ಸಿಕ್ಕ ಹಲವು ಅವಕಾಶಗಳನ್ನು ಭಾರತ ಬಳಸಿಕೊಳ್ಳಲಿಲ್ಲ. ಈ ನಡುವೆ ಅರ್ಜೆಂಟಿನಾ ತಂಡಕ್ಕೆ ಹಲವು ಪೆನಾಲ್ಟಿ ಕಾರ್ನರ್ ಅವಕಾಶ ಲಭ್ಯವಾಯಿತಾದರೂ ಗೋಲ್ ಅಂತರ ಹೆಚ್ಚಿಸುವ ಅವಕಾಶವನ್ನು ಭಾರತ ನೀಡಲಿಲ್ಲ. ಮೂರನೇ ಅವಧಿಯ ಅಂತ್ಯಕ್ಕೆ ಇನ್ನೆರಡು ನಿಮಿಷ ಬಾಕಿ ಇರುವಾಗ ಭಾರತ ತಂಡಕ್ಕೂ ಪೆನಾಲ್ಟಿ ಕಾರ್ನರ್ ಲಭ್ಯವಾಯಿತು. ಆದರೆ ಚೆಂಡನ್ನು ಗೋಲ್ ಪೆಟ್ಟಿಗೆ ಸೇರಿಸಲು ಇಂಡಿಯಾ ವಿಫಲವಾಯಿತು.

ಪೆನಾಲ್ಟಿ ಕಾರ್ನರ್ ತಂದ ಯಶಸ್ಸು: ಪಂದ್ಯದ ನಾಲ್ಕನೇ ಅವಧಿಯಲ್ಲಿ ಭಾರತದ ಗೋಲ್ ಕೀಪರ್ ಪಿ.ಆರ್.ಶ್ರೀಜೇಶ್ ಎದುರಾಳಿ ತಂಡದ ಹಲವು ಪ್ರಯತ್ನಗಳನ್ನು ತಡೆದರು. ಇನ್ನೇನು ಅರ್ಜೆಂಟೀನಾ ಪಂದ್ಯವನ್ನು 1–0 ಅಂತರದಲ್ಲಿ ಗೆಲ್ಲಲಿದೆ ಎನ್ನುವಷ್ಟರಲ್ಲಿ, 59ನೇ ನಿಮಿಷದಲ್ಲಿ ಸಿಕ್ಕ ಸತತ ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ನಾಯಕ ಹರ್ಮನ್‌ಪ್ರೀತ್ ಸಿಂಗ್ ಗೋಲ್ ಬಾರಿಸಿ ನಿಟ್ಟುಸಿರು ಬಿಡುವಂತಾದರು. ಭಾರತ ತಂಡ ಜು.30ರಂದು ನಡೆಯುವ ತನ್ನ 3ನೇ ಪಂದ್ಯದಲ್ಲಿ ಐರ್ಲೆಂಡ್ ಎದುರು ಪೈಪೋಟಿ ನಡೆಸಲಿದೆ.

ಬ್ಯಾಡ್ಮಿಂಟನ್‌ನಲ್ಲಿ ಬೆಲ್ಜಿಯಂ ವಿರುದ್ಧ ಗೆಲುವು

ಪ್ಯಾರಿಸ್: ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್ ಕ್ರೀಡಾಕೂಟದ ಪುರುಷರ ಸಿಂಗಲ್ಸ್‌ನ ಗುಂಪು ಹಂತದ ಬ್ಯಾಡ್ಮಿಂಟನ್ ಪಂದ್ಯದಲ್ಲಿ ಭಾರತದ ಲಕ್ಷ್ಯ ಸೇನ್ ಬೆಲ್ಜಿಯಂನ ಜೂಲಿಯನ್ ಕ್ಯಾರಾಗಿ ವಿರುದ್ಧ 2–0 ನೇರ ಸೆಟ್‌ಗಳಿಂದ ಗೆಲುವು ಸಾಧಿಸಿದ್ದಾರೆ. ಅವರು ತಮ್ಮ ಎದುರಾಳಿಯನ್ನು 21–19, 21–14 ಅಂಕಗಳಿಂದ ಸೋಲಿಸಿದ್ದಾರೆ.



ಪಂದ್ಯದ ಮೊದಲ ಸೆಟ್‌ನಲ್ಲಿ ಲಕ್ಷ್ಯ ಸೇನ್ ಮತ್ತು ಜೂಲಿಯನ್ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿತು. ಇಬ್ಬರೂ ಸಮಾನ ಅಂಕಗಳೊಂದಿಗೆ ಮುನ್ನಡೆದಿದ್ದರು. ಆದರೆ, ಕೊನೆಯಲ್ಲಿ ಲಕ್ಷ್ಯ ಸೇನ್ ಮೇಲುಗೈ ಸಾಧಿಸಿ ಮೊದಲ ಸೆಟ್ ಅನ್ನು 21–19 ರಿಂದ ಗೆದ್ದುಕೊಂಡರು.

2ನೇ ಸೆಟ್‌ನಲ್ಲಿ ಎದುರಾಳಿ ಮೇಲೆ ಆರಂಭದಿಂದಲೂ ಪ್ರಾಬಲ್ಯ ಸಾಧಿಸಿದ ಲಕ್ಷ್ಯ ಸೇನ್ ಮಧ್ಯ ವಿರಾಮದ ವೇಳೆಗೆ 11–5 ಸ್ಕೋರ್ ಮಾಡಿದ್ದರು. ಇದಾದ ಬಳಿಕ ಜೂಲಿಯನ್ ಮೇಲೆ ಹೆಚ್ಚಿನ ಒತ್ತಡ ಹೇರಿದ ಲಕ್ಷ್ಯ ಸೇನ್ ಎರಡನೇ ಸೆಟ್ ಅನ್ನು 21–14 ಅಂತರದಿಂದ ಗೆದ್ದುಕೊಂಡರು.

ಇದರೊಂದಿಗೆ ಪ್ಯಾರಿಸ್ ಒಲಿಂಪಿಕ್‌ನಲ್ಲಿ ಲಕ್ಷ್ಯ ಸೇನ್ 2ನೇ ಗೆಲುವು ದಾಖಲಿಸಿದರು. ಇದಕ್ಕೂ ಮೊದಲು, ಅವರು ಗ್ವಾಟೆಮಾಲಾದ ಆಟಗಾರ ಕೆವಿನ್ ಕಾರ್ಡನ್ ವಿರುದ್ಧ ತಮ್ಮ ಮೊದಲ ಗೆಲುವು ದಾಖಲಿಸಿದ್ದರು. ಆದರೆ, ಗಾಯದ ಕಾರಣದಿಂದಾಗಿ ಪಂದ್ಯಾವಳಿಯಿಂದ ಕೆವಿನ್ ಹೊರಗುಳಿದರು. ಇದಾದ ಬಳಿಕ ಲಕ್ಷ್ಯ ಅವರೊಂದಿಗಿನ ಪಂದ್ಯ ರದ್ದಾಯಿತು. ಆ ಪಂದ್ಯದ ಅಂಕಗಳು ಲಕ್ಷ್ಯ ಸೇನ್ ಖಾತೆಗೆ ಸೇರ್ಪಡೆಗೊಂಡಿವೆ. ಅದರ ಆಧಾರದ ಮೇಲೆ ಅಂಕಗಳನ್ನು ನೀಡಲಾಗಿದೆ.

ಭಾರತದ ಟೆನ್ನಿಸ್ ಅಭಿಯಾನ ಅಂತ್ಯ

ಪ್ಯಾರಿಸ್: ಭಾರತದ ರೋಹನ್ ಬೋಪಣ್ಣ ಮತ್ತು ಎನ್.ಶ್ರೀರಾಮ್ ಬಾಲಾಜಿ ಪ್ಯಾರಿಸ್ ಒಲಿಂಪಿಕ್‌ನ ಪುರುಷರ ಡಬಲ್ಸ್ ಟೆನ್ನಿಸ್ ಪಂದ್ಯದಲ್ಲಿ ಫ್ರೆಂಚ್ ಜೋಡಿ ಗೇಲ್ ಮೊನ್‌ಫಿಲ್ಸ್ ಮತ್ತು ಎಡ್ವರ್ಡ್ ರೋಜರ್–ವಾಸೆಲಿನ್ ವಿರುದ್ಧ ಸೋಲನುಭವಿಸಿದ್ದಾರೆ. ಮೊದಲ ಸುತ್ತಿನ ಪಂದ್ಯದಲ್ಲಿ ಭಾರತದ ಜೋಡಿ 5–7, 2–6 ಅಂತರದಿಂದ ಸೋಲನುಭವಿಸಿದ್ದು, ಇದರೊಂದಿಗೆ ಭಾರತದ ಪದಕ ಕನಸು ಕೂಡ ಭಗ್ನಗೊಂಡಿದೆ.



ಪಂದ್ಯದ ಆರಂಭದಿಂದಲೇ 2–4 ಅಂತರದಿಂದ ಬಾಲಾಜಿ ಮತ್ತು ಬೋಪಣ್ಣ ಜೋಡಿ ಹಿನ್ನಡೆ ಅನುಭವಿಸಿತ್ತು. ಬಳಿಕ ಕಮ್‌ಬ್ಯಾಕ್ ಮಾಡಲು ಭಾರತದ ಜೋಡಿ ಸತತ ಪ್ರಯತ್ನ ನಡೆಸಿ ಸ್ಕೋರ್ ಲೈನ್ 5–5ಕ್ಕೆ ಇಳಿಸಿತು. ಪಂದ್ಯದ ಮೊದಲ ಸೆಟ್ ಟೈ ಬ್ರೇಕರ್‌ನಲ್ಲಿ ಅಂತ್ಯಗೊಳ್ಳಲಿದೆ ಎಂದೇ ಅಂದಾಜಿಸಲಾಗಿತ್ತು. ಆದರೆ 2ನೇ ಬ್ರೇಕ್ ಪಡೆದ ಫ್ರೆಂಚ್ ಜೋಡಿ 42 ನಿಮಿಷಗಳಲ್ಲಿ 5–7 ಅಂತರದಿಂದ ಮೊದಲ ಸೆಟ್‌ನಲ್ಲಿ ಗೆಲುವು ಸಾಧಿಸಿತು. 2ನೇ ಸೆಟ್‌ನಲ್ಲಿ ಭಾರತದ ಜೋಡಿ ಪುಟಿದೇಳಲು ಸಾಕಷ್ಟು ಪ್ರಯತ್ನ ಪಟ್ಟಿತಾದರೂ ಸಾಧ್ಯವಾಗಲಿಲ್ಲ. ಫ್ರೆಂಚ್ ಜೋಡಿ ಎರಡನೇ ಸೆಟ್‌ನಲ್ಲೂ ತಮ್ಮ ಗೆಲುವಿನ ಓಟ ಮುಂದುವರೆಸಿ ಬೋಪಣ್ಣ ಮತ್ತು ಬಾಲಾಜಿ ಮೇಲೆ ಪ್ರಾಬಲ್ಯ ಸಾಧಿಸುತ್ತ ಸಾಗಿತು. ಕೇವಲ 28 ನಿಮಿಷಗಳಲ್ಲಿ, ಫ್ರೆಂಚ್ ಜೋಡಿ ಪಂದ್ಯವನ್ನು ತಮ್ಮದಾಗಿಸಿಕೊಂಡಿತು.

ಏರ್ ಪಿಸ್ತೂಲ್ ಮಿಶ್ರ ಸ್ಪರ್ಧೆ

ಕಂಚಿನ ಪದಕ ಸುತ್ತಿಗೆ ಲಗ್ಗೆಯಿಟ್ಟ ಮನು ಭಾಕರ್, ಸರಬ್ಜಿತ್ ಸಿಂಗ್

ಪ್ಯಾರಿಸ್: ಭಾನುವಾರವಷ್ಟೇ ಮಹಿಳೆಯರ ಶೂಟಿಂಗ್ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕ ಮುಡಿಗೇರಿಸಿಕೊಂಡಿದ್ದ ಭಾರತದ ಸ್ಟಾರ್ ಶೂಟರ್ ಮನು ಭಾಕರ್ ಅವರು ಇದೀಗ ಮಿಶ್ರ ವಿಭಾಗದಲ್ಲಿಯೂ ಕಂಚಿನ ಪದಕ ಗೆಲ್ಲುವ ಭರವಸೆ ಮೂಡಿಸಿದ್ದಾರೆ. ಮನು ಭಾಕರ್ ಮತ್ತು ಸರಬ್ಜಿತ್ ಜೋಡಿ, 10 ಮೀಟರ್ ಮಿಶ್ರ ಏರ್ ಪಿಸ್ತೂಲ್ ವಿಭಾಗದಲ್ಲಿ ಕಂಚಿನ ಪದಕದ ಪಂದ್ಯಕ್ಕೆ ಅರ್ಹತೆ ಪಡೆದಿದೆ. ಮಂಗಳವಾರ ನಡೆಯುವ ಈ ಪಂದ್ಯದಲ್ಲಿ ಈ ಜೋಡಿ, ಓಹ್ ಯೆ ಜಿನ್ ಮತ್ತು ಲೀ ವೊನ್ಹೋ ವಿರುದ್ಧ ಸೆಣಸಲಿದೆ. ಮನು ಭಾಕರ್ ಮತ್ತು ಸರಬ್ಜಿತ್ ಸಿಂಗ್ ಜೋಡಿ ಸೋಮವಾರ ನಡೆದ ಸ್ಪರ್ಧೆಯಲ್ಲಿ 580 ಅಂಕಗಳನ್ನು ಕಲೆ ಹಾಕಿತ್ತು. ಆ ಮೂಲಕ ಓಹ್ ಯೆ ಜಿನ್ ಮತ್ತು ಲೀ ವೊನ್ಹೋ (579) ಅವರಿಂದ ಒಂದು ಅಂಕ ಹಿಂದೆ ಉಳಿದಿದ್ದರು. ಎರಡನೇ ಸ್ಥಾನದಲ್ಲಿರುವ ಭಾರತ ಹಾಗೂ ಸರ್ಬಿಯಾ ಜೋಡಿಯ ನಡುವೆ ಕೇವಲ ಒಂದೇ ಒಂದು ಅಂಕ ವ್ಯತ್ಯಾಸವಿದೆ.



ಆರಂಭಿಕ 2 ಸೀರಿಸ್‌ನಲ್ಲಿ ಮನು ಭಾಕರ್ ಅವರು ತಲಾ 98 ಅಂಕಗಳನ್ನು ಕಲೆ ಹಾಕಿದ್ದರೆ, ಮೂರನೇ ಸೀರಿಸ್‌ನಲ್ಲಿ ಅವರು 96 ಅಂಕಗಳಿಗೆ ತೃಪ್ತಿಪಟ್ಟರು. ಇದರ ಪರಿಣಾಮ ಭಾರತದ ಮಿಶ್ರ ಜೋಡಿ 3ನೇ ಸ್ಥಾನಕ್ಕೆ ಕುಸಿಯಿತು ಹಾಗೂ ಕಂಚಿನ ಪದಕ್ಕೆ ಕಾದಾಟ ನಡೆಸಲಿದೆ. ಇನ್ನು ಸರಬ್ಜಿತ್ ಸಿಂಗ್ ಅವರು ಎರಡು ಮತ್ತು ಮೂರನೇ ಸೀರಿಸ್‌ನಲ್ಲಿ 97 ಅಂಕಗಳನ್ನು ಕಲೆ ಹಾಕಿದ್ದರು.

ಮೈಸೂರು ಮಿತ್ರ

ದೇಶ - ವಿದೇಶ

ಯುವಕನ ಹೊಟ್ಟೆಯಿಂದ ಹಾವಿನ ರೀತಿಯ ಹುಳು ತೆಗೆದ ವೈದ್ಯರು!

ಜೈಪುರ: ರಾಜಸ್ಥಾನದ ಕುಚ್ಮಾನ ನಗರದ ಆಸ್ಪತ್ರೆಯೊಂದರ ವೈದ್ಯರು ಶಸ್ತ್ರ ಚಿಕಿತ್ಸೆ ನಡೆಸಿ ಯುವಕನ ಹೊಟ್ಟೆಯಿಂದ 30 ಸೆಂಟಿ ಮೀಟರ್ ಉದ್ದದ ಅಪಾಯಕಾರಿ ಹುಳು ಹೊರ ತೆಗೆದಿದ್ದಾರೆ. ಶಸ್ತ್ರಚಿಕಿತ್ಸೆ ಬಳಿಕ ಯುವಕ ಆರೋಗ್ಯವಾಗಿದ್ದು, ವಿಶ್ರಾಂತಿ ಪಡೆದುಕೊಳ್ಳುತ್ತಿದ್ದಾನೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ. 30 ವರ್ಷದ ಯುವಕ ಹಲವು ದಿನಗಳಿಂದ ಹೊಟ್ಟೆ ನೋವಿನಿಂದ ಬಳಲುತ್ತಿದ್ದ. ಹಲವು ಔಷಧಿಯನ್ನು ಸಹ ಯುವಕ ನಿರಂತರವಾಗಿ ತೆಗೆದುಕೊಂಡರೂ ಗುಣಮುಖನಾಗಿರಲಿಲ್ಲ. ಔಷಧಿ ಸೇವಿಸಿದಾಗ ಸ್ವಲ್ಪ ಸಮಯ ಹೊಟ್ಟೆ ನೋವು ಶಮನವಾಗುತ್ತಿತ್ತು. ನಂತರ ಮತ್ತೆ ಆ ಸಮಸ್ಯೆ ಕಾಣಿಸಿಕೊಳ್ಳುತ್ತಿತ್ತು. ಹೀಗಾಗಿ ಸ್ಥಳೀಯ ವೈದ್ಯರು ಸೋನೋಗ್ರಾಫಿ ಮಾಡಿಸುವಂತೆ ಸಲಹೆ ನೀಡಿದ್ದರು.



ಸೋನೋಗ್ರಾಫಿಯಲ್ಲಿ ಯುವಕನ ಸಣ್ಣ ಕರುಳಿನಲ್ಲಿ ಹಾವಿನ ರೀತಿಯ ದಪ್ಪವಾದ ಹುಳು ಕಾಣಿಸಿಕೊಂಡಿತ್ತು. ಮರುದಿನವೇ ವೈದ್ಯರು ಅಲ್ಬೆಂಡ್‌ಜೋಲ್ ನೀಡಿ 30 ಸೆಂಟಿ ಮೀಟರ್ ಉದ್ದದ ಹುಳು ಹೊರ ತೆಗೆದಿದ್ದಾರೆ. ಇದು ಮೊದಲ ಪ್ರಕರಣವೇನು ಅಲ್ಲ. ಈ ಹಿಂದೆಯೂ ಇಂತಹ ಪ್ರಕರಣಗಳು ದಾಖಲಾಗಿವೆ. ಕೆಲ ಮಕ್ಕಳು ಬಾಲ್ಯದಲ್ಲಿ ಮಣ್ಣು ತಿನ್ನುವ ಅಭ್ಯಾಸ ಮಾಡಿಕೊಂಡಿರುತ್ತವೆ. ಕೆಲ ಮಕ್ಕಳು ಸ್ವಚ್ಛವಾಗಿ ಕೈ ತೊಳೆಯದೇ ಆಹಾರ ಸೇವಿಸಿರುತ್ತವೆ. ಈ ಕಾರಣದಿಂದ ಹೊಟ್ಟೆಯಲ್ಲಿ ಹುಳುಗಳ ರಚನೆಯಾಗಿ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಹಸಿರು ತರಕಾರಿ ಮತ್ತು ಹಣ್ಣುಗಳನ್ನು ಸ್ವಚ್ಛಗೊಳಿಸದೇ ಸೇವನೆ ಮಾಡೋದರಿಂದ ಇಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ ಎಂದು ವೈದ್ಯರು ಹೇಳುತ್ತಾರೆ.

ಫ್ರಾನ್ಸ್‌ನಲ್ಲಿ ರೈಲ್ವೆ ಬಳಿಕ ಮೊಬೈಲ್ ನೆಟ್‌ವರ್ಕ್ ಮೇಲೆ ದಾಳಿ


ಪ್ಯಾರಿಸ್: ಪ್ಯಾರಿಸ್ ಒಲಿಂಪಿಕ್ಸ್‌ಗೆ ಮತ್ತೊಂದು ವಿಘ್ನ ಎದುರಾಗಿದೆ. ಪ್ಯಾರಿಸ್ ಒಲಿಂಪಿಕ್ಸ್ ಉದ್ಘಾಟನಾ ಕಾರ್ಯಕ್ರಮಕ್ಕೆ ಗಂಟೆಗಳ ಮುನ್ನ ಇಡೀ ದೇಶದ ಹೈಸ್ಪೀಡ್ ರೈಲು ಸಂಪರ್ಕ ಜಾಲವನ್ನೇ ಹಾಳುಗೆಡವಿದ್ದ ದುಷ್ಕರ್ಮಿಗಳ ಕಣ್ಣು ಇದೀಗ ಫ್ರಾನ್ಸ್ ದೇಶದ ಮೊಬೈಲ್ ನೆಟ್‌ವರ್ಕ್ ಮೇಲೆ ಬಿದ್ದಿದೆ.



ದೇಶಾದ್ಯಂತ ಹಲವೆಡೆ ಮೊಬೈಲ್ ಸಂಪರ್ಕ ಜಾಲ ಹಾಗೂ ಫೈಬರ್ ಕೇಬಲ್‌ಗಳನ್ನು ದುಷ್ಕರ್ಮಿಗಳು ಕಡಿತಗೊಳಿಸಿದ್ದಾರೆ. ಫ್ರಾನ್ಸ್ ದೇಶಾದ್ಯಂತ ಹಲವು ನಗರಗಳಲ್ಲಿ ಮೊಬೈಲ್ ನೆಟ್‌ವರ್ಕ್ ಕಡಿತಗೊಂಡಿದೆ ಹಾಗೂ ಹೈಸ್ಪೀಡ್ ಇಂಟರ್‌ನೆಟ್ ಸೇವೆ ಸ್ಥಗಿತವಾಗಿದೆ. ದುಷ್ಕರ್ಮಿಗಳು ಹೈಸ್ಪೀಡ್ ರೈಲು ಸಂಪರ್ಕ ಜಾಲದ ಮೇಲೆ ದಾಳಿ ಮಾಡಿ ಬೆಂಕಿ ಇಟ್ಟ ರೀತಿಯಲ್ಲೇ ಮೊಬೈಲ್ ಸಂಪರ್ಕ ಜಾಲವನ್ನೂ ವ್ಯವಸ್ಥಿತವಾಗಿ ತುಂಡರಿಸಿದ್ದಾರೆ. ವಿಪರ್ಯಾಸವೆಂದರೆ, ಈ ರೀತಿಯ ಕೃತ್ಯ ಎಸಗುತ್ತಿರುವುದು ಯಾರು ಎಂದು ಪತ್ತೆ ಮಾಡಲು ಈಗಲೂ ಫ್ರಾನ್ಸ್ ದೇಶದ ಪೊಲೀಸ್ ವ್ಯವಸ್ಥೆ ವಿಫಲವಾಗಿದೆ. ಮೊಬೈಲ್ ಹಾಗೂ ಇಂಟರ್‌ನೆಟ್ ಸೇವೆ ಸ್ಥಗಿತಗೊಂಡಿರುವುದರ ಪರಿಣಾಮ ಪ್ಯಾರಿಸ್ ಒಲಿಂಪಿಕ್ಸ್ ಮೇಲೂ ಆಗಿದೆ. ಭಾನುವಾರ ತಡರಾತ್ರಿ ಹಾಗೂ ಸೋಮವಾರ ಬೆಳಗ್ಗೆ ಒಳಗೆ ದುಷ್ಕರ್ಮಿಗಳು ಅಹೋರಾತ್ರಿ ದುಷ್ಕೃತ್ಯಗಳನ್ನು ಎಸಗಿದ್ದಾರೆ. ಈ ಕುರಿತು ಫ್ರಾನ್ಸ್ ಪೊಲೀಸ್ ಇಲಾಖೆ ಅಧಿಕೃತ ಮಾಹಿತಿ ನೀಡಿದ್ದು, ದೇಶದ ಒಟ್ಟು 6 ಆಡಳಿತಾತ್ಮಕ ವಲಯಗಳು ಸಮಸ್ಯೆಗೆ ಸಿಲುಕಿವೆ ಎಂದು ಮಾಹಿತಿ ನೀಡಿದ್ದಾರೆ.

ಉಕ್ರೇನ್ ಯುದ್ಧದಲ್ಲಿ ರಷ್ಯಾ ಪರ ಹರ್ಯಾಣ ಮೂಲದ ವ್ಯಕ್ತಿ ಸಾವು

ಹರ್ಯಾಣ: ರಷ್ಯಾ ಪರ ಉಕ್ರೇನ್‌ನಲ್ಲಿ ಯುದ್ಧದಲ್ಲಿ ತೊಡಗಿದ್ದ ಹರ್ಯಾಣ ಮೂಲದ ವ್ಯಕ್ತಿಯೋರ್ವ ಸಾವನ್ನಪ್ಪಿದ್ದಾರೆ. ವ್ಯಕ್ತಿಯ ಕುಟುಂಬ ಸದಸ್ಯರು ಈ ಮಾಹಿತಿ ಬಹಿರಂಗಪಡಿಸಿದ್ದು, ಮಾಸ್ಕೋದಲ್ಲಿರುವ ಭಾರತೀಯ ರಾಯಭಾರ ಕಚೇರಿ ಹರ್ಯಾಣ ಮೂಲದ 22 ವರ್ಷದ ವ್ಯಕ್ತಿಯ ಸಾವನ್ನು ಖಚಿತಪಡಿಸಿದೆ. ಹರ್ಯಾಣದ ಕೈತಾಲ್ ಜಿಲ್ಲೆಯ ಮತೌರ್ ಗ್ರಾಮದ ನಿವಾಸಿಯಾಗಿದ್ದ ರವಿ ಮೌನ್ ಏಜೆಂಟ್ ಒಬ್ಬರ ಸಹಾಯದಿಂದ ಸಾರಿಗೆ ಸಂಬಂಧಿತ ಉದ್ಯೋಗಕ್ಕೆ ನೇಮಕಗೊಂಡ ಹಿನ್ನೆಲೆಯಲ್ಲಿ ಜ.13ರಂದು ರಷ್ಯಾಗೆ ತೆರಳಿದ್ದರು ಆದರೆ ಆತನನ್ನು ರಷ್ಯಾ ಒತ್ತಾಯಪೂರ್ವಕವಾಗಿ ತನ್ನ ಸೇನೆಗೆ ಸೇರಿಸಿಕೊಂಡಿತ್ತು ಎಂದು ರವಿ ಸಹೋದರ ಅಜಯ್ ಮೌನ್ ಹೇಳಿದ್ದಾರೆ. ಜು.21 ರಂದು ನನ್ನ ಸಹೋದರನ ಬಗ್ಗೆ ನಾನು ಮಾಹಿತಿ ಕೇಳಿ ರಾಯಭಾರ ಕಚೇರಿಗೆ ಪತ್ರ ಬರೆದಿದ್ದೆ. ನಿಮ್ಮ ಸಹೋದರ ಸಾವನ್ನಪ್ಪಿದ್ದಾರೆ. ಮೃತದೇಹದ ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆ ವರದಿ ಕಳಿಸಿಕೊಡುವಂತೆ ರಾಯಭಾರ ಕಚೇರಿ ಕುಟುಂಬ ಸದಸ್ಯರನ್ನು ಕೇಳಿದೆ.



ಉಕ್ರೇನಿಯನ್ ಪಡೆಗಳ ವಿರುದ್ಧ ಹೋರಾಡಲು ಮುಂಚೂಣಿಗೆ ಹೋಗಬೇಕು ಇಲ್ಲವೇ 10 ವರ್ಷಗಳ ಜೈಲು ಶಿಕ್ಷೆ ಎದುರಿಸಬೇಕಾಗುತ್ತದೆ ಎಂದು ರಷ್ಯಾದ ಸೈನ್ಯವು ತನ್ನ ಸಹೋದರನಿಗೆ ಬೆದರಿಕೆ ಹಾಕಿತ್ತು ಎಂದು ಅಜಯ್ ಮೌನ್ ಆರೋಪಿಸಿದ್ದು ಮಾ.12ವರೆಗೆ ತಾವು ಆತನೊಂದಿಗೆ ಸಂಪರ್ಕದಲ್ಲಿದ್ದೆವು ಎಂದು ಹೇಳಿದ್ದಾರೆ. ರವಿ ಮೌನ್ ಅವರನ್ನು ರಷ್ಯಾಗೆ ಕಳುಹಿಸುವುದಕ್ಕಾಗಿ ಒಂದು ಎಕರೆ ಭೂಮಿ ಮಾರಾಟ ಮಾಡಿ 11.50 ರೂ. ಖರ್ಚು ಮಾಡಿದ್ದೆವು ಈಗ ಆತನ ಮೃತದೇಹ ತರುವುದಕ್ಕೂ ನಮ್ಮ ಬಳಿ ಹಣ ಇಲ್ಲ ಎಂದು ಕುಟುಂಬದವರು ಕಣ್ಣೀರು ಹಾಕಿದ್ದಾರೆ.

ಅಮೆರಿಕದಲ್ಲಿ ಡ್ರಗ್ಸ್ ಚಟಕ್ಕೆ ಭಾರತೀಯ ವಿದ್ಯಾರ್ಥಿಗಳು ಬಲಿ

ಟೆಕ್ಸಾಸ್: ಉತ್ತಮ ಭವಿಷ್ಯದ ಆಶಯದೊಂದಿಗೆ ಲಕ್ಷಾಂತರ ರೂ. ಹಣ ವೆಚ್ಚ ಮಾಡಿ ಭಾರತೀಯ ಪೋಷಕರು ತಮ್ಮ ಮಕ್ಕಳನ್ನು ಅಮೆರಿಕಗೆ ವ್ಯಾಸಂಗ ಮಾಡಲು ಕಳುಹಿಸುತ್ತಾರೆ. ಆದರೆ ಈ ರೀತಿ ಅಮೆರಿಕಗೆ ತೆರಳುವ ವಿದ್ಯಾರ್ಥಿಗಳಲ್ಲಿ ಕೆಲವರು ಡ್ರಗ್ಸ್ ಚಟಕ್ಕೆ ಬಲಿಯಾಗುತ್ತಿದ್ದಾರೆ. ಕಳೆದ ಕೆಲವು ತಿಂಗಳುಗಳಲ್ಲಿ ಭಾರತೀಯ ವಿದ್ಯಾರ್ಥಿಗಳು ಅತಿಯಾಗಿ ಡ್ರಗ್ಸ್ ಸೇವಿಸಿ ಅಸ್ವಸ್ಥರಾದ, ಮೃತಪಟ್ಟ ಪ್ರಕರಣಗಳಲ್ಲಿ ಏರಿಕೆ ಕಂಡು ಬಂದಿದೆ. ಅದರಲ್ಲೂ ತೆಲುಗು ಸಮುದಾಯದ ವಿದ್ಯಾರ್ಥಿಗಳೇ ಹೆಚ್ಚಿನ ಪ್ರಕರಣಗಳಲ್ಲಿ ಡ್ರಗ್ಸ್ ಓವರ್ ಡೋಸ್ ಆಗಿ ಆಸ್ಪತ್ರೆ ಪಾಲಾಗಿದ್ದಾರೆ. ಕೆಲವರು ಸಾವನ್ನಪ್ಪಿದ್ದಾರೆ. ಅಮೆರಿಕದಲ್ಲಿ ಇರುವ ಭಾರತೀಯ ವಿದ್ಯಾರ್ಥಿಗಳಿಗೆ ಅವರು ವ್ಯಾಸಂಗ ಮಾಡುತ್ತಿರುವ ಕಾಲೇಜು, ವಿಶ್ವವಿದ್ಯಾಲಯ ಹಾಗೂ ಹಾಸ್ಟೆಲ್‌ಗಳಲ್ಲಿ ಅತ್ಯಂತ ಸುಲಭವಾಗಿ ಹಾಗೂ ಕಡಿಮೆ ದರಕ್ಕೆ ಡ್ರಗ್ಸ್ ಸಿಗುತ್ತಿದೆ. ಹೀಗಾಗಿ, ವಿದ್ಯಾರ್ಥಿಗಳು ತಮ್ಮ ಸಹಪಾಠಿಗಳ ಜೊತೆ ಡ್ರಗ್ಸ್ ಸೇವನೆಯಲ್ಲಿ ತೊಡಗಿ, ಕಾಲಾಂತರದಲ್ಲಿ ಚಟಕ್ಕೆ ತುತ್ತಾಗುತ್ತಿದ್ದಾರೆ. ಆರಂಭದಲ್ಲಿ ಮೋಜಿನೊಂದಿಗೆ ಶುರುವಾಗುವ ಡ್ರಗ್ಸ್ ಸೇವನೆ ಹವ್ಯಾಸ, ಬಳಿಕ ಚಟವಾಗಿ ಆ ನಂತರ ಮಾರಣಾಂತಿಕವಾಗಿ ಪರಿಣಮಿಸುತ್ತಿದೆ. ಅಮೆರಿಕದ ಟೆಕ್ಸಾಸ್ ಹಾಗೂ ಕ್ಯಾಲಿಫೋರ್ನಿಯಾ ರಾಜ್ಯಗಳಲ್ಲೇ ಈ ರೀತಿಯ ಪ್ರಕರಣಗಳು ಹೆಚ್ಚಾಗಿವೆ ಎಂದು ಉತ್ತರ ಅಮೆರಿಕದ ತೆಲುಗು ಸಂಘ ಮಾಹಿತಿ ನೀಡಿದೆ.



25 ಬಾರಿ ಮದುವೆಯಾಗಿದ್ದ ವಂಚಕನ ಸೆರೆ

ಪಾಲ್ಘರ್: ಮದುವೆ ಬಳಿಕ ಮೊದಲ ರಾತ್ರಿ, ಮರುದಿನ ರಾತ್ರಿ ಈತ ನಾಪತ್ತೆ. ಹೆಚ್ಚೆಂದರೆ ಒಂದು ವಾರ. ಒಂದೊಂದು ಪಟ್ಟಣ, ನಗರ, ಹಳ್ಳಿಯಲ್ಲಿ ಒಂದೊಂದು ಹೆಸರನ್ನಿಟ್ಟುಕೊಂಡು 25 ಮದುವೆಯಾಗಿದ್ದಾನೆ. ಇದು ಅಧಿಕೃತ. ಇನ್ನು ಅನಧಿಕೃತ ಮದುವೆ, ಸಂಸಾರ ಕುರಿತು ಪೊಲೀಸರು ವಿಚಾರಣೆ ಆರಂಭಿಸಿದ್ದಾರೆ. ಈ ಚಾಲಾಕಿ ಹೆಸರು ಫಿರೋಜ್ ಶೇಕ್. ವಿಧವೆಯರು, ವಿಚ್ಛೇದನ ಪಡೆದ ಮಹಿಳೆಯರೇ ಇವನ ಟಾರ್ಗೆಟ್. 26ನೇ ಮದುವೆ ತಯಾರಿಯಲ್ಲಿ ಘಟನೆ ಮಹಾರಾಷ್ಟ್ರಯ ಪಾಲ್ಘರ್‌ನಲ್ಲಿ ಸಿಕ್ಕಿ ಬಿದ್ದಿದ್ದಾನೆ. ಆನ್‌ಲೈನ್ ವಧು-ವರರ ವೇದಿಕೆಗಳಲ್ಲಿ ಡಿವೋರ್ಸ್, ವಿಧವೆಯರ ಪ್ರೊಫೈಲ್ ಹುಡುಕಾಡಿ, ಅವರನ್ನು ಬುಟ್ಟಿಗೆ ಹಾಕಿಕೊಳ್ಳುತ್ತಾನೆ. ಅಕ್ಕ ಪಕ್ಕದ ಜಿಲ್ಲೆಗಳ ಮಹಿಳೆಯರನ್ನೇ ಟಾರ್ಗೆಟ್ ಮಾಡಿಕೊಳ್ಳುತ್ತಾನೆ. ಬಳಿಕ ತಾನು ಪಕ್ಕದ ಜಿಲ್ಲೆಯವನ್ನು ಎಂದು ಹೊಸ ಹೆಸರು ಹೊಸ ವಿಳಾಸ ನೀಡಿ ಪುಸಲಾಯಿಸುತ್ತಾನೆ. ಮಹಿಳೆಯರು ಹಳೆ ನೋವುಗಳನ್ನು ಮರೆತ ಹೊಸ ಬದುಕು ಕಟ್ಟಿಕೊಳ್ಳುವ ಭರದಲ್ಲಿದ್ದರೆ ಈತ ಮದುವೆಯಾದ ಕೆಲವೇ ದಿನಗಳಲ್ಲಿ ನಾಪತ್ತೆಯಾಗುತ್ತಾನೆ. ಈತ ರೆಹಮಾನ್, ಸುಲೇಮಾನ್, ರಮೇಶ, ಸುರೇಶ ಸೇರಿದಂತೆ ಹಲವು ಹೆಸರಿನಲ್ಲಿ ಮಹಿಳೆಯರನ್ನು ವಂಚಿಸಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಈತ ಮದುವೆಯಾಗುವ ಉದ್ದೇಶವೇ ಅವರ ಒಡವೆ, ಹಣ ಎಲ್ಲವನ್ನು ದೋಚಲು. ಯಾವುದೇ ಕೆಲಸಕ್ಕೆ ಹೋಗುತ್ತಿಲ್ಲ. ಬದುಕಲು ಬೇರೆ ಆದಾಯವಿಲ್ಲ. ಹೀಗಾಗಿ ಮದುವೆಯನ್ನೇ ಬ್ಯುಸಿನೆಸ್ ಮಾಡಿಕೊಂಡಿದ್ದಾನೆ.

2021ರಲ್ಲೇ ಮುಡಾದಲ್ಲಿ ಮಿತಿಮೀರಿದ ಭ್ರಷ್ಟಾಚಾರ

ವಿವಿಧ ಸಂಘಟನೆ ಮುಖಂಡರ ಸಭೆಯಲ್ಲಿ ಆರೋಪ



ಮುಡಾದಲ್ಲಿ 2021ರಲ್ಲಿ ನಡೆದಿರುವ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಮೈಸೂರಿನ ಮಹಾತ್ಮ ಗಾಂಧಿ ವೃತ್ತದ ಬಳಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸಾರ್ವಜನಿಕ ಚರ್ಚೆಯಲ್ಲಿ ಪಾಲ್ಗೊಂಡಿರುವ ವಿವಿಧ ಸಂಘಟನೆಗಳ ಮುಖಂಡರು.

ಮೈಸೂರು,ಜು.29(ಎಂಟಿವೈ)- ಮುಡಾದಲ್ಲಿ 2021ರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಭ್ರಷ್ಟಾಚಾರದ ಬಗ್ಗೆ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ಹಿಂದುಳಿದ ವರ್ಗಗಳ ಸಂಘಟನೆಗಳ ವತಿಯಿಂದ ಆಯೋಜಿಸಿದ್ದ ಸಾರ್ವಜನಿಕ ಸಭೆಯಲ್ಲಿ ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು.

ಮೈಸೂರಿನ ಮಹಾತ್ಮಗಾಂಧಿ ವೃತ್ತದ ಬಳಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸಾರ್ವಜನಿಕ ಚರ್ಚೆ ಆಯೋಜಿಸಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಕೆಲ ರಾಜಕಾರಣಿಗಳನ್ನು ಆಹ್ವಾನಿಸಿತ್ತು. ಆದರೆ, ಯಾವುದೇ ರಾಜಕಾರಣಿ ಸಭೆಯಲ್ಲಿ ಪಾಲ್ಗೊಳ್ಳಲಿಲ್ಲ. ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡು 2021ರಲ್ಲಿ ಬಿಜೆಪಿ ಸರ್ಕಾರದ ಅವಧಿಯಲ್ಲಿಯೇ ಮಿತಿಮೀರಿದ ಪ್ರಮಾಣದಲ್ಲಿ ಮುಡಾದಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿದರು.

ಇದೇ ವೇಳೆ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮ್ ಮಾತನಾಡಿ, ಬಿಜೆಪಿ ಮತ್ತು ಜೆಡಿಎಸ್ ಹೇಗಾದರೂ ಮಾಡಿ ಸಿದ್ದರಾಮಯ್ಯ ಅವರ ವರ್ಚಸ್ಸಿಗೆ ಧಕ್ಕೆ ಉಂಟು ಮಾಡಿ, ಅಧಿಕಾರದಿಂದ ಕೆಳಗಿಳಿಸುವ ಉದ್ದೇಶದಿಂದ ರಾಜಕೀಯ ಹುನ್ನಾರ ಮಾಡುತ್ತಿವೆ. ಮುಡಾ ಪ್ರಕರಣವನ್ನು ಬಿಜೆಪಿ, ಜೆಡಿಎಸ್ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುತ್ತಿದ್ದಾರೆ. ಆದರೆ 2021ರಲ್ಲಿ ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದ ವೇಳೆ ಮುಡಾದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ. ಆ ಭ್ರಷ್ಟಾಚಾರದ ರೂವಾರಿ ಆಗಿನ ಬಿಜೆಪಿ ರಾಜ್ಯ ಉಪಾಧ್ಯಕ್ಷರಾಗಿದ್ದ ವಿಜಯೇಂದ್ರ ಮತ್ತು ಅವರ ತಂಡ. ಮುಡಾದಲ್ಲಿ ಭಾರಿ ಭ್ರಷ್ಟಾಚಾರ ಮಾಡಿ, ಮುಡಾವನ್ನು ಅಧೋಗತಿಗೆ ತಂದಿದ್ದಾರೆ. ಈ ಕುರಿತು 2021ರಲಿಯೇ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಬೃಹತ್ ಹೋರಾಟ ನಡೆಸಿ ದಾಖಲೆಯೊಂದಿಗೆ ದೂರು ಸಲ್ಲಿಸಿತ್ತು. ಸಿಬಿಐ ತನಿಖೆಗೂ ಆಗ್ರಹಿಸಿತ್ತು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ, ವಿಜಯೇಂದ್ರ ಸೊಲ್ಲೆತ್ತಲಿಲ್ಲ. ಆದರೆ ಇದೀಗ ಜನರನ್ನು ದಿಕ್ಕು ತಪ್ಪಿಸಲು ಸಂಚು ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಅಹಿಂದ ವರ್ಗದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಆ ಹುದ್ದೆಯಿಂದ ಕೆಳಗಿಳಿಸಲು ನಡೆಸುತ್ತಿರುವ ಪಿತೂರಿಯನ್ನು ಇನ್ನಾದರೂ ನಿಲ್ಲಿಸಬೇಕು. ಇಲ್ಲದಿದ್ದರೆ ಬಿಜೆಪಿ, ಜೆಡಿಎಸ್ ವಿರುದ್ಧ ಅಹಿಂದ ಸಮುದಾಯಗಳು ದಂಗೆ ಏಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಚುಂಚನಹಳ್ಳಿ ಮಲ್ಲೇಶ್, ಅಲ್ಪಸಂಖ್ಯಾತ ಮುಖಂಡರಾದ ನಾಸೀರ್, ರೆಸ್ಪಾನ್ಸಿಬಲ್ ಸಿಟಿಜನ್ ವಾಯ್ಸ್ ವೇದಿಕೆ ರಾಜ್ಯಾಧ್ಯಕ್ಷ ಎಂ.ಎಫ್.ಖಲೀಂ, ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಹೆಚ್.ಎಸ್. ಪ್ರಕಾಶ್, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ್, ನಗರ ಕಾಂಗ್ರೆಸ್ ಓಬಿಸಿ ಘಟಕದ ಅಧ್ಯಕ್ಷ ಎನ್.ಆರ್.ನಾಗೇಶ್, ಹಿಂದುಳಿದ ವರ್ಗಗಳ ಮುಖಂಡರಾದ ಲೋಕೇಶ್ ಮಾದಾಪುರ, ಕೇಶವ, ರಾಜಶೇಖರ್, ಶಿವಲಿಂಗಯ್ಯ, ಅಲ್ಪಸಂಖ್ಯಾತರ ಮುಖಂಡರಾದ ರಹೀಮ್, ಸುನಿಲ್ ನಾರಾಯಣ್, ರವಿ ನಜರ್‌ಬಾದ್, ಮಂಜುಳ, ಮಂಗಳ, ಮಾಲತಿ ಮುಂತಾದವರು ಭಾಗವಹಿಸಿದ್ದರು.

1990ರಿಂದ ಮುಡಾದಲ್ಲಿ ನಡೆದಿರುವ ಅಕ್ರಮದ ತನಿಖೆಯಾಗದಿದ್ದರೆ ನ್ಯಾಯಾಲಯಕ್ಕೆ ಮೊರೆ

ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಎಚ್ಚರಿಕೆ

ಮೈಸೂರು,ಜು.29(ಎಂಟಿವೈ)- ಮುಡಾದಲ್ಲಿ 1990ರಿಂದ ಇದು ವರೆಗೆ ಪ್ರಭಾವಿಗಳು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಮುಡಾಗೆ ವಂಚಿಸಿ ಅಕ್ರಮ ಲಾಭ ಮಾಡಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸದಿದ್ದರೆ ನ್ಯಾಯಾಲಯದ ಮೊರೆ ಹೋಗುವುದಾಗಿ ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಎಚ್ಚರಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1990ರಿಂದ ಮುಡಾದಲ್ಲಿ ನಡೆದಿರುವ ಅಕ್ರಮ ಕುರಿತಂತೆ ತನಿಖೆ ನಡೆಸಲು ಈಗಾಗಲೇ ಲೋಕಾಯುಕ್ತರಿಗೂ ದೂರು ನೀಡಲಾಗಿದೆ. ಸರ್ಕಾರ ಇನ್ನಾದರೂ ಸಮಗ್ರ ತನಿಖೆ ನಡೆಸಬೇಕು. ಪ್ರಭಾವಿಗಳು, ಅಧಿಕಾರಿಗಳು, ಜನಪ್ರತಿನಿಧಿಗಳಿಂದ ಮುಡಾಗೆ ಆಗಿರುವ ವಂಚನೆಯನ್ನು ಬಯಲಿಗೆಳೆದು, ನಷ್ಟ ಭರಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಸಿಎಂ ಭಾಗಿ: ಮುಡಾದಿಂದ 14 ನಿವೇಶನ ಪಡೆದಿರುವ ವಿಷಯದಲ್ಲಿ ತಾವಾಗಲೀ, ತಮ್ಮ ಕುಟುಂಬದವರಾಗಲೀ ಅಕ್ರಮ ಎಸಗಿಲ್ಲ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ಆದರೆ, ಸಿದ್ದರಾಮಯ್ಯ ಅವರು ತಮ್ಮ ಅಧಿಕಾರ ದುರ್ಬಳಕೆ ಮಾಡಿಕೊಂಡು, ತಮ್ಮ ಕುಟುಂಬದವರ ಹೆಸರಿನಲ್ಲಿ ಸುಳ್ಳು ದಾಖಲೆ ಸೃಷ್ಟಿಸಿ, ಪ್ರಾಧಿಕಾರವನ್ನು ವಂಚಿಸಿ 14 ನಿವೇಶನ ಪಡೆದಿದ್ದಾರೆ. ಅವರ ಪತ್ನಿ ಪಾರ್ವತಿ ಅವರ ಹೆಸರಿಗೆ ಬಂದಿದ್ದ ಜಮೀನಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸಿಎಂ ಪರೋಕ್ಷವಾಗಿ ಭಾಗಿಯಾಗಿದ್ದಾರೆ. ಈ ಕುರಿತು ದಾಖಲೆ ಸಂಗ್ರಹಿಸಿದ್ದು ಅವುಗಳಿಗೆ ಸಂಬಂಧಿಸಿದಂತೆ ಸಿಎಂ ಉತ್ತರ ನೀಡುವರೇ ಎಂದು ಸವಾಲೆಸೆದರು. ಸುದ್ದಿಗೋಷ್ಠಿಯಲ್ಲಿ ಹೋರಾಟಗಾರ ಭಾನುಮೋಹನ್ ಇದ್ದರು.

ತಮ್ಮ ವಿರುದ್ಧ ಮುಖ್ಯಮಂತ್ರಿ ಆರೋಪದಿಂದ ನೊಂದು ಗಾಂಧಿ ಪ್ರತಿಮೆ ಮುಂದೆ ಸಂಸದ ಶ್ರೀನಿವಾಸ ಪೂಜಾರಿ ಧರಣಿ

ಬೆಂಗಳೂರು, ಜು.29 (ಕೆಎಂಶಿ)- ಬೊಮ್ಮಾಯಿ ಆಡಳಿತದಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ನಡೆದಿದೆ ಎನ್ನಲಾಗಿರುವ ಭ್ರಷ್ಟಾಚಾರ ಹಗರಣವನ್ನು ಸಿಬಿಐಗೆ ವಹಿಸಿ, ಇಲ್ಲವೆ ನನ್ನ ಮೇಲಿನ ಆರೋಪ ಹಿಂಪಡೆಯಿರಿ ಎಂದು ಸಂಸದ ಹಾಗೂ ಮಾಜಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಇಂದಿಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಗ್ರಹಿಸಿದ್ದಾರೆ.

ವಿಧಾನಮಂಡಲದಲ್ಲೇ ತಮ್ಮ ವಿರುದ್ಧ ಮುಖ್ಯಮಂತ್ರಿಯವರು ಮಾಡಿರುವ ಆರೋಪದಿಂದ ನೊಂದ ಪೂಜಾರಿ, ವಿಧಾನಪರಿಷತ್ತಿನ ಕೆಲವು ಸದಸ್ಯರ ಜೊತೆಗೂಡಿ ವಿಕಾಸಸೌಧದ ಗಾಂಧೀ ಪ್ರತಿಮೆ ಬಳಿ ಸಾಂಕೇತಿಕ ಧರಣಿ ನಡೆಸಿ, ವಿನೂತನ ಪ್ರತಿಭಟನೆ ನಡೆಸಿದರು. ಸೈದ್ಧಾಂತಿಕ ನೆಲಗಟ್ಟಿನಲ್ಲಿ ಎದುರಿಸಿ, ವೈಯುಕ್ತಿಕ ಸುಳ್ಳು ಆರೋಪ ನಿಲ್ಲಿಸಿ, ನಾನು ಸಚಿವನಾಗಿದ್ದ ಸಂದರ್ಭದಲ್ಲಿ ಹಗರಣಗಳು ನಡೆದಿದೆ ಎನ್ನುವುದಾದರೆ, ನಾನು ಶಿಕ್ಷೆಗೆ ಸಿದ್ದನಿದ್ದೇನೆ. ನಿಮ್ಮ ಮೇಲೆ ಬಂದಿರುವ ಆರೋಪವನ್ನು ಮರೆಮಾಚಲು ಇಲ್ಲ-ಸಲ್ಲದವರ ಮೇಲೆ ಗೂಬೆ ಕೂರಿಸುವ ಕೆಲಸ ಬೇಡ. ಹಗರಣ ನಡೆದಿದ್ದರೆ, ತಕ್ಷಣವೇ ಪ್ರಕರಣವನ್ನು ಸಿಬಿಐಗೆ ವಹಿಸಿ, ಇಲ್ಲದಿದ್ದರೆ, ನಿಮ್ಮ ಮಾತನ್ನು ಹಿಂದಕ್ಕೆ ಪಡೆಯಿರಿ ಎಂದು ಮುಖ್ಯಮಂತ್ರಿ ಕೋಟಾ ಶ್ರೀನಿವಾಸ ಪೂಜಾರಿ ಒತ್ತಾಯಿಸಿದರು.




ವಿಕಾಸಸೌಧದ ಗಾಂಧೀ ಪ್ರತಿಮೆ ಬಳಿ ವಿಧಾನಪರಿಷತ್ತಿನ ಕೆಲ ಸದಸ್ಯರ ಜೊತೆ ಸಂಸದ ಶ್ರೀನಿವಾಸ ಪೂಜಾರಿ ಸಾಂಕೇತಿಕ ಧರಣಿ ನಡೆಸಿದರು.

ಸಿಎಂ ಸಿದ್ದರಾಮಯ್ಯಗೆ ಸ್ವಾಗತ...



ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸಲು ತೆರಳುವ ಮಾರ್ಗ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಜಯಪುರ ಗ್ರಾಮದಲ್ಲಿ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರು, ಹೂಗುಚ್ಛ ನೀಡಿ ಸ್ವಾಗತಿಸಿದರು. ಜಯಪುರ ಡಿ.ಮಹದೇವಸ್ವಾಮಿ, ಜೈಲಾಬುದ್ದಿನ್, ಕೆಂಪಯ್ಯ, ದಾರಿಪುರ ಗುರು, ಶ್ರೀಕಂಠ ಮಾವಿನಹಳ್ಳಿ, ರಾಮೇಗೌಡ, ಗುಮ್ಮಚನಹಳ್ಳಿ ಚೌಡನಾಯಕ, ಸೋಲಿಗರ ಕಾಲೋನಿ ನಾಗರಾಜು ಹಾಜರಿದ್ದರು.

ಯುವ ಪೀಳಿಗೆ ನಮ್ಮ ಶಾಸ್ತ್ರ, ಸಂಪ್ರದಾಯ ಪಾಲಿಸಿದರೆ ಮಾತ್ರ ಪರಂಪರೆ, ಧರ್ಮದ ಮೌಲ್ಯಗಳು ಉಳಿಯಲಿದೆ



ಲೇಖಕಿ ಸುಜಯ ಸುರೇಶ್ ವಿರಚಿತ 'ಶುಭ ಮಹೂರ್ತ' ಪುಸ್ತಕವನ್ನು ಪ್ರೊ.ಹೆಚ್.ನಿವೇದಿತಾ ಬಿಡುಗಡೆಗೊಳಿಸಿದರು.

ಮೈಸೂರು, ಜು.29(ಎಸ್‌ಪಿಎನ್)- ಭಾರತದ ಯುವ ಪೀಳಿಗೆ ನಮ್ಮ ಶಾಸ್ತ್ರ, ಸಂಪ್ರದಾಯಗಳನ್ನು ಪಾಲಿಸಿದರೆ ಮಾತ್ರ ಭಾರತೀಯ ಪರಂಪರೆ ಮತ್ತು ಹಿಂದೂ ಧರ್ಮದ ಸಾಂಸ್ಕೃತಿಕ ಮೌಲ್ಯ ಜಗತ್ತಿನಲ್ಲೇ ಉನ್ನತ ಸ್ಥಾನ ಪಡೆಯಲಿದೆ ಎಂದು ಯುವರಾಜ ಕಾಲೇಜಿನ ಪ್ರಾಧ್ಯಾಪಕಿ ಎಚ್.ನಿವೇದಿತಾ ಅಭಿಪ್ರಾಯಪಟ್ಟರು.

ಮೈಸೂರಿನ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಕದಂಬ ಕಲಾಪೀಠ ಹಾಗೂ ಉದಯಗಿರಿ ಕನ್ನಡ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಲೇಖಕಿ ಸುಜಯ ಸುರೇಶ್ ವಿರಚಿತ 'ಶುಭ ಮಹೂರ್ತ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡು ಪುಸ್ತಕ ಕುರಿತು ಮಾತನಾಡಿದರು.

ಇತ್ತೀಚೆಗೆ ಯುವಕರು ನಮ್ಮ ಶಾಸ್ತ್ರ ಸಂಪ್ರದಾಯಗಳನ್ನು ಮರೆಯುತ್ತಿರುವ ಈ ಸಂದರ್ಭದಲ್ಲಿ ಲೇಖಕಿ ಸುಜಯ ಸುರೇಶ್ ರಚಿತ 'ಶುಭಮಹೂರ್ತ' ಹಿಂದೂ ಧರ್ಮದ ಉಳಿವಿಗೆ ಕೈಪಿಡಿಯಾಗಲಿದೆ. ಈ ಪುಸ್ತಕದಲ್ಲಿ ಹಿಂದೂ ಧರ್ಮದಲ್ಲಿನ ಮದುವೆ ಶಾಸ್ತ್ರ, ಉಡುಗೆ-ತೊಡುಗೆ ಸೇರಿದಂತೆ ಎಲ್ಲಾ ಮಾಹಿತಿಗಳು ಈ ಪುಸ್ತಕದಲ್ಲಿ ಓದುಗರಿಗೆ ಲಭ್ಯವಿದೆ ಎಂದರು.

ಈ ಪುಸ್ತಕದಲ್ಲಿ ಮಂತ್ರ ಮಾಂಗಲ್ಯ ಕುರಿತಾಗಿಯೂ ಬೆಳಕು ಚೆಲ್ಲಿದ್ದಾರಲ್ಲದೆ, ಶಾಸ್ತ್ರ-ಸಂಪ್ರದಾಯಗಳನ್ನು ನಾವು ಯಾಕೆ ಪಾಲನೆ ಮಾಡಬೇಕು ಎಂಬುದನ್ನು ಓದುಗರಿಗೆ ಉದಾಹರಣೆ ಸಹಿತ ಮನದಟ್ಟು ಮಾಡಿಸುವಲ್ಲಿ ಸುಜಯ ಸುರೇಶ್ ಯಶಸ್ವಿಯಾಗಿದ್ದಾರೆ. ಪ್ರಸ್ತುತ ಹಿಂದೂ ಧರ್ಮದ ಶಾಸ್ತ್ರ, ಸಂಪ್ರಾದಯಗಳ ಬಗ್ಗೆ ಅವಹೇಳನ ಮಾಡುವವರಿಗೆ ಕೃತಿ ಉತ್ತರವಾಗಲಿದೆ ಎಂದು ತಿಳಿಸಿದರು.

ಬರಹಗಾರ ಟಿ.ಸತೀಶ್ ಜವರೇಗೌಡ ಮಾತನಾಡಿ, ಇಂದಿನ ದಿನಮಾನಗಳಲ್ಲಿ ವಿದ್ಯಾರ್ಥಿಗಳು ಮೊಬೈಲ್ ಮಾಯೆಗೆ ಬಿದ್ದು, ಓದುವ ಹವ್ಯಾಸ, ಬರವಣಿಗೆ ಕಲೆ ಕಡಿಮೆಯಾಗಿದೆ. ಇಂದು ಮೊಬೈಲ್‌ಗಳನ್ನು ಅಗತ್ಯಕ್ಕಿಂತ ಹೆಚ್ಚಾಗಿ ಬಳಕೆ ಮಾಡಲಾಗುತ್ತಿದೆ ಎಂದರು.

ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ ಮಾತನಾಡಿ, 'ಶುಭ ಮುಹೂರ್ತ' ಸಂಸ್ಕಾರ-ಸಂಸ್ಕೃತಿ ಅಧ್ಯಯನ ಕೃತಿಯಾಗಿದೆ. ಲೇಖಕರು ಆಸಕ್ತಿಯಿಂದ ರಚಿಸಿದ್ದಾರೆ. ಕೃತಿಯಲ್ಲಿ ಎರಡು ವಿಭಾಗವಿದೆ. ಇಲ್ಲಿ ಎಲ್ಲವೂ ಇದೆ. ಯಾವುದು ಅತಿಯಲ್ಲ. ಒಂದು ಮಿತಿಯೊಳಗೆ ವ್ಯವಸ್ಥಿತವಾಗಿ ಪರಿಚಯಿಸಿದ್ದಾರೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕಸಾಪ ಜಿಲ್ಲಾ ಘಟಕ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಕದಂಬ ಕಲಾಪೀಠ ಅಧ್ಯಕ್ಷ ಬಿ.ವಿದ್ಯಾಸಾಗರ ಕದಂಬ, ಜಯಣ್ಣ ರಾಜಣ್ಣ ಪ್ರಕಾಶ್ ಇದ್ದರು.

ಪುಸ್ತಕ ಪ್ರದರ್ಶನ, ಮಾರಾಟ



ಮೈಸೂರು,ಜು.29-ಮೈಸೂರು ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಪುಸ್ತಕ ಮೇಳವನ್ನು ಆಯೋಜಿಸಲಾಗಿದೆ.

ಮೇಳದಲ್ಲಿ ಇಂಡಿಯನ್ ಮತ್ತು ಇಂಪೋರ್ಟೆಡ್ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟವನ್ನು ಏರ್ಪಡಿಸಲಾಗಿದೆ. ಪುಸ್ತಕಗಳನ್ನು ಕೆಜಿ ರೂಪದಲ್ಲಿ ಮಾರಾಟ ಮಾಡಲಾಗುತ್ತಿದ್ದು, ಫಿಕ್ಷನ್ ಬುಕ್ಸ್, ನಾನ್‌ಫಿಕ್ಷನ್ ಬುಕ್ಸ್, ಕ್ರಾಕರಿ ಬುಕ್ಸ್, ಹೆಲ್ತ್ ಬುಕ್ಸ್, ಇಂಜಿನಿಯರಿಂಗ್, ಮೆಡಿಕಲ್, ಮ್ಯಾನೇಜ್‌ಮೆಂಟ್, ಕಂಪ್ಯೂಟರ್ ಸೈನ್ಸ್, ಗ್ರಾಮರ್, ಮಕ್ಕಳ ಪುಸ್ತಕ, ಪ್ರಥಮ ದ್ವಿತೀಯ ಸಿಬಿಎಸ್‌ಸಿ ಬುಕ್ಸ್, ತೋಟಗಾರಿಕೆ, ಮ್ಯಾಗಜಿನ್, ಡಿಕ್ಷನರಿ, ನರ್ಸಿಂಗ್, ಸೈನ್ಸ್, ನಾವೆಲ್ಸ್, ಇಂಟರಿಯರ್, ಆರ್ಟ್ಸ್ & ಕ್ರಾಫ್ಟ್ಸ್, ಇಂಗ್ಲಿಷ್, ನ್ಯಾಷನಲ್ ಜಿಯೋಗ್ರಫಿಕ್, ಕಾಂಪಿಟೇಟಿವ್ ಎಕ್ಸಾಂ, ಎಲ್‌ಕೆಜಿಯಿಂದ 10ನೇ ತರಗತಿಯವರಿಗೆ ಸ್ಕೂಲ್ ಬುಕ್ಸ್ ಇತ್ಯಾದಿ ದೊರೆಯುತ್ತದೆ. ಮಾರಾಟದ ಪ್ರದರ್ಶನವು ಕೆಲವೇ ದಿನಗಳು ಮಾತ್ರ. ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ ತೆರೆದಿರುತ್ತದೆ.

ಚಾಮುಂಡೇಶ್ವರಿ ಪೂಜಾ ಮಹೋತ್ಸವ...



ಮೈಸೂರಿನ ಜೇನುಗೂಡು ಸೇವಾ ಸಮಿತಿ ವತಿಯಿಂದ ಆಯೋಜಿಸಿದ್ದ ಚಾಮುಂಡೇಶ್ವರಿ ಪೂಜಾ ಮಹೋತ್ಸವದಲ್ಲಿ ಮೈಸೂರು ಮಹಾನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಹಾಗೂ ಸೆಂದಿಲ್‌ಕುಮಾರ್ ಟೆಕ್ಸ್‌ಟೈಲ್ಸ್‌ನ ರಾಧಾ, ಜೇನುಗೂಡು ಸೇವಾ ಸಮಿತಿಯ ಮಾಲಾ ಮಹೇಂದ್ರ, ನಗರ ಮಹಿಳಾ ಪ್ರಧಾನ ಕಾರ್ಯದರ್ಶಿ ಭವ್ಯ ರಾಜ್, ನಿತಿನ್ ಗೌಡ, ನವೀಶ್ ಗೌಡ, ಹೃತ್ವಿಕ್ ಗೌಡ, ಯಾತ್ರೇಶ್ ಗೌಡ, ರತನ್ ಗೌಡ, ರಾಕೇಶ್ ಗೌಡ, ನಾಗೇಶ್ ಗೌಡ, ರಾಕೇಶ್ ಗೌಡ ಭಾಗವಹಿಸಿದ್ದರು.

19ನೇ ಶತಮಾನದಲ್ಲಿ ಬ್ರಿಟಿಷ್ ಸಾಹಿತ್ಯ ಅನ್ನುವ ಬದಲು ಷೇಕ್ಸ್‌ಪಿಯರ್ ಸಾಹಿತ್ಯ ಎನ್ನುತ್ತಿದ್ದರು

'ಎರಡು ಸಂಸ್ಕೃತಿಯಲ್ಲಿ ಷೇಕ್ಸ್‌ಪಿಯರ್'ನಲ್ಲಿ ಪ್ರೊ.ಸಿ.ನಾಗಣ್ಣ ಅಭಿಪ್ರಾಯ





ಮೈಸೂರಿನ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಎರಡು ಸಂಸ್ಕೃತಿಯಲ್ಲಿ ಷೇಕ್ಸ್‌ಪಿಯರ್' ಕುರಿತು ಪ್ರೊ.ಸಿ.ನಾಗಣ್ಣ ಉಪನ್ಯಾಸ ನೀಡಿದರು. ಬಲಚಿತ್ರದಲ್ಲಿ ಸಭಿಕರನ್ನು ಕಾಣಬಹುದು.

ಮೈಸೂರು, ಜು.29(ಜಿಎ)-ಷೇಕ್ಸ್‌ಪಿಯರ್ ನಾಟಕ, ಸಾಹಿತ್ಯವನ್ನು ಅನುವಾದ ಮಾಡಲು ಭಾರತದ ಸಂಸ್ಕೃತಿ ಮತ್ತು ಸನ್ನಿವೇಶಕ್ಕೆ ಕಷ್ಟಕರವಾಗುತ್ತದೆ ಎಂದು ಅವರ ನಾಟಕ, ಸಾಹಿತ್ಯ ಅಂಶಗಳನ್ನು ಇಲ್ಲಿಗೆ ಅನುಗುಣವಾಗಿ ಅಳವಡಿಸಿಕೊಳ್ಳಲು ಸಾಹಿತಿಗಳು ಆರಂಭಿಸಿದ ಪರಿಣಾಮ ಎರಡು ಸಂಸ್ಕೃತಿಯಲ್ಲಿ ಷೇಕ್ಸ್‌ಪಿಯರ್ ಕಾಣಿಸಿಕೊಂಡಿದ್ದಾರೆ ಎಂದು ಪ್ರೊ.ಸಿ.ನಾಗಣ್ಣ ತಿಳಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಎರಡು ಸಂಸ್ಕೃತಿಯಲ್ಲಿ ಷೇಕ್ಸ್‌ಪಿಯರ್' ಕುರಿತು ಮಾತನಾಡಿದ ಅವರು, 19ನೇ ಶತಮಾನದಲ್ಲಿ ಬ್ರಿಟಿಷ್ ಸಾಹಿತ್ಯ ಅನ್ನುವ ಬದಲು ಷೇಕ್ಸ್‌ಪಿಯರ್ ಸಾಹಿತ್ಯ ಎಂದು ಕರೆಯುತ್ತಿದ್ದರು. ಅದರಲ್ಲೂ ಷೇಕ್ಸ್‌ಪಿಯರ್‌ನ ಹಿಸ್ಟರಿ ನಾಟಕಗಳು ಜಗತ್ತಿನಾದ್ಯಂತ ಸಾಕಷ್ಟು ಪ್ರಭಾವ ಬೀರಿತ್ತು. ಅಲ್ಲಿ ಅವರು ಬ್ರಿಟಿಷ್ ರಾಜರ ಬಗ್ಗೆ ಬರೆದಿದ್ದರೆ, ಇಲ್ಲಿನ ಸಾಹಿತಿಗಳು ಇಲ್ಲಿನ ರಾಜರ ಬಗ್ಗೆ ಬರೆದಿದ್ದರು ಎಂದರು.

ಡೆಪ್ಯೂಟಿ ಚನ್ನಬಸಪ್ಪ ಷೇಕ್ಸ್‌ಪಿಯರನನ್ನು ಕನ್ನಡಕ್ಕೆ ಪರಿಚಯಿಸಿದ ಪ್ರಥಮ ಲೇಖಕರಾಗಿದ್ದಾರೆ. ನಂತರ ಎಂ.ಎಲ್. ಶ್ರೀಕಂಠೇಶ್ವರಗೌಡ, ಡಿವಿಜಿ, ಮಾಸ್ತಿ ವೆಂಕಟೇಶ ಐಯ್ಯಂಗಾರ್, ಟಿ.ಪಿ. ಕೈಲಾಸಂ, ಸಂಸ, ಕುವೆಂಪು, ದ.ರಾ.ಬೇಂದ್ರೆ ಶ್ರೀರಂಗ, ಗೋಪಾಲ್ ಕೃಷ್ಣ ಅಡಿಗ ಸೇರಿದಂತೆ ಕನ್ನಡ ಮಹಾನ್ ಸಾಹಿತಿಗಳು ಷೇಕ್ಸ್‌ಪಿಯರ್ ಸಾಹಿತ್ಯ ಮತ್ತು ನಾಟಕವನ್ನು ತಮ್ಮ ಸಾಹಿತ್ಯ ಮತ್ತು ನಾಟಕಗಳಲ್ಲಿ ಭಾರತದ ಸಂಸ್ಕೃತಿಗೆ ತಕ್ಕಂತೆ ಬದಲಾವಣೆ ಮಾಡಿ ಅಳವಡಿಸಿಕೊಳ್ಳಲು ಆರಂಭಿಸಿ, ನಂತರ ದಿನಗಳಲ್ಲಿ ಅನುವಾದವೂ ಮಾಡಲು ಆರಂಭಿಸಿದರು ಎಂದರು.

ಕುವೆಂಪು ಅವರು ಷೇಕ್ಸ್‌ಪಿಯರ್ ಅವರ ಹ್ಯಾಮ್ಲೆಟ್ ನಾಟಕವನ್ನು ರಕ್ತಾಕ್ಷ ಮತ್ತು ಟೆಂಪೆಸ್ಟ್ ನಾಟಕವನ್ನು ಬಿರುಗಾಳಿ ಎಂದು ಬದಲಾಯಿಸಿಕೊಂಡರು. ಇದೇ ರೀತಿ ಬೆಂಗಾಲಿ, ಮರಾಠಿ, ಗುಜರಾತಿ, ಪಂಜಾಬಿಯಲ್ಲಿಯೂ ಈ ರೀತಿ ಅಳವಡಿಸಿಕೊಂಡಿದ್ದಾರೆ. ಒಮ್ಮೆ ನಟ ಅಮಿತಾಬ್ ಬಚ್ಚನ್ ತಂದೆ ಹರಿವಂಶರಾಯ್ ಬಚ್ಚನ್ ಹಿಂದಿಯಲ್ಲಿ ಷೇಕ್ಸ್‌ಪಿಯರ್ ನಾಟಕ ಮಾಡಲು ನಮ್ಮ ಭಾಷೆ ಅಷ್ಟು ಬೆಳೆದಿಲ್ಲ ಎಂದು ಹೇಳಿದರು ಎಂದು ತಿಳಿಸಿದರು.

ಹೀಗೆ ನಮ್ಮ ನಾಡಿನ ಎಂ.ಎಲ್. ಶ್ರೀಕಂಠೇಶ್ವರಗೌಡ, ಡಿವಿಜಿ, ಮಾಸ್ತಿ ವೆಂಕಟೇಶ ಐಯ್ಯಂಗಾರ್, ಟಿ.ಪಿ.ಕೈಲಾಸಂ, ಸಂಸ, ಕುವೆಂಪು, ದ.ರಾ.ಬೇಂದ್ರೆ, ಶ್ರೀರಂಗ, ಗೋಪಾಲ್ ಕೃಷ್ಣ ಅಡಿಗ ಷೇಕ್ಸ್‌ಪಿಯರ್ ನಾಟಕ, ಸಾಹಿತ್ಯವನ್ನು ಅಳವಡಿಸಿಕೊಳ್ಳುವ ಮತ್ತು ಅನುವಾದ ಮಾಡುವ ಮೂಲಕ ಬೇರೆ ಭಾಷೆಯವರ ಮುಂದೆ ತಲೆ ಎತ್ತುವಂತೆ ಮಾಡಿದ್ದಾರೆ. ಪ್ರಸ್ತುತ ಸಾಹಿತಿಗಳು ಷೇಕ್ಸ್‌ಪಿಯರ್ ಜೊತೆಗೆ ಗುದ್ದಾಡುವ ಕೆಲಸವನ್ನು ಮಾಡಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಲಿಟರರಿ ಅಸೋಸಿಯೇಷನ್ ಕಾರ್ಯಕಾರಿಣಿ ಸದಸ್ಯ ಎ.ಕೆ.ಮೊನ್ನಪ್ಪ ಪ್ರೊ.ಸಿ.ನಾಗಣ್ಣ ಅವರನ್ನು ಪರಿಚಯಿಸಿದರು. ಬಳಿಕ ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಬೆಳ್ಳಿಯಪ್ಪ ಸನ್ಮಾನಿಸಿದರು.

ಬಾಡಗ ಬಾಣಂಗಾಲ ಹುಂಡಿ ಗ್ರಾಮದ

ಕಾಫಿ ತೋಟದಲ್ಲಿ ಕಾಡಾನೆ ಸಾವು

ಸಿದ್ದಾಪುರ, ಜು.29–ಆಹಾರ ಅರಸಿ ಕಾಡಿನಿಂದ ನಾಡಿಗೆ ಬಂದ ಕಾಡಾನೆ ಕಾಫಿ ತೋಟವೊಂದರಲ್ಲಿ ಆಕಸ್ಮಿಕವಾಗಿ ಮೃತಪಟ್ಟಿರುವ ಘಟನೆ ಬಾಡಗಬಾಣಂಗಾಲ ಹುಂಡಿ ಗ್ರಾಮದಲ್ಲಿ ಸೋಮವಾರ ನಡೆದಿದೆ.

ಸುಮಾರು 42 ವರ್ಷದ ಮಖನ ಆನೆ ಸಹಜವಾಗಿ ಮೃತಪಟ್ಟಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಬೆಳಗ್ಗೆ ಕಾಫಿ ತೋಟಕ್ಕೆ ತೆರಳಿದ ಕಾರ್ಮಿಕರಿಗೆ ಕಾಡಾನೆ ಮೃತಪಟ್ಟಿರುವುದು ಪತ್ತೆಯಾಗಿದೆ. ನಂತರ ವಿರಾಜಪೇಟೆ ಡಿಎಫ್‌ಓ ಜಗನ್ನಾಥ್, ಎಸಿಎಫ್ ನೆಹರು, ಗೋಪಾಲ್ ಆರ್‌ಎಫ್‌ಓ ಗಂಗಾಧರ್ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಬೆಳಗಾರರು ಕಾಫಿ ತೋಟದಲ್ಲಿ ಅಂತ್ಯಕ್ರಿಯೆಗೆ ವಿರೋಧ ವ್ಯಕ್ತಪಡಿಸಿದ್ದರಿಂದ ಮೃತ ಆನೆಯನ್ನು ಲಾರಿಯಲ್ಲಿ ಸಮೀಪದ ಚೆನ್ನಂಗಿ ಅರಣ್ಯ ಪ್ರದೇಶಕ್ಕೆ ಸಾಗಿಸಿ, ವನ್ಯಜೀವಿ ವೈದ್ಯ ಡಾ.ಚೆಟ್ಟಿಯಪ್ಪ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಅಂತ್ಯಸಂಸ್ಕಾರ ನಡೆಸಲಾಯಿತು.

ಇದೇ ವೇಳೆ ಮಾಲ್ದಾರೆ ಗ್ರಾಪಂ ಮಾಜಿ ಅಧ್ಯಕ್ಷ ಸಮೀರ್ ಮಾತನಾಡಿ, ಹುಂಡಿ, ಬಾಡಗ ಬಾಣಂಗಾಲ, ಮಟ್ಟ, ಬಜೆಗೊಳ್ಳಿ, ಘಟ್ಟದಳ, ಮಾಲ್ದಾರೆ ಸುತ್ತಮುತ್ತ ನಿರಂತರವಾಗಿ ಕಾಡಾನೆಗಳ ಹಾವಳಿ ಮಿತಿಮೀರಿದೆ. ಇದರಿಂದ ಕಾರ್ಮಿಕರು, ಬೆಳಗಾರರು, ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಭಯದ ವಾತಾವರಣ ನಿರ್ಮಾಣವಾಗಿದೆ. ಹಾಡಗಲೇ ಕಾಡಾನೆಗಳು ಕಾಣಿಸಿಕೊಳ್ಳುತ್ತಿರುವುದರಿಂದ ವಾಹನ ಸವಾರರಿಗೂ ಆತಂಕ ಉಂಟಾಗಿದೆ ಎಂದು ತಿಳಿಸಿದರು.



ಬಾಡಗಬಾಣಂಗಾಲ ಹುಂಡಿ ಗ್ರಾಮದ ಕಾಫಿ ತೋಟದಲ್ಲಿ ಕಾಡಾನೆ ಮೃತಪಟ್ಟಿರುವುದು.

> ಕಾಫಿ ತೋಟದಲ್ಲಿ ಮೃತಪಟ್ಟ ಕಾಡಾನೆ ಮೇಲ್ನೋಟಕ್ಕೆ ಸಹಜ ಸಾವಾಗಿದ್ದು, ಮರಣೋತ್ತರ ಪರೀಕ್ಷೆ ವರದಿ ಬಂದ ನಂತರ ನಿಖರವಾಗಿ ತಿಳಿಯಲಿದೆ. ಕಾಡಾನೆ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ಸಮಸ್ಯೆ ಬಗೆಹರಿಯಲಿದೆ. –ಜಗನ್ನಾಥ್, ಡಿಎಫ್‌ಓ

ಅರಣ್ಯ ಸಿಬ್ಬಂದಿ ಆನೆಗಳನ್ನು ಕಾಡಿಗಟ್ಟಿದ್ದರೂ ಮತ್ತೆ ವಾಪಸ್ಸಾಗಿ ಕಾಫಿ ತೋಟಗಳಲ್ಲಿ ಠಿಕ್ಕಾಣಿ ಹೂಡಿವೆ. ಬಹುತೇಕ ಆನೆಗಳು ಕಾಡನ್ನೇ ಕಾಣದೆ ಕಾಫಿ ತೋಟಗಳನ್ನೇ ವಾಸಸ್ಥಾನವಾಗಿ ಮಾಡಿಕೊಂಡು, ಕಾರ್ಮಿಕರು, ಬೆಳೆಗಾರರ ಮೇಲೆ ದಾಳಿ ನಡೆಸುತ್ತಿವೆ. ಸರ್ಕಾರ ಶಾಶ್ವತ ಯೋಜನೆ ರೂಪಿಸಿ, ಕಾಡುಪ್ರಾಣಿಗಳ ಹಾವಳಿ ತಡೆಗಟ್ಟಲು ಮುಂದಾಗಬೇಕೆಂದು ಒತ್ತಾಯಿಸಿದರು.

ಮಾಲ್ದಾರೆ ಗ್ರಾಪಂ ಅಧ್ಯಕ್ಷೆ ಮಾಲತಿ ಹಾಗೂ ಸದಸ್ಯರು, ಬೆಳಗಾರರು ಹಾಜರಿದ್ದರು.

5 ದಿನಗಳ ನಂತರ ಸರ್ಕಾರಿ ನೌಕರನ ಶವ ಪತ್ತೆ

ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ ಅರುಣ್ ಕುಮಾರ್

ಕುಶಾಲನಗರದ, ಜು.29–ಇಲ್ಲಿನ ಕೊಪ್ಪ ಸೇತುವೆ ಮೇಲಿನಿಂದ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದ ಸರ್ಕಾರಿ ನೌಕರನ ಶವ ಸೋಮವಾರ ಪತ್ತೆಯಾಗಿದೆ.



ಅರುಣ್ ಕುಮಾರ್

ಮಡಿಕೇರಿ ಉಪವಿಭಾಗಾಧಿಕಾರಿ ಕಚೇರಿಯ ಪ್ರಥಮ ದರ್ಜೆ ಸಹಾಯಕ ಅರುಣ್ ಕುಮಾರ್(52) ಆತ್ಮಹತ್ಯೆ ಮಾಡಿಕೊಂಡಿದ್ದು, 5 ದಿನಗಳ ಬಳಿಕ ಮೃತದೇಹ ಪತ್ತೆಯಾಗಿದೆ.

ಮೂಲತಃ ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಬಾಚಹಳ್ಳಿ ಗ್ರಾಮದ ಅರುಣ್ ಪಟ್ಟಣದ ಹೊಸ ಹೌಸಿಂಗ್ ಬೋರ್ಡ್‌ನಲ್ಲಿ ವಾಸವಾಗಿದ್ದರು. ಇವರು ಕಳೆದ 4 ವರ್ಷಗಳಿಂದ ಮಡಿಕೇರಿ ಎಸಿ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಆದರೆ, ಜು.24ರಂದು ಮಧ್ಯಾಹ್ನದವರೆಗೆ ಕರ್ತವ್ಯ ನಿರ್ವಹಿಸಿ ಬಳಿಕ ಕೊಪ್ಪ ಸೇತುವೆ ಬಳಿ ತೆರಳಿ ನದಿಗೆ ಧುಮುಕಿದ್ದರು.

ದುಬಾರೆ ರ್‍ಯಾಫ್ಟರ್‌ಗಳು, ಅಗ್ನಿಶಾಮಕ ದಳ, ಪೊಲೀಸ್ ಇಲಾಖೆ, ಎನ್‌ಡಿಆರ್‌ಎಫ್ ಸಹಿತ ಒಟ್ಟು 5 ತಂಡಗಳ 30 ಸಿಬ್ಬಂದಿ ಕೊಪ್ಪ ಸೇತುವೆಯಿಂದ ಕಣಿವೆ ರಾಮಲಿಂಗೇಶ್ವರ ದೇವಾಲಯ ಮುಂಭಾಗದವರೆಗೆ ಉಕ್ಕಿ ಹರಿಯುತ್ತಿದ್ದ ಕಾವೇರಿ ನದಿಯಲ್ಲಿ ನಿರಂತರ ಶೋಧ ನಡೆಸಿದರು. ಆದರೆ, ಸೋಮವಾರ ಕೊಪ್ಪ ಸೇತುವೆಯಿಂದ 6 ಕಿ.ಮೀ. ದೂರದ ಮುಳ್ಳುಸೋಗೆ ತಪೋವನದ ಕಾವೇರಿ ನದಿಯಲ್ಲಿ ಮೃತದೇಹ ಪತ್ತೆಯಾಗಿದೆ.

ಬಳಿಕ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಶವ ಹಸ್ತಾಂತರಿಸಲಾಯಿತು. ಮೃತರು ಪತ್ನಿ ಹಾಗೂ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಈ ಸಂದರ್ಭ ಡಿವೈಎಸ್‌ಪಿ ಆರ್.ವಿ.ಗಂಗಾಧರಪ್ಪ, ವೃತ್ತ ನಿರೀಕ್ಷಕ ರಾಜೇಶ್ ಕೊಟ್ಯಾನ್, ಕುಶಾಲನಗರ ಪೊಲೀಸ್ ಠಾಣಾಧಿಕಾರಿಗಳಾದ ಮೋಹನ್ ರಾಜ್, ಚಂದ್ರಶೇಖರ್, ದುಬಾರೆ ರ್‍ಯಾಫ್ಟ್ ಸಿಬ್ಬಂದಿ ನಿತನ್, ಲಿಖಿತ್ ಸೋಮಯ್ಯ, ಸತೀಶ್, ಗಿರಿ, ಇಕ್ಬಾಲ್ ಇದ್ದರು.

ಮಡಿಕೇರಿ–ಕುಟ್ಟ ಹೆದ್ದಾರಿ ಕುಸಿತ



ಶ್ರೀಮಂಗಲ ಹೋಬಳಿಯ ಮಂಚಳ್ಳಿ ಬಳಿ ಮಡಿಕೇರಿ–ಕುಟ್ಟ ಹೆದ್ದಾರಿ ಕುಸಿದಿರುವುದು.

ಮಡಿಕೇರಿ: ಕೆಲ ದಿನಗಳಿಂದ ಸುರಿದ ಭಾರೀ ಮಳೆಗೆ ಶ್ರೀಮಂಗಲ ಹೋಬಳಿಯ ಮಂಚಳ್ಳಿ ಬಳಿ ಮಡಿಕೇರಿ–ಕುಟ್ಟ ರಾಜ್ಯ ಹೆದ್ದಾರಿ ಕುಸಿತವಾಗಿದೆ.

ಕೊಡಗು ಜಿಲ್ಲೆಯಲ್ಲಿ ಮತ್ತಷ್ಟು ಮಳೆಯಾಗುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಈ ರಸ್ತೆಯಲ್ಲಿ ಮತ್ತೆ ಭೂ ಕುಸಿಯುವ ಸಾಧ್ಯತೆ ಇದೆ. ಆದ್ದರಿಂದ ಈ ರಸ್ತೆಯಲ್ಲಿ ಎಲ್ಲಾ ವಾಹನಗಳ ಸಂಚಾರವನ್ನು ಜು.29ರಿಂದ ಆ.27 ರವರೆಗೆ ನಿಷೇಧಿಸಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶ ಹೊರಡಿಸಿದ್ದಾರೆ. ಬದಲಿ ಮಾರ್ಗವಾಗಿ ಕುಟ್ಟ–ಕೇಂಬುಕೊಲ್ಲಿ–ಕಾನೂರು ಜಿಲ್ಲಾ ಮುಖ್ಯ ರಸ್ತೆ ಮೂಲಕ ಕುಟ್ಟ–ಪೊನ್ನಂಪೇಟೆ ಮಾರ್ಗವಾಗಿ ಸಂಚರಿಸಬೇಕು. ಲಿಂಕ್ ರಸ್ತೆಗಳಾಗಿ ಶ್ರೀಮಂಗಲ–ನಾಲ್ಕೇರಿ ಅಥವಾ ಕಾಕೂರು–ಹೇರ್ಮಾಡು–ಬೊಳ್ಳಾರಿ ಗೇಟ್ ರಸ್ತೆಗಳ ಮೂಲಕ ಸಂಚರಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಇಂದು ಶಾಲೆಗಳಿಗೆ ರಜೆ

ಮಡಿಕೇರಿ: ವಿರಾಜಪೇಟೆ, ಪೊನ್ನಂಪೇಟೆ, ಕುಶಾಲನಗರ ಮತ್ತು ಸೋಮವಾರಪೇಟೆ ತಾಲೂಕಿನಲ್ಲಿ ಹೆಚ್ಚಿನ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಜು.30ರಂದು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ರಜೆ ನೀಡಲಾಗಿದೆ ಎಂದು ಡಿಡಿಪಿಐ ರಂಗಧಾಮಪ್ಪ ತಿಳಿಸಿದ್ದಾರೆ.

ಹಾಕತ್ತೂರು ಬಳಿ ಕೋಳಿ ಅಂಗಡಿ ಕುಸಿತ

ಮಡಿಕೇರಿ, ಜು.29–ತಾಲೂಕಿನ ಹಾಕತ್ತೂರು ಬಳಿ ಸೋಮವಾರ ಮಳೆಯಿಂದ ಕೋಳಿ ಅಂಗಡಿ ಕುಸಿದಿದ್ದು, ಲಕ್ಷಾಂತರ ರೂ. ನಷ್ಟ ಸಂಭವಿಸಿದೆ.

ಮುಶೀರ್ ಅವರಿಗೆ ಸೇರಿದ ಕೋಳಿ ಅಂಗಡಿ 30 ಅಡಿ ಆಳಕ್ಕೆ ಕುಸಿದು ಬಿದ್ದಿದ್ದು, 70 ಸಾವಿರ ರೂ. ನಗದು ಸಹಿತ ಕೋಳಿಗಳು ಮಣ್ಣು ಪಾಲಾಗಿವೆ. ಅಂಗಡಿ ಮಾಲೀಕ ಮುಶೀರ್ ಅವರ ಬಾವ ಸೋಮವಾರ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದು, ಈ ವೇಳೆ ಕಟ್ಟಡ ಕುಸಿಯುತ್ತಿರುವುದು ತಿಳಿದು ತಕ್ಷಣ ಹೊರಗೆ ಓಡಿ ಹೋಗಿದ್ದಾರೆ.

ಕಂದಾಯ ಇಲಾಖೆ ಮತ್ತು ಗ್ರಾಮ ಪಂಚಾಯಿತಿ ಸಿಬ್ಬಂದಿ ಭೇಟಿ ನೀಡಿ, ಸ್ಥಳ ಪರಿಶೀಲಿಸಿದರು. ನಂತರ ಸ್ಥಳೀಯರು ಕಟ್ಟಡದ ಅವಶೇಷಗಳಡಿ ಸಿಲುಕಿದ್ದ ನಗದು ಮತ್ತು ಇತರ ವಸ್ತುಗಳಿಗಾಗಿ ಶೋಧ ನಡೆಸಿದರು.



ಹಾಕತ್ತೂರು ಬಳಿ ಸೋಮವಾರ ಮಳೆಯಿಂದ ಕೋಳಿ ಅಂಗಡಿ ಕುಸಿದಿರುವುದು.

ವಿದ್ಯುತ್ ತಂತಿ ತುಳಿದು 6 ಹಸುಗಳು ಸಾವು

ಗೋಣಿಕೊಪ್ಪ, ಜು.29–ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು 6 ಹಸುಗಳು ಮೃತಪಟ್ಟಿರುವ ಘಟನೆ ಪೊನ್ನಂಪೇಟೆ ತಾಲೂಕಿನ ತೆರಾಲು ಗ್ರಾಮದಲ್ಲಿ ಸೋಮವಾರ ಸಂಜೆ ನಡೆದಿದೆ.

ಗ್ರಾಮದ ಕೃಷಿಕ ಬೊಜ್ಜಂಗಡ ನಟರಾಜ್ (ನಂದ) ಅವರ ಹಸುಗಳು ಮೃತಪಟ್ಟಿದ್ದು, ಗದ್ದೆಯಲ್ಲಿ ಮೇಯಲು ಬಿಟ್ಟಿದ್ದ ಹಸುಗಳು ಸಂಜೆ ಕೊಟ್ಟಿಗೆಗೆ ಬರುತ್ತಿದ್ದ ವೇಳೆ ರಸ್ತೆಯಲ್ಲಿ ತುಂಡಾಗಿ ಬಿದ್ದಿದ್ದ 11 ಕೆವಿ ವಿದ್ಯುತ್ ತಂತಿ ಸ್ಪರ್ಶಿಸಿ ಸ್ಥಳದಲ್ಲೇ ಸಾವನ್ನಪ್ಪಿವೆ.

ತೆರಾಲು ಗ್ರಾಮದಲ್ಲಿ ಭಾರೀ ಗಾಳಿ ಸಹಿತ ಮಳೆ ಸುರಿಯುತ್ತಿದ್ದು, 11 ಕೆವಿ ವಿದ್ಯುತ್ ತಂತಿ ತುಂಡಾಗಿ ರಸ್ತೆಗೆ ಬಿದ್ದಿದ್ದು, ಸಂಜೆ ಹಸುಗಳು ಗದ್ದೆಯಿಂದ ಕೊಟ್ಟಿಗೆಗೆ ಬರುತ್ತಿದ್ದ ಸಂದರ್ಭ ಈ ದುರ್ಘಟನೆ ನಡೆದಿದೆ.

ಹೈನುಗಾರಿಕೆಯೊಂದಿಗೆ ಬದುಕು ಕಟ್ಟಿಕೊಂಡಿದ್ದ ಬೊಜ್ಜಂಗಡ ನಟರಾಜ್ ಕುಟುಂಬ ಇದೀಗ ಹಸುಗಳ ಸಾವಿನಿಂದ ಕಂಗಾಲಾಗಿದೆ. ಸ್ಥಳಕ್ಕೆ ಸೆಸ್ಕ್ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ, ಪರಿಶೀಲನೆ ನಡೆಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ. ನಂತರ 6 ಹಸುಗಳನ್ನು ಅಂತ್ಯಕ್ರಿಯೆ ನಡೆಸಲಾಯಿತು.



ತೆರಾಲು ಗ್ರಾಮದಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ಹಸುಗಳು ಮೃತಪಟ್ಟಿರುವುದು.

ಕೊಡವೋಲೆ ಸಂಚಿಕೆಗೆ ಬರಹಗಳ ಆಹ್ವಾನ

ಮಡಿಕೇರಿ, ಜು.29–ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ತ್ರೈಮಾಸಿಕ ಕೊಡವೋಲೆ ಸಂಚಿಕೆಗೆ ಬರಹಗಳನ್ನು ಆಹ್ವಾನಿಸಲಾಗಿದೆ.

ಸಾಹಿತಿ ಹಾಗೂ ಕಲಾವಿದರಿಗೆ ಅವಕಾಶ ನೀಡುವ ಸಲುವಾಗಿ ಸಂಚಿಕೆಗೆ ಪ್ರಕಟಿಸಲಾಗುತ್ತಿದ್ದು, ಎಲ್ಲಿಯೂ ಪ್ರಕಟವಾಗದ ತಮ್ಮ ಸ್ವಂತ ರಚನೆಯ ಕೊಡವ ಭಾಷೆಯಲ್ಲಿ ರಚಿಸಿದ ಕಥೆ, ಕವನ, ಚುಟುಕ, ವೈಚಾರಿಕ ಲೇಖನ, ನಗೆಹನಿ, ಪ್ರಬಂಧ, ಸಂಶೋಧನಾ ಲೇಖನಗಳನ್ನು ಇ–ಮೇಲ್: kodava.acadamy@gmail.com ಅಥವಾ ನುಡಿ ಫಾಂಟ್‌ನಲ್ಲಿ ಟೈಪ್ ಮಾಡಿ, ಇಲ್ಲವೆ ಅಚ್ಚುಕಟ್ಟಾಗಿ ಬರೆದು ಆ.1ರೊಳಗೆ ಅಧ್ಯಕ್ಷರು, ರಿಜಿಸ್ಟ್ರಾರ್, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ವ್ಯಾನ್ಸ್ ಕಾಂಪೌಂಡ್, ಮಡಿಕೇರಿ–571201 ಈ ವಿಳಾಸಕ್ಕೆ ತಲುಪಿಸಬೇಕು.

ಬರಹಗಾರರು ತಮ್ಮ ಹೆಸರು ಮತ್ತು ಪೂರ್ಣ ವಿಳಾಸದೊಂದಿಗೆ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಹಾಗೂ ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಪ್ರತಿಯನ್ನು ನೀಡಬೇಕು. ಮಾಹಿತಿಗೆ ದೂ.ಸಂ: 08272–229074 ಅನ್ನು ಸಂಪರ್ಕಿಸಬಹುದು ಎಂದು ಅಕಾಡೆಮಿ ಅಧ್ಯಕ್ಷ ಅಜ್ಜಿನಿಕಂಡ ಮಹೇಶ್ ನಾಚಯ್ಯ ಹಾಗೂ ರಿಜಿಸ್ಟ್ರಾರ್ ಅಜ್ಜಿಕುಟ್ಟಿರ ಗಿರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಶಾಲನಗರದಲ್ಲಿ ವಿದ್ಯುತ್ ಕಡಿತ ಖಂಡಿಸಿ ಪ್ರತಿಭಟನೆ

ಕುಶಾಲನಗರ, ಜು.29–ನಿರಂತರ ವಿದ್ಯುತ್ ಕಡಿತ ಖಂಡಿಸಿ ಗೆಳೆಯರ ಬಳಗ ಹಾಗೂ ಸಾರ್ವಜನಿಕರು ಪಟ್ಟಣದ ಸೆಸ್ಕ್ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಪಟ್ಟಣದ ಬಿ.ಎಂ.ರಸ್ತೆ ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ಸಮಸ್ಯೆಯಾಗುತ್ತಿದೆ. ನಿರಂತರ ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ಅಂಗಡಿಗಳ ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಗೆ ತೀವ್ರ ತೊಂದರೆಯಾಗುತ್ತಿದ್ದು, ಈ ಸಂಬಂಧ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದರೂ ಸ್ಪಂದಿಸುತ್ತಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಸೆಸ್ಕ್ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮಂಜುನಾಥ್ ಮಾತನಾಡಿ, ಸಿಬ್ಬಂದಿ ನಿರ್ಲಕ್ಷ್ಯದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಮುಂದಿನ ದಿನಗಳಲ್ಲಿ ಯಾವುದೇ ವಿದ್ಯುತ್ ಸಮಸ್ಯೆಯಾಗದಂತೆ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಪುರಸಭೆ ಸದಸ್ಯ ವಿ.ಎಸ್. ಆನಂದ್ ಕುಮಾರ್, ಗೆಳೆಯರ ಬಳಗದ ಆಯೂಬ್, ರಾಕಿ, ಚಂದನ್, ಹೆಚ್.ಜೆ. ಸಂತೋಷ್, ಗೋಪಾಲ್, ರಾಕೇಶ್, ನಿಜಾಂ ಮತ್ತಿತರರು ಪಾಲ್ಗೊಂಡಿದ್ದರು.



ಕುಶಾಲನಗರದ ಸೆಸ್ಕ್ ಕಚೇರಿ ಎದುರು ವಿದ್ಯುತ್ ಕಡಿತ ಖಂಡಿಸಿ ಸಾರ್ವಜನಿಕರು ಪ್ರತಿಭಟನೆ ನಡೆಸಿದರು.

ಬೈತಡ್ಕ ಬೆಳ್ಳಿಯಪ್ಪ ನಿಧನ



ಮಡಿಕೇರಿ, ಜು.29– ವಾಯುಸೇನೆ ನಿವೃತ್ತ ಅಧಿಕಾರಿ ಹಾಗೂ ನಗರದ ರೇಸ್‌ಕೋರ್ಸ್ ರಸ್ತೆ ನಿವಾಸಿ ಬೈತಡ್ಕ ಬೆಳ್ಳಿಯಪ್ಪ (81) ಸೋಮವಾರ ನಿಧನರಾದರು.

ಮೃತರು ಪತ್ನಿ, ಹಿರಿಯ ಸಾಹಿತಿ ಬೈತಡ್ಕ ಜಾನಕಿ ಹಾಗೂ ಇಬ್ಬರು ಮಕ್ಕಳನ್ನು ಅಗಲಿದ್ದಾರೆ. ಮಂಗಳವಾರ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಬೆಳ್ಳಿಯಪ್ಪ ಅವರು ಜೀವ ವಿಮಾ ನಿಗಮದಲ್ಲೂ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

ಹುಲಿಗಳ ಸಂರಕ್ಷಣೆಯಿಂದ ಪರಿಸರಕ್ಕೆ ಉಪಯುಕ್ತ



ಬಿಳಿಗಿರಿರಂಗನಬೆಟ್ಟ ಮೊರಾರ್ಜಿ ವಸತಿ ಶಾಲೆಯಲ್ಲಿ ಅಂತಾರಾಷ್ಟ್ರೀಯ ಹುಲಿ ಸಂರಕ್ಷಣೆ ದಿನಾಚರಣೆ ಪ್ರಯುಕ್ತ ಗಿಡ ನೆಡಲಾಯಿತು.

ಯಳಂದೂರು, ಜು.29–ಹುಲಿಗಳ ಸಂರಕ್ಷಣೆಯಿಂದ ಹೆಚ್ಚು ಕಾನನ ಹಾಗೂ ಸಾಕಷ್ಟು ಪ್ರಮಾಣದಲ್ಲಿ ಪರಿಸರಕ್ಕೆ ಉಪಯುಕ್ತವಾಗಲಿದೆ ಎಂದು ಯಳಂದೂರು ಬಿಆರ್‌ಟಿ ವಲಯದ ಆರ್‌ಎಫ್‌ಓ ನಾಗೇಂದ್ರನಾಯಕ್ ತಿಳಿಸಿದರು.

ತಾಲೂಕಿನ ಬಿಳಿಗಿರಿರಂಗನಬೆಟ್ಟ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಸೋಮವಾರ ಬಿಆರ್‌ಟಿ ವನ್ಯಜೀವಿ ಯಳಂದೂರು ವಲಯದ ವತಿಯಿಂದ ನಡೆದ ಅಂತಾರಾಷ್ಟ್ರೀಯ ಹುಲಿ ಸಂರಕ್ಷಣೆ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಅಳುವಿನಂಚಿನತ್ತ, ಹುಲಿ ಸಂತತಿ ಹೋಗುತ್ತಿದೆ. ಇದರಿಂದ ಹುಲಿಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸಿ, ಪ್ರತಿವರ್ಷ ವಿಶ್ವ ಹುಲಿ ದಿನ ಆಚರಿಸಲಾಗುತ್ತಿದೆ ಎಂದರು.

ಹುಲಿ ನಮ್ಮ ದೇಶದ ರಾಷ್ಟ್ರೀಯ ಪ್ರಾಣಿ. ಹುಲಿ ಗಂಭೀರ ಮತ್ತು ಭವ್ಯವಾದ ಪ್ರಾಣಿಯಾಗಿದ್ದು, ವನ್ಯಜೀವಿಗಳ ವ್ಯಾಪಾರ, ಮಾನವ ಮತ್ತು ವನ್ಯಜೀವಿ ನಡುವಿನ ಸಂಘರ್ಷ ಹಾಗೂ ಕಾಡಿನ ನಾಶದಿಂದಾಗಿ ಹುಲಿಗಳ ಸಂಖ್ಯೆ ಇಳಿಮುಖ ವಾಗುತ್ತಿರುವ ಬಗ್ಗೆ ಜನರು ಎಚ್ಚರವಹಿಸಬೇಕು. ಕಾಡಿನ ಸಂರಕ್ಷಣೆ ಮಾಡುವ ಮೂಲಕ ಹುಲಿ ರಕ್ಷಣೆಗೆ ಹೆಚ್ಚಿನ ಸಹಕಾರವನ್ನು ಸ್ಥಳೀಯರು ನೀಡಬೇಕು ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಬಿಆರ್‌ಟಿ ಎಸಿಎಫ್ ನಂದಗೋಪಾಲ್, ಬಿಳಿಗಿರಿರಂಗನಬೆಟ್ಟ ಗ್ರಾಪಂ ಅಧ್ಯಕ್ಷ ಪ್ರದೀಪ್ ಕುಮಾರ್, ಅರಣ್ಯ ಸಿಬ್ಬಂದಿ ಮುತ್ತಪ್ಪ, ಯಶಸ್, ಶಿಕ್ಷಕರಾದ ಸುನೀಲ್, ತ್ಯಾಗರಾಜು, ಉಮೇಶ್, ಜ್ಞಾನೇಂದ್ರ, ಸುಜಾತ, ಸಿದ್ದಮುತ್ತು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಇಂದು, ನಾಳೆ ವಿಶೇಷ ಪೂಜೆ

ಬೇಗೂರು, ಜು.29– ತಾಲೂಕಿನ ಬೆಳಚಲವಾಡಿ ಗ್ರಾಮದಲ್ಲಿ ಜು.30 ಮತ್ತು 31ರಂದು ಸಿದ್ದಪ್ಪಾಜಿ ಗದ್ದುಗೆ ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ನಡೆಯಲಿದೆ.

ಜು.30ರಂದು ಸಿದ್ದಪ್ಪಾಜಿ ಗದ್ದುಗೆಯಲ್ಲಿ ವಿಶೇಷ ಪೂಜೆ ನಡೆಯಲಿದೆ. 31ರಂದು ಸಂಜೆ 5 ಗಂಟೆಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಿದ್ದಪ್ಪಾಜಿ ಮೆರವಣಿಗೆ ನಡೆಯಲಿದೆ.

ಆ.5ರಿಂದ ಮ.ಬೆಟ್ಟದಲ್ಲಿ ಕುಂಭಾಭಿಷೇಕ

ಚಾಮರಾಜನಗರ, ಜು.29–ಮಲೆಮಹದೇಶ್ವರಬೆಟ್ಟದ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮ.ಬೆಟ್ಟದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಕುಂಭಾಭಿಷೇಕ, ಸಹಸ್ರಾಭಿಷೇಕ ಮಹೋತ್ಸವ, ಲಕ್ಷ ಬಿಲ್ವಾರ್ಚನೆ ಪೂಜಾ ಕಾರ್ಯ ಆ.5ರಿಂದ ಸೆ.9ರವರೆಗೆ ನಡೆಯಲಿವೆ.

ಶ್ರೀಕ್ಷೇತ್ರ ಸಾಲೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಸಾನಿಧ್ಯದಲ್ಲಿ 108 ಕುಂಭ ಉತ್ಸವ ಮತ್ತು ಸ್ವಾಮಿಗೆ ವಿವಿಧ ಅಭಿಷೇಕ ಶ್ರಾವಣ ಮಾಸದ ಪರ್ಯಂತ ಬೆಳಗ್ಗೆ 9.20 ರಿಂದ 10.30ರೊಳಗೆ ಜರುಗಲಿವೆ ಎಂದು ಮಹದೇಶ್ವರಸ್ವಾಮಿಬೆಟ್ಟದ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಎ.ಇ. ರಘು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್.ಕುಮಾರ್ ನಿಧನ

ಚಾಮರಾಜನಗರ, ಜು.29–ತಾಲೂಕಿನ ನಂಜೇದೇವನಪುರ ಗ್ರಾಮದ ನಿವಾಸಿ ಎಸ್.ಕುಮಾರ್(61) ಅನಾರೋಗ್ಯದಿಂದ ಸೋಮವಾರ ನಿಧನರಾದರು. ಮೃತರು ಪತ್ನಿ, ಪದ್ಮ, ಪುತ್ರರಾದ ಸುನೀಲ್, ಮನೋಜ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸ್ವ ಗ್ರಾಮದ ಮೃತ ಜಮೀನಿನಲ್ಲಿ ಮಂಗಳವಾರ ಮಧ್ಯಾಹ್ನ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಸತ್ಯಶೋಧನೆ ಪತ್ರಿಕೋದ್ಯಮದ ಮಹಾಗುರಿಯಾಗಲಿ

● ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಭಿಮತ ● ಸುವರ್ಣ ಗಂಗೋತ್ರಿಯಲ್ಲಿ ಪತ್ರಿಕಾ ದಿನಾಚರಣೆ

ಚಾಮರಾಜನಗರ, ಜು.29–ಮಾಹಿತಿ, ಮನರಂಜನೆ, ಜಾಗೃತಿ, ವಸ್ತುನಿಷ್ಠ ವರದಿ, ಸತ್ಯಶೋಧನೆ ಪತ್ರಿಕೋದ್ಯಮದ ಮಹಾಗುರಿಯಾಗಿರಬೇಕು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಅಭಿಪ್ರಾಯಪಟ್ಟರು.

ಚಾಮರಾಜನಗರ ವಿಶ್ವವಿದ್ಯಾನಿಲಯದ ಸುವರ್ಣ ಗಂಗೋತ್ರಿಯ ನಿಜಗುಣ ಸಭಾಂಗಣದಲ್ಲಿ ಸೋಮವಾರ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಜಿಲ್ಲೆಯ ಪತ್ರಿಕಾ ಸಂಘಗಳ ಸಹಯೋಗದೊಂದಿಗೆ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ ಹಾಗೂ ಪತ್ರಿಕೋದ್ಯಮ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಪತ್ರಿಕೋದ್ಯಮಕ್ಕೆ 181 ವರ್ಷಗಳ ಇತಿಹಾಸವಿದೆ. ಮೊದಲ ಬಾರಿಗೆ 1843ರಲ್ಲಿ ಕ್ರೈಸ್ತ ಪಾದ್ರಿಯವರು ಮಂಗಳೂರು ಸಮಾಚಾರ ಪತ್ರಿಕೆ ಆರಂಭಿಸಿದರು. ಅಂದಿನಿಂದ ಇಂದಿನವರೆಗೂ ಪತ್ರಿಕಾರಂಗ ಸಾಕಷ್ಟು ಏಳುಬೀಳುಗಳನ್ನು ಕಂಡಿದ್ದು, ಅಂದಿನ, ಇಂದಿನ ಪತ್ರಿಕೋದ್ಯಮಕ್ಕೂ ಅಜಗಜಾಂತರ ವ್ಯತ್ಯಾಸವಿದೆ ಎಂದು ತಿಳಿಸಿದರು.

ಮಾಧ್ಯಮಗಳು ಸರ್ಕಾರ ಮತ್ತು ಜನರ ಸಂಪರ್ಕ ಕೊಂಡಿಯಾಗಿ ಕಾರ್ಯ ನಿರ್ವಹಿಸಬೇಕು. ನೈತಿಕ ಜವಾಬ್ದಾರಿ ಪತ್ರಕರ್ತರ ಮೇಲಿದೆ. ನಕಾರಾತ್ಮಕತೆಗಿಂತ ಸಕಾರಾತ್ಮಕ ವರದಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಸಾಮಾಜಿಕ ಬದ್ಧತೆ ಇರಬೇಕು. ಜನರಿಗೆ ನಿಖರ ಮಾಹಿತಿ ನೀಡಬೇಕು. ಬರವಣಿಗೆ ಶೈಲಿ ಉತ್ತಮವಾಗಿರಬೇಕು. ನೂರು ಸತ್ಯಸುದ್ದಿ ಪ್ರಕಟಿಸದಿದ್ದರೂ ಒಂದೇ ಒಂದು ಸುಳ್ಳು ಸುದ್ದಿ ಪ್ರಕಟಿಸಬಾರದು. ಪತ್ರಿಕೆಗಳು ಬದುಕನ್ನು ಅರಳಿಸುವ ಕೆಲಸ ಮಾಡಬೇಕು. ಆಗ ಮಾತ್ರ ಪತ್ರಿಕೆಗಳ ಬಗ್ಗೆ ಜನರಿಗೆ ನಂಬಿಕೆ, ವಿಶ್ವಾಸ ಮೂಡಲಿದೆ ಎಂದರು.



ಚಾಮರಾಜನಗರ ವಿವಿಯ ಸುವರ್ಣ ಗಂಗೋತ್ರಿಯಲ್ಲಿ ಆಯೋಜಿಸಿದ್ದ ಪತ್ರಿಕಾ ದಿನಾಚರಣೆಯನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು.

ಮಾಧ್ಯಮ ಕ್ಷೇತ್ರದ ಸವಾಲುಗಳ ಬಗ್ಗೆ ಉಪನ್ಯಾಸ ನೀಡಿದ ಮೈಸೂರು ಮಾನಸಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಎಂ.ಎಸ್.ಸಪ್ನ, ಇದು ಮಾಹಿತಿ ಯುಗವಾಗಿದೆ. ಜಾಹೀರಾತು ಪ್ರಪಂಚ ಇಂದು ವ್ಯಾಪಕ ಹಾಗೂ ವಿಫುಲವಾಗಿ ಬೆಳೆಯುತ್ತಿದೆ. ಮಾಧ್ಯಮ ಕ್ಷೇತ್ರ ಅನೇಕ ಸವಾಲುಗಳಿಂದ ಕೂಡಿದ್ದು, ಜಗತ್ತಿನ ಆಗುಹೋಗುಗಳನ್ನು ಜನರಿಗೆ ತಲುಪಿಸುವಲ್ಲಿ ಪತ್ರಿಕೆಗಳಿಗೆ ಪ್ರತಿದಿನ ಸವಾಲು ಎದುರಾಗಿವೆ. ಜನರಿಗೆ ಸಹಜ ಸುದ್ದಿ ಬಿತ್ತರಿಸಲು ಪತ್ರಕರ್ತರು ಸಹ ಪ್ರತಿದಿನ ಅಪ್‌ಡೇಟ್ ಆಗಬೇಕಾಗಿದೆ ಎಂದು ಹೇಳಿದರು.

> ದಿನಪತ್ರಿಕೆಗಳನ್ನು ನಿರಂತರವಾಗಿ ಓದುವ ಅಭ್ಯಾಸವನ್ನು ವಿದ್ಯಾರ್ಥಿಗಳು ಬೆಳೆಸಿಕೊಂಡು ಸಾಮಾಜಿಕ ಬದಲಾವಣೆಗೆ ಮುನ್ನುಡಿ ಬರೆಯಬೇಕು.
> –ಪ್ರೊ.ಎಂ.ಆರ್.ಗಂಗಾಧರ್, ಚಾಮರಾಜನಗರ ವಿವಿ ಕುಲಪತಿ

ಕುಲಸಚಿವ ಡಾ.ಜಿ.ವಿ.ವೆಂಕಟರಮಣ ಹಾಗೂ ಉಪಕುಲಸಚಿವ ಡಾ.ವಿ.ಜಿ.ಸಿದ್ದರಾಜು ಮಾತನಾಡಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಎ.ರಮೇಶ, ವಾರ್ತಾ ಸಹಾಯಕ ಸಿ.ಸುರೇಶ್‌ಕುಮಾರ್, ಕನ್ನಡ ಉಪನ್ಯಾಸಕರಾದ ಡಾ.ಶಶಿಕಲಾ, ಮೂಕಹಳ್ಳಿ ಬಸವಣ್ಣ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದ ಆರಂಭದಲ್ಲಿ ಚಾಮರಾಜನಗರ ವಿಶ್ವವಿದ್ಯಾಲಯದ ಪ್ರವೇಶದ್ವಾರದ ಡಾ. ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಗಣ್ಯರು ಮಾಲಾರ್ಪಣೆ ಮಾಡಿದರು.

ಸಂತ ಪೌಲರ ದೇವಾಲಯ ವಾರ್ಷಿಕೋತ್ಸವ



ಬಿಷಪ್ ಬರ್ನಾಡ್ ಮೋರೆಸ್ ಅವರನ್ನು ಸ್ವಾಗತಿಸಿ, ಸಂತ ಪೌಲರ ದೇವಾಲಯಕ್ಕೆ ಮೆರವಣಿಗೆಯಲ್ಲಿ ಕರೆತರಲಾಯಿತು.

ಚಾಮರಾಜನಗರ, ಜು.29–ನಗರದ ಬಿ.ರಾಚಯ್ಯ ಜೋಡಿರಸ್ತೆಯ ಸಂತ ಪೌಲರ ದೇವಾಲಯ ವಾರ್ಷಿಕೋತ್ಸವ ಸಂಭ್ರಮದಿಂದ ನೆರವೇರಿತು.

ಇದೇ ವೇಳೆ ಮೈಸೂರಿನ ಬಿಷಪ್ ಬರ್ನಾಡ್ ಮೋರೆಸ್ ಅವರನ್ನು ಸಮವಸ್ತ್ರ ಧರಿಸಿದ ಮಕ್ಕಳು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ನಂತರ ಅವರನ್ನು ಮೆರವಣಿಗೆಯಲ್ಲಿ ದೇವಾಲಯಕ್ಕೆ ಕರೆತರಲಾಯಿತು. ನಂತರ ದೇವಾಲಯ ಆವರಣದಲ್ಲಿ ನೂತನವಾಗಿ ನಿರ್ಮಿಸಿದ ಗುರುಗೃಹ ಪೌಲ್ ನಿವಾಸ್ ಅನ್ನು ಬರ್ನಾಡ್ ಮೋರೆಸ್ ಉದ್ಘಾಟಿಸಿದರು.

ತೇರಿನ ಮೆರವಣಿಗೆ: ಸಂತ ಪೌಲರ ವಾರ್ಷಿಕೋತ್ಸವ ಅಂಗವಾಗಿ ಪುಷ್ಪ ಮತ್ತು ವಿದ್ಯುತ್ ದೀಪಾಲಕೃಂತ ಪೌಲರ ಪುತ್ಥಳಿಯ ತೇರಿನ ಮೆರವಣಿಗೆ ನಡೆಸಲಾಯಿತು. ಮೆರವಣಿಗೆ ದೇವಸ್ಥಾನದಿಂದ ರಾಮಸಮುದ್ರ, ಡಿವೈಎಸ್ಪಿ ಕಚೇರಿ ಮಾರ್ಗ ಮತ್ತೆ ದೇವಸ್ಥಾನದ ಬಳಿ ಸಂಪನ್ನಗೊಂಡಿತು. ಮೆರವಣಿಗೆಯಲ್ಲಿ ಧರ್ಮಗುರುಗಳು, ಭಕ್ತರು ಭಾಗವಹಿಸಿದ್ದರು.

ಬಲಿಪೂಜೆ ಬಳಿಕ ನಡೆದ ಧಾರ್ಮಿಕ ಕಾರ್ಯಕ್ರಮದಲ್ಲಿ ಬಿಷಪ್ ಬರ್ನಾಡ್ ಮೋರೆಸ್, ವಿಶ್ರಾಂತ ಬಿಷಪ್ ಥಾಮಸ್ ಆಂಟನಿ ವಾಳಪಿಳ್ಳೈ, ಧರ್ಮಗುರು ಜಾನ್ ಆಲ್ಫ್ರೆಡ್ ಮೆಂಡೊನ್ಸಾರ ಅವರನ್ನು ಸನ್ಮಾನಿಸಲಾಯಿತು. ಧರ್ಮಗುರುಗಳಾದ ಜೆ.ಅಂತೋಣಿ ರಾಜ್, ಈ. ಅಂತೋಣಿರಾಜ್, ನಿರ್ಮಲ್ ಇದ್ದರು.

ಛಲದಿಂದ ವ್ಯಾಸಂಗ ಮಾಡಿದರೆ ಉಜ್ವಲ ಭವಿಷ್ಯ

ಚಾಮರಾಜನಗರ, ಜು.29–ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಹಾಗೂ ಛಲದಿಂದ ವ್ಯಾಸಂಗ ಮಾಡಿದರೆ ಉಜ್ವಲ ಭವಿಷ್ಯ ಸಿಗಲಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಗಣಕ ವಿಜ್ಞಾನ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಎಸ್.ಗುರು ಹೇಳಿದರು.

ನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದ ಆವರಣದ ಅನುಭವ ಮಂಟಪದಲ್ಲಿ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಜತ ಮಹೋತ್ಸವ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಶೇ.90ರಷ್ಟು ಅಂಕ ಪಡೆಯುವುದು ಸುಲಭದ ಮಾತಲ್ಲ. ಹೀಗಾಗಿ ಉತ್ತಮ ನಡವಳಿಕೆ ಇದ್ದರೆ ನೂರರಷ್ಟು ಫಲಿತಾಂಶ ಬಂದಂತೆ. ವಿಜ್ಞಾನ, ತಂತ್ರಜ್ಞಾನ ಬೆಳೆದಂತೆ ಸುಜ್ಞಾನವು ಹೊಂದಿರುತ್ತದೆ. ದೊಡ್ಡ ಕನಸು ಕಟ್ಟಿಕೊಂಡು ವ್ಯಾಸಾಂಗ ಮಾಡಬೇಕು ಎಂದು ಕಿವಿಮಾತು ಹೇಳಿದರು.

ಮರಿಯಾಲ ಮಠದ ಶ್ರೀ ಮುಮ್ಮಡಿ ಮುರುಘ ರಾಜೇಂದ್ರಸ್ವಾಮೀಜಿ ಮಾತನಾಡಿ, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘ ಬಹಳ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಮಹಾಮನೆಯ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಇಂಥ ಸಂಘಟನೆ ರಜತ ಮಹೋತ್ಸವ ಆಚರಣೆ ಮೂಲಕ ಸಮಾಜಮುಖಿಯಾಗಿದೆ ಎಂದರು.

ಮೂರು ಸಂಘಗಳ ಕ್ರಿಯಾ ಸಮಿತಿ ಅಧ್ಯಕ್ಷ ದುಂಡುಮಾದಪ್ಪ ಮಾತನಾಡಿ, ವೀರಶೈವ ಲಿಂಗಾಯತ ಸಂಘ ನೌಕರರ ಹಿತ ಕಾಯಲು ಸ್ಥಾಪನೆಯಾದ ಸಂಘಟನೆಯಾಗಿದೆ. ಕಳೆದ 25 ವರ್ಷಗಳಿಂದ ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಜೊತೆಗೆ ಅನೇಕ ಕಾರ್ಯಕ್ರಮಗಳನ್ನು ಆಯೋಜನೆ ಮೂಲಕ ಸೇವಾ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡಿದೆ ಎಂದರು. ಶ್ರೀ ಚನ್ನಬಸವಸ್ವಾಮೀಜಿ, ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಸಿದ್ದಮಲ್ಲಪ್ಪ ಮಾತನಾಡಿದರು. ಇದೇ ವೇಳೆ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು. ಬಸವೇಶ್ವರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಗೌರಿಶಂಕರ್, ಸಂಗಮ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಬಿ.ಎಲ್.ಮುದ್ದುಬಸವಣ್ಣ ಹಾಗೂ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು.



ಚಾಮರಾಜನಗರದ ಸಿದ್ದಮಲ್ಲೇಶ್ವರ ವಿರಕ್ತ ಮಠದಲ್ಲಿ ನಡೆದ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ರಜತ ಮಹೋತ್ಸವದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು.

ಒಂದನೇ ಪುಟದಿಂದ

ರಾಜಕೀಯವಾಗೇ ಎದುರಿಸುತ್ತೇವೆ

ಇದರರ್ಥ ಏನು ಎಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ನಡೆದಿದ್ದ ಒಂದು ಹಗರಣವನ್ನಾದರೂ ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ರಾ ಎಂದು ಮರು ಪ್ರಶ್ನಿಸಿದ ಸಿದ್ದರಾಮಯ್ಯ, ಆದರೆ ನಾನು ನ್ಯಾಯಾಂಗ ತನಿಖೆಗೆ ಒಪ್ಪಿಸಿದ್ದೇನೆ. ಅವರು ತನಿಖೆ ಮಾಡಿ ವರದಿ ನೀಡುತ್ತಾರೆ ಎಂದು ಸಿದ್ದರಾಮಯ್ಯ ತಿಳಿಸಿದರು. ಬಿಜೆಪಿ ಸರ್ಕಾರದಲ್ಲಿ ಕೋವಿಡ್ ಸಂದರ್ಭದಲ್ಲಿ 4 ಸಾವಿರ ಕೋಟಿ ರೂಪಾಯಿ ನುಂಗಿದರು. ನಾನು ಅಷ್ಟೆಲ್ಲಾ ಒತ್ತಾಯ ಮಾಡಿದರೂ ಬಿಜೆಪಿಯವರು ನ್ಯಾಯಾಂಗ ತನಿಖೆ ಮಾಡಿಸಿದ್ರಾ?

ನ್ಯಾಯಾಂಗ ತನಿಖೆ ಮಾತ್ರವಲ್ಲದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಿಬಿಐ ತನಿಖೆಗೂ ವಹಿಸಲಿಲ್ಲ. ಸಿಬಿಐ ಅನ್ನು ಅವರು ಚೋರ್ ಬಚಾವ್ ಸಂಸ್ಥೆ ಎಂದು ಟೀಕಿಸುತ್ತಿದ್ದರು. ಆದರೆ ಈಗ ಅದೇ ಸಿಬಿಐ ತನಿಖೆ ಮಾಡಿಸುವಂತೆ ಬಾಯಿ ಬಡಿಯುತ್ತಿದ್ದಾರೆ ಎಂದು ಟೀಕಿಸಿದರು.

ನಾನು ಮತ್ತು ಡಿ.ಕೆ.ಶಿವಕುಮಾರ್ ದೆಹಲಿಗೆ ಹೋಗುತ್ತಿದ್ದೇವೆ. ಸರ್ಕಾರ ಮತ್ತು ಪಕ್ಷದ ಕುರಿತಂತೆ ಹೈಕಮಾಂಡ್ ಜೊತೆ ಚರ್ಚೆ ಮಾಡುತ್ತೇವೆ ಎಂದು ಇದೇ ವೇಳೆ ಸಿದ್ದರಾಮಯ್ಯ ತಿಳಿಸಿದರು.

ಕೆಆರ್‌ಎಸ್‌ಗೆ ಬಾಗಿನ ಅರ್ಪಿಸಲು ತೆರಳುವ ಮುನ್ನ ಸಿದ್ದರಾಮಯ್ಯ ಮೈಸೂರಿನ ಅಗ್ರಹಾರದಲ್ಲಿರುವ ಮೈಲಾರಿ ಹೋಟೆಲ್‌ನಲ್ಲಿ ಅವರಿಗೆ ಇಷ್ಟವಾದ ಇಡ್ಲಿ, ದೋಸೆ ಸೇವಿಸಿದರು.

ಮೇಕೆದಾಟು ಅಣೆಕಟ್ಟು ಕಟ್ಟಲು ನಾವು ಸಿದ್ಧ

ಮೇಕೆದಾಟು ಅಣೆಕಟ್ಟು ನಿರ್ಮಾಣ ಮಾಡಲು ನಾವು ಸಿದ್ಧರಿದ್ದೇವೆ. ಆದರೆ ತಮಿಳುನಾಡು ತಗಾದೆ ತೆಗೆಯದಂತೆ ಹೇಳಲು ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದರು.

ನಿರ್ಮಲಾ ಸೀತಾರಾಮನ್ ಮಂಡಿಸಿದ ಬಜೆಟ್‌ನಲ್ಲಿ ಮೇಕೆದಾಟ ಯೋಜನೆಗೆ ಹಣ ನೀಡುವಂತೆ ಕೇಳಿದ್ದೆವು. ಆದರೆ ಒಂದು ಪೈಸೆಯನ್ನಾದರೂ ಕೊಟ್ಟರೆ ಎಂದು ಪ್ರಶ್ನಿಸಿದರು. ಮೈಸೂರು ಮತ್ತು ಹಾಸನಕ್ಕೆ ಐಐಟಿ ಕೇಳಿದ್ದೆವು. ಅದನ್ನು ಕೂಡ ನೀಡಲಿಲ್ಲ ಎಂದು ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಸಿಎಂ ಆದರೆ ಮಳೆ ಆಗಲ್ಲ ಅನ್ನುತ್ತಿದ್ದರು, ಆದರೆ ಈಗ ಏನೇಳ್ತಾರೆ....

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ, ಸಿದ್ದರಾಮಯ್ಯ ಮುಖ್ಯಮಂತ್ರಿಯಾದರೆ ಮಳೆ ಆಗಲ್ಲ, ಅಣೆಕಟ್ಟು ತುಂಬಲ್ಲ ಎಂದು ಜರಿಯುತ್ತಿದ್ದ ಬಿಜೆಪಿಯವರಿಗೆ ಉತ್ತಮ ಮಳೆ ಹಾಗೂ ಜಲಾಶಯ ಭರ್ತಿ ತಕ್ಕ ಉತ್ತರವಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಸಿದ್ದರಾಮಯ್ಯ, ನನ್ನ ಕಾಲ್ಗುಣದಿಂದ ಮಳೆಯಾಗಲ್ಲ ಎನ್ನುತ್ತಿದ್ದರು. ಈಗ ಏನು ಹೇಳುತ್ತಾರೆ ಎಂದು ಬಿಜೆಪಿ ನಾಯಕರಿಗೆ ತಿರುಗೇಟು ನೀಡಿದರು. ತರುವಾಯ ಮಾತು ಮುಂದುವರೆಸಿದ ಡಿ.ಕೆ.ಶಿವಕುಮಾರ್, ರಾಜ್ಯದಲ್ಲಿ ಉತ್ತಮ ಮಳೆಯಾಗಿದೆ. ಇದರಿಂದ ಜಲಾಶಯಗಳು ಭರ್ತಿಯಾಗಿದೆ. ಅದರಲ್ಲೂ ಕಾವೇರಿ ಜಲಾಯನ ಪ್ರದೇಶದ ಅಣೆಕಟ್ಟುಗಳು ಭರ್ತಿಯಾಗಿದ್ದು, ತಮಿಳುನಾಡಿಗೆ ನಿಗದಿಪಡಿಸಿದ್ದಕ್ಕಿಂತ ಹೆಚ್ಚು ನೀರು ಹರಿದು ಹೋಗಿದೆ ಎಂದು ತಿಳಿಸಿದರು. ಈಗ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸಲು ಹೋಗುತ್ತಿದ್ದೇವೆ. ಶುಭ ಸಂದರ್ಭದಲ್ಲಿ ರಾಜಕಾರಣ ಮಾತನಾಡುವುದಿಲ್ಲ ಎಂದು ತಿಳಿಸಿ, ಡಿ.ಕೆ.ಶಿವಕುಮಾರ್ ಮುನ್ನಡೆದರು.

ಮುಕ್ತವಾಗಿದೆ ಎನ್ನಲ್ಲ, ಕಡಿಮೆಯಾಗಿದೆ!

ನಾನು ಮಾತ್ರವಲ್ಲ ಬಿಜೆಪಿಯೇತರ ಇನ್ನಿತರೆ ರಾಜ್ಯಗಳ ಸರ್ಕಾರಗಳು ಕೂಡ ಬಹಿಷ್ಕರಿಸಿವೆ. ರಾಜ್ಯಕ್ಕೆ ನ್ಯಾಯ ಸಿಗದಿದ್ದ ನೀತಿ ಆಯೋಗದ ಸಭೆಗೆ ಹೋದರೆ ಏನು ಪ್ರಯೋಜನ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು. ಮಹಾರಾಷ್ಟ್ರ ಬಿಟ್ಟರೆ ಕರ್ನಾಟಕ ದೇಶದಲ್ಲೇ ಅತಿ ಹೆಚ್ಚು ತೆರಿಗೆ ನೀಡುವ ರಾಜ್ಯ. ಆದರೆ ಬಜೆಟ್‌ನಲ್ಲಿ ಹೆಚ್ಚು ಅನುದಾನವನ್ನು ಆಂಧ್ರ ಪ್ರದೇಶ ಹಾಗೂ ಬಿಹಾರಕ್ಕೆ, ನೀಡಿ ಕರ್ನಾಟಕಕ್ಕೆ ಅನ್ಯಾಯ ಮಾಡಿದ್ದಾರೆ. 15 ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಇಡೀ ದೇಶದ ಯಾವ ರಾಜ್ಯಕ್ಕೂ ಆಗಿಲ್ಲ ಎಂದು ಆರೋಪಿಸಿದರು.

ಕಳೆದ ಬಾರಿಯ ಬಜೆಟ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಗೆ 5300 ಕೋಟಿ ಕೋಟಿ ಘೋಷಣೆ ಮಾಡಿ ಇನ್ನು ಕೂಡ ಕೊಟ್ಟಿಲ್ಲ. ಇನ್ನು ಈ ಬಾರಿಯ ಬಜೆಟ್‌ನಲ್ಲಿ ರಾಜ್ಯಕ್ಕೆ ಸಂಪೂರ್ಣ ಅನ್ಯಾಯವಾಗಿದೆ. ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿರುವ ನಿರ್ಮಲಾ ಸೀತಾರಾಮನ್ ರಾಜ್ಯದ ಋಣ ತೀರಿಸಬೇಕಲ್ಲವೆ ಎಂದು ಪ್ರಶ್ನಿಸಿದರು

ಕುಮಾರಸ್ವಾಮಿ ಕೇಂದ್ರ ಸಚಿವರಾಗಿದ್ದಾರೆ, ಬಜೆಟ್‌ನಲ್ಲಿ ತಾವು ಆಯ್ಕೆಯಾದ ಮಂಡ್ಯ ಕ್ಷೇತ್ರಕ್ಕೆ ಒಂದು ಕೈಗಾರಿಕೆಯನ್ನಾದರೂ ತಂದರೆ ಎಂದು ಮರು ಪ್ರಶ್ನಿಸಿದ ಸಿದ್ದರಾಮಯ್ಯ, ಇಷ್ಟೆಲ್ಲಾ ಲೋಪ ಇಟ್ಟುಕೊಂಡು ನಮಗೆ ಪಾಠ ಮಾಡಲು ಬರುತ್ತಾರೆ ಎಂದು ಕಿಡಿಕಾರಿದರು.

ಪಾದಯಾತ್ರೆ ಮಾಡಿಯೇ ತೀರುತ್ತೇವೆ: ಬಿಜೆಪಿ

ಅಕ್ರಮ ಗಣಿಗಾರಿಕೆ ಮಾಡಿ, ರಾಜ್ಯದ ಸಂಪತ್ತನ್ನು ಲೂಟಿ ಮಾಡುತ್ತಿದ್ದರು. ಅಂದು ಕಾಂಗ್ರೆಸ್ ಪಾದಯಾತ್ರೆ ಮಾಡಿ, ಅದಕ್ಕೆ ಒಂದು ಗುರಿ ಮುಟ್ಟಿಸಿತ್ತು. ನಂತರ ಕುಡಿಯುವ ನೀರಿಗಾಗಿ ಮೇಕೆದಾಟು ಪಾದಯಾತ್ರೆ ಮಾಡಿದ್ದರು.ಇದು ಯಾರ ವಿರುದ್ಧವೂ ಅಲ್ಲ. ಸಮುದ್ರಕ್ಕೆ ಹೋಗುವ ನೀರನ್ನು ತಡೆಗಟ್ಟಿ ಸದ್ಬಳಕೆ ಮಾಡಿಕೊಳ್ಳುವ ಉದ್ದೇಶದಿಂದ ಯಾತ್ರೆ ಮಾಡಿದ್ದೇವೆ. ಆದರೆ ಬಿಜೆಪಿಯವರು ಕಾನೂನು ಬಾಹಿರವಾಗಿ ಪಾದ ಯಾತ್ರೆ ಹಮ್ಮಿಕೊಂಡಿದ್ದಾರೆ. ಇದಕ್ಕೆ ಅವಕಾಶ ನೀಡುವುದಿಲ್ಲ ಎಂದಿದ್ದಾರೆ.

ಗೊಡ್ಡು ಬೆದರಿಕೆ ಹೆದರಲ್ಲ: ಪರಮೇಶ್ವರ್ ಹೇಳಿಕೆ ನೀಡಿದ ಬೆನ್ನಲ್ಲೇ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸುದ್ದಿಗೋಷ್ಠಿ ಮಾಡಿ, ಗೊಡ್ಡು ಬೆದರಿಕೆಯಿಂದ ಹೋರಾಟ ಹತ್ತಿಕ್ಕಲು ಸಾಧ್ಯವಿಲ್ಲ ಎಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯ ಮಂತ್ರಿ ಶಿವಕುಮಾರ್ ಅವರೇ, ನಿಮ್ಮ ಗೊಡ್ಡು ಬೆದರಿಕೆಗೆ ನಮ್ಮ ಕಾರ್ಯಕರ್ತರು ಅಂಜುವುದಿಲ್ಲ. ನಿಮ್ಮ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರವನ್ನು ಜನರಿಗೆ ತಿಳಿಸಲು ಹೊರಟಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಅವರಿಗೆ ಸತ್ಯದ ಮನವರಿಕೆ ಮಾಡಿಕೊಡುವುದು ನಮ್ಮ ಯಾತ್ರೆ ಉದ್ದೇಶವಾಗಿದೆ.

ಕಾಂಗ್ರೆಸ್ ಆಡಳಿತದಲ್ಲಿ ನಡೆದಿರುವ ಹಗರಣಗಳ ಕುರಿತು ವಿಧಾನಮಂಡಲದಲ್ಲಿ ಚರ್ಚೆ ನಡೆಸಲು ಸರ್ಕಾರ ಅವಕಾಶ ನೀಡಲಿಲ್ಲ. ಸತ್ಯ ಎದುರಿಸಲು ನಿಮಗೆ ಇಚ್ಛೆ ಇದ್ದರೆ, ಅಲ್ಲಿಯೇ ಚರ್ಚೆಗೆ ಅವಕಾಶ ಮಾಡಿಕೊಡುತ್ತಿದ್ದೀರಿ. ಮುಡಾ ಹಾಗೂ ಮಹರ್ಷಿ ವಾಲ್ಮೀಕಿ ಹಗರಣ ಸೇರಿ, ಎಲ್ಲಾ ಅವ್ಯವಹಾರಗಳನ್ನು ಜನರಿಗೆ ತಿಳಿಸುತ್ತೇವೆ ಎಂದರು. ಮೂರರಿಂದ ನಾಲ್ಕು ಸಾವಿರ ಕೋಟಿ ಬೆಲೆ ಬಾಳುವ ನಿವೇಶನಗಳನ್ನು ಮನಸ್ಸೋ ಇಚ್ಛೆ ಕೊಡಲಾಗಿದೆ ಎಂದು ಮುಡಾ ಅಧ್ಯಕ್ಷ ಮರಿಗೌಡರೇ ಬಾಯಿ ಬಿಟ್ಟಿದ್ದಾರೆ. ಇಂತಹ ಹಗರಣಗಳನ್ನು ಜನರ ಮುಂದಿಡುವುದು ತಪ್ಪೇ ಎಂದು ಪ್ರಶ್ನಿಸಿದರು.

ಸಿಎಂ ಸಿದ್ದರಾಮಯ್ಯ ಬಾಗಿನ

ವಿವಿಧ ನಿಗಮ–ಮಂಡಳಿ ಅಧ್ಯಕ್ಷರು ಹಾಗೂ ಅಧಿಕಾರಿಗಳು ಬಾಗಿನ ಸಮರ್ಪಣೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮೈಸೂರಿನಿಂದ ಎರಡು ಕೆಎಸ್‌ಆರ್‌ಟಿಸಿ ವೋಲ್ವೋ ಬಸ್‌ನಲ್ಲಿ ಸಂಪುಟದ ಸಹೋದ್ಯೋಗಿಳು, ಶಾಸಕರು, ಮುಖಂಡರೊಂದಿಗೆ ಆಗಮಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕೆಆರ್‌ಎಸ್ ಅಣೆಕಟ್ಟೆಯ ದಕ್ಷಿಣ ದ್ವಾರದಲ್ಲಿ ಜಾನಪದ ಕಲಾ ತಂಡಗಳು, ಮಹಿಳೆಯರು ಪೂರ್ಣಕುಂಭ ಸ್ವಾಗತ ನೀಡಿ ಬರಮಾಡಿಕೊಂಡರು. ಸಂಸತ್ ಅಧಿವೇಶನದಲ್ಲಿ ಪಾಲ್ಗೊಂಡಿರುವುದರಿಂದ ಮಂಡ್ಯ ಸಂಸದರೂ ಆದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಇಂದಿನ ಬಾಗಿನ ಅರ್ಪಿಸುವ ಕಾರ್ಯಕ್ರಮದಲ್ಲಿ ಭಾಗಿಯಾಗಿರಲಿಲ್ಲ. ಕಾರ್ಯಕ್ರಮದ ಹಿನ್ನೆಲೆಯಲ್ಲಿ ಕೆಆರ್‌ಎಸ್ ಅಣೆಕಟ್ಟೆ ಮತ್ತು ದಕ್ಷಿಣ–ಉತ್ತರ ದ್ವಾರದಲ್ಲಿ ತಾಯಿ ಭುವನೇಶ್ವರಿ ಚಿತ್ರವಿದ್ದ ಕನ್ನಡ ಬಾವುಟ ಅಳವಡಿಸಲಾಗಿತ್ತಲ್ಲದೇ, ಇಡೀ ಅಣೆಕಟ್ಟೆಯನ್ನು ತಳಿರು–ತೋರಣ, ನಾನಾ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಸಿಎಂ ಆಗಮನದ ಹಿನ್ನೆಲೆಯಲ್ಲಿ ಪಂಪ್‌ಹೌಸ್‌ನಿಂದ ಕೆಆರ್‌ಎಸ್‌ವರೆಗೆ ರಸ್ತೆಯುದ್ದಕ್ಕೂ ಎರಡೂ ಬದಿಯಲ್ಲಿ ಸಿಎಂ, ಡಿಸಿಎಂ ಹಾಗೂ ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡರ ಭಾವಚಿತ್ರವಿರುವ ಸಾವಿರಾರು ಫ್ಲೆಕ್ಸ್‌ಗಳನ್ನು ಅಳವಡಿಸಲಾಗಿತ್ತು.

1979ರಲ್ಲಿ ಅಂದಿನ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಮೈದುಂಬಿದ ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಅರ್ಪಿಸುವ ಸಂಪ್ರದಾಯಕ್ಕೆ ನಾಂದಿ ಹಾಡಿದ್ದರು. ಕಳೆದ 10 ವರ್ಷಗಳಲ್ಲಿ ಆರು ಬಾರಿ ಬಾಗಿನ ಸಮರ್ಪಿಸುವ ಸದವಕಾಶ ಒದಗಿ ಬಂದಿದ್ದು, ಆ ಪೈಕಿ ಸಿದ್ದರಾಮಯ್ಯರದ್ದು ಮೂರನೇ ಕಾರ್ಯಕ್ರಮವಾಗಿದೆ.

ಕಳೆದ 2013 ಮತ್ತು 14ರಲ್ಲಿ ಮುಖ್ಯಮಂತ್ರಿಯಾಗಿದ್ದು, ಬಾಗಿನ ಅರ್ಪಿಸಿದ್ದ ಅವರಿಗೆ ಅಣೆಕಟ್ಟೆ ಭರ್ತಿಯಾಗದ ಕಾರಣ 2015, 2016 ಮತ್ತು 2017ರಲ್ಲಿ ಅವಕಾಶವಾಗಲಿಲ್ಲ. ಮತ್ತೆ 2023ರಲ್ಲಿ ಅಧಿಕಾರಕ್ಕೆ ಬಂದರೂ ಕಳೆದ ವರ್ಷ ಮಳೆಯಾಗದೇ ಜಲಾಶಯ ಭರ್ತಿಯಾಗಲಿಲ್ಲ.

ದಕ್ಷಿಣ ವಲಯ ಡಿಐಜಿಪಿ ಡಾ. ಬೋರಲಿಂಗಯ್ಯ ನೇತೃತ್ವದಲ್ಲಿ ಸಿಎಂ ಬಾಗಿನ ಸಮರ್ಪಣೆ ಕಾರ್ಯಕ್ರಮಕ್ಕೆ ಕೆಆರ್‌ಎಸ್‌ನಲ್ಲಿ ಭಾರೀ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಕಾರ್ಯಕ್ರಮ ಹಿನ್ನೆಲೆಯಲ್ಲಿ ಸುರಕ್ಷತೆ ದೃಷ್ಟಿಯಿಂದ ಬೃಂದಾವನಕ್ಕೆ ಇಂದು ಬೆಳಗ್ಗೆಯಿಂದ ಮಧ್ಯಾಹ್ನದವರೆಗೆ ಪ್ರವಾಸಿಗರು, ಸಾರ್ವಜನಿಕರಿಗೆ



ಕ್ಷುಲ್ಲಕ ಕಾರಣಕ್ಕೆ ಸರ್ಕಾರ ದುರ್ಬಲಗೊಳಿಸುವ ಯತ್ನ

ಬಿಜೆಪಿ, ಜೆಡಿಎಸ್ ವಿರುದ್ಧ ಸಿಎಂ ಸಿದ್ದರಾಮಯ್ಯ ವಾಗ್ದಾಳಿ



ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಸಮರ್ಪಿಸಿದ ಬಳಿಕ ಸಿಎಂ ಸಿದ್ದರಾಮಯ್ಯ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿದರು

ಮೈಸೂರು, ಜು. 29(ಆರ್‌ಕೆ)– ಕ್ಷುಲ್ಲಕ ವಿಚಾರ ಮುಂದಿಟ್ಟುಕೊಂಡು ಬಿಜೆಪಿ, ಜೆಡಿಎಸ್ ನಮ್ಮ ಸರ್ಕಾರವನ್ನು ದುರ್ಬಲಗೊಳಿಸಲು ಯತ್ನಿಸುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಆರೋಪಿಸಿದ್ದಾರೆ.

ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಸಮರ್ಪಿಸಿದ ಬಳಿಕ, ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಅಬ್ಬರದ ಭಾಷಣ ಮಾಡಿದ ಅವರು, ನಮಗೆ 136 ಸೀಟು ಕೊಟ್ಟಿದ್ದು ಜನರು, ಬಿಜೆಪಿ, ಜೆಡಿಎಸ್‌ನವರಲ್ಲ. ಜನಾದೇಶದ ಮೇಲೆ ಅಧಿಕಾರಕ್ಕೆ ಬಂದಿರುವ ನಮ್ಮ ಸರ್ಕಾರದ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿ ವಿಧಾನಸಭಾ ಅಧಿವೇಶನದ ಸಮಯವನ್ನು ವ್ಯರ್ಥ ಮಾಡಿದರು. ಬರ, ವಿಪತ್ತು ನಿರ್ವಹಣೆ, ಪ್ರವಾಹ, ಅಭಿವೃದ್ಧಿ ವಿಷಯ ಚರ್ಚಿಸದೇ ಕ್ಷುಲ್ಲಕ ವಿಚಾರ ಮುಂದಿಟ್ಟು ಸರ್ಕಾರ ದುರ್ಬಲಗೊಳಿಸಲೆತ್ನಿಸಿದರು ಎಂದು ಅವರು ತೀವ್ರ ವಾಗ್ದಾಳಿ ನಡೆಸಿದರು.

ಕಳೆದ ವರ್ಷ ಭೀಕರ ಬರಗಾಲವಿದ್ದಾಗ ಎರಡು ಬಾರಿ ಮನವಿ ಮಾಡಿದರೂ ಕೇಂದ್ರ ಸರ್ಕಾರ ಪರಿಹಾರದ ಹಣ ಕೊಡಲಿಲ್ಲ. ಕಡೆಗೆ ಸುಪ್ರೀಂಕೋರ್ಟ್ ಮೊರೆ ಹೋಗಿ 3,544 ಕೋಟಿ ರೂ. ಎನ್‌ಡಿಆರ್‌ಎಫ್ ಹಣ ಗಿಟ್ಟಿಸಿಕೊಂಡು ಜನರಿಗೆ ಹಂಚಿಸಿದ್ದೇವೆ ಎಂದ ಅವರು, ನಮ್ಮ ಸರ್ಕಾರ ಬಂದ ಮೇಲೆ ರೈತರಿಗೆ ಗೊಬ್ಬರ, ಬಿತ್ತನೆ ಬೀಜ ಸಮಸ್ಯೆಯಾಗದಂತೆ ನೋಡಿಕೊಂಡಿದ್ದೇವೆ ಎಂದರು.

ಅಭಿವೃದ್ಧಿಗೆ ಸರ್ಕಾರದಲ್ಲಿ ಹಣವಿಲ್ಲ, ಎಲ್ಲಾ ಸಂಪನ್ಮೂಲವನ್ನೂ ಗ್ಯಾರಂಟಿ ಯೋಜನೆಗಳಿಗೆ ನೀಡುತ್ತಿದ್ದಾರೆ, ಎಸ್ಸಿ–ಎಸ್ಟಿ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಸುತ್ತಿದ್ದಾರೆಂದು ಸುಳ್ಳುಗಳನ್ನೇ ಹೇಳುತ್ತಿರುವ ಜೆಡಿಎಸ್, ಬಿಜೆಪಿಯವರು ಮನೆಮುರುಕರು ಎಂದ ಸಿದ್ದರಾಮಯ್ಯ, ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳ ಅಕೌಂಟ್‌ನಲ್ಲೂ 700 ಕೋಟಿ ರೂ. ಹಣ ಇದೆ ಎಂದರು.

ಎಲ್ಲಾ ಅಭಿವೃದ್ಧಿ ಕೆಲಸಗಳೂ ನಡೆಯುತ್ತಿವೆ. ಬಡವರಿಗೆ ತಿಂಗಳಿಗೆ 4ರಿಂದ 5,000 ರೂ. ಸಿಗುವಂತೆ ಮಾಡಿದ್ದೇವೆ. ಬಿಜೆಪಿ, ಜೆಡಿಎಸ್‌ನವರಿಗೆ ಧಮ್ ಇಲ್ಲ. ತಾಕತ್ತಿದ್ದರೆ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಿ ಎಂದು ಹೇಳಲಿ ಎಂದು ಸವಾಲೆಸೆದ ಅವರು, 3 ಲಕ್ಷದ 71 ಸಾವಿರ ಕೋಟಿ ರೂ.ಗಳನ್ನು ಎಲ್ಲಾ ಇಲಾಖೆಗಳಿಗೂ ಕೊಟ್ಟಿದ್ದೇವೆ. ದಲಿತರಿಗಾಗಿ ಸಾಕಷ್ಟು ಕೆಲಸ ಮಾಡಿದ್ದೇವೆ. ಬಿಜೆಪಿಯವರಿಂದ ನಾವು ಪಾಠ ಕಲಿಯಬೇಕಿಲ್ಲ ಎಂದು ಕಿಡಿಕಾರಿದರು.

ಕೆಆರ್‌ಎಸ್‌ನಲ್ಲಿ ನಾಲ್ವಡಿ, ಸರ್ ಎಂವಿ ಪ್ರತಿಮೆ ಅನಾವರಣ





ಕಾವೇರಿ ನೀರಾವರಿ ನಿಗಮದಿಂದ ಕೆಆರ್‌ಎಸ್ ಅಣೆಕಟ್ಟೆಯ ದಕ್ಷಿಣ ದ್ವಾರದ ಬಳಿ ಪ್ರತಿಷ್ಠಾಪಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ. ವಿಶ್ವೇಶ್ವರಯ್ಯನವರ ಪ್ರತಿಮೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ಅನಾವರಣಗೊಳಿಸಿದರು.

ಜಮ್ಮು ಕಾಶ್ಮೀರದ ಸೋಪೋರ್‌ನಲ್ಲಿ ನಿಗೂಢ ಸ್ಫೋಟ; ನಾಲ್ವರು ಸಾವು



ಶ್ರೀನಗರ ಜಮ್ಮು ಮತ್ತು ಕಾಶ್ಮೀರದ ಸೋಪೋರ್ ಪಟ್ಟಣದಲ್ಲಿ ಸೋಮವಾರ ಸಂಭವಿಸಿದ ನಿಗೂಢ ಸ್ಫೋಟದಲ್ಲಿ ನಾಲ್ವರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಂದು ಮಧ್ಯಾಹ್ನ ಸೋಪೋರ್ ಪಟ್ಟಣದ ಶಾಯರ್ ಕಾಲೋನಿಯಲ್ಲಿ ಈ ನಿಗೂಢ ಸ್ಫೋಟ ಸಂಭವಿಸಿದ್ದು, ಘಟನೆಯಲ್ಲಿ ನಾಲ್ವರಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುಗಳನ್ನು ತಕ್ಷಣವೇ ಹತ್ತಿರದ ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಅವರಲ್ಲಿ ಮೂವರು ಸಾವನ್ನಪ್ಪಿದ್ದಾರೆ ಎಂದು ವೈದ್ಯರು ಘೋಷಿಸಿದರು. 4ನೇ ಗಾಯಾಳುವನ್ನು ಶ್ರೀನಗರದ ಸ್ಕಿಮ್ಸ್ ಆಸ್ಪತ್ರೆಗೆ ಸ್ಥಳಾಂತರಿಸುವ ವೇಳೆ ದಾರಿ ಮಧ್ಯದಲ್ಲಿಯೇ ಸಾವನ್ನಪ್ಪಿದರು ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮೃತರನ್ನು ಸೋಪೋರ್ ಪ್ರದೇಶದ ನಿವಾಸಿಗಳಾದ ನಜೀರ್ ಅಹ್ಮದ್ ನದ್ರೂ, ಅಜಮ್ ಅಶ್ರಫ್ ಮಿರ್, ಆದಿಲ್ ರಶೀದ್ ಭಟ್ ಮತ್ತು ಅಬ್ದುಲ್ ರಶೀದ್ ಭಟ್ ಎಂದು ಗುರುತಿಸಲಾಗಿದೆ. ಈ ಸಂಬಂಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಸ್ಫೋಟದ ನಿಖರ ಸ್ವರೂಪವನ್ನು ಇನ್ನೂ ಪತ್ತೆ ಮಾಡಲಾಗುತ್ತಿದೆ ಎಂದು ಅಧಿಕಾರಿ ಹೇಳಿದ್ದಾರೆ.

ದೆಹಲಿಯಲ್ಲಿ ಯುಪಿಎಸ್‌ಸಿ ಆಕಾಂಕ್ಷಿಗಳ ಸಾವು: ಎಸ್‌ಯುವಿ ಚಾಲಕ ಸೇರಿ ಮತ್ತೆ ಐವರ ಬಂಧನ

ನವದೆಹಲಿ: ದೆಹಲಿ ಕೋಚಿಂಗ್ ಸೆಂಟರ್‌ನಲ್ಲಿ ಮೂವರು ಯುಪಿಎಸ್‌ಸಿ ಆಕಾಂಕ್ಷಿಗಳ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಜಲಾವೃತವಾದ ರಸ್ತೆಯಲ್ಲಿ ವಾಹನ ಚಲಾಯಿಸುವ ಮೂಲಕ ರಾವ್ಸ್ ಸಿವಿಲ್ ಸರ್ವಿಸ್ ಕೋಚಿಂಗ್ ಇನ್‌ಸ್ಟಿಟ್ಯೂಟ್ ಗೇಟ್‌ಗೆ ಹಾನಿ ಮಾಡಿದ ಆರೋಪದ ಮೇಲೆ ಎಸ್‌ಯುವಿ ಚಾಲಕ ಸೇರಿದಂತೆ ಐವರನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಆರೋಪಿಗಳ ಗುರುತು ಮತ್ತು ಅವರ ಪಾತ್ರವನ್ನು ಪೊಲೀಸರು ಇನ್ನೂ ಬಹಿರಂಗಪಡಿಸಬೇಕಾಗಿದೆ. ಕಳೆದ ಶನಿವಾರ ಬೆಳಗ್ಗೆ ಸುರಿದ ಭಾರಿ ಮಳೆಯಿಂದ ಮಧ್ಯ ದೆಹಲಿಯ ಯುಪಿಎಸ್ ಕೋಚಿಂಗ್ ಸೆಂಟರ್‌ನ ನೆಲಮಾಳಿಗೆಗೆ ನೀರು ನುಗ್ಗಿದ ಪರಿಣಾಮ 20 ವರ್ಷದ ಮೂವರು ಯುವ ಐಎಎಸ್ ಆಕಾಂಕ್ಷಿಗಳು ಸಾವನ್ನಪ್ಪಿದ್ದರು.

ಮೂವರು ಮೃತರನ್ನು ಉತ್ತರ ಪ್ರದೇಶದ ಅಂಬೇಡ್ಕರ್ ನಗರದ ಶ್ರೇಯಾ ಯಾದವ್, ತೆಲಂಗಾಣದ ತಾನ್ಯಾ ಸೋನಿ ಮತ್ತು ಕೇರಳದ ಎರ್ನಾಕುಲಂನ ನವೀನ್ ಡಾಲ್ವಿನ್ ಎಂದು ಗುರುತಿಸಲಾಗಿದೆ.

ಕೋಚಿಂಗ್ ಇನ್‌ಸ್ಟಿಟ್ಯೂಟ್, ನೆಲಮಾಳಿಗೆಯ ಪ್ರದೇಶದಲ್ಲಿ ಗ್ರಂಥಾಲಯವನ್ನು "ಕಾನೂನು ಬಾಹಿರವಾಗಿ" ನಡೆಸುತ್ತಿದೆ ಎಂದು ಪ್ರಾಥಮಿಕ ಪೊಲೀಸ್ ತನಿಖೆಯಿಂದ ತಿಳಿದುಬಂದಿದೆ.

ಆರೋಪಿಗಳ ವಿರುದ್ಧ ನರಹತ್ಯೆ ಸೇರಿದಂತೆ BNS ನ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಲಾಗಿದೆ ಮತ್ತು ಆರೋಪಿ ಮಾಲೀಕರನ್ನು ಹಾಗೂ ಸಂಸ್ಥೆಯ ಸಂಯೋಜಕರನ್ನು ಭಾನುವಾರ ಬಂಧಿಸಲಾಗಿದೆ.

ಇಂದು ಎಸ್‌ಯುವಿ ಚಾಲಕ ಹಾಗೂ ನೆಲಮಾಳಿಗೆಯ ಮಾಲೀಕ ಸೇರಿದಂತೆ ಮತ್ತೆ ಐವರನ್ನು ಬಂಧಿಸಲಾಗಿದೆ.

ಕಾವಾ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮೈಸೂರು.ಜು.29– ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜು (ಕಾವಾ) ಸಂಸ್ಥೆಗೆ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ)(ಎರಡು ಶೈಕ್ಷಣಿಕ ವರ್ಷದ ನಾಲ್ಕು ಸೆಮಿಸ್ಟರ್ ಸಿ.ಬಿ.ಸಿ.ಎಸ್ ಪದ್ಧತಿ) ದೃಶ್ಯ ಕಲೆಯಲ್ಲಿ 2024–25 ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಸ್ನಾತಕೋತ್ತರ ಪದವಿ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪ್ರಥಮ ಮಾಸ್ಟರ್ ಆಫ್ ವಿಜ್ಯುಯಲ್ ಆರ್ಟ್ಸ್ (ಎಂ.ವಿ.ಎ) ಪ್ರವೇಶಾತಿಗಾಗಿ ಚಿತ್ರಕಲೆ ಮತ್ತು ಶಿಲ್ಪಕಲೆ ವಿಭಾಗಕ್ಕೆ ಅರ್ಜಿ ಸಲ್ಲಿಸಲು ರೂ.250 ಪಾವತಿಸಿ ಕಚೇರಿಯಲ್ಲಿ ಅರ್ಜಿ ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಆಗಸ್ಟ್ 10 ರೊಳಗೆ ಕಚೇರಿಗೆ ಸಲ್ಲಿಸಬಹುದು.

ಆಗಸ್ಟ್ 12 ರಂದು ಬೆಳಿಗ್ಗೆ 11 ಗಂಟೆಗೆ ಅರ್ಹತಾ ಪರೀಕ್ಷೆ ಹಾಗೂ ಮಧ್ಯಾಹ್ನ 2 ಗಂಟೆಗೆ ವೈಯಕ್ತಿಕ ಸಂದರ್ಶನ ನಡೆಯಲಿದ್ದು, ಆಸಕ್ತ ಅಭ್ಯರ್ಥಿಗಳು http://www.mysore.nic.in ಅಥವಾ http://www.cavamysore.karnataka.gov.in ಅಂತರ್ಜಾಲದ ಮೂಲಕ ಮಾಹಿತಿಯನ್ನು ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ದೂ.ಸಂ.0821–2438931 ಅನ್ನು ಸಂಪರ್ಕಿಸಬಹುದು ಎಂದು ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ಡೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ ಹುಲಿಗಳ ಸಂಖ್ಯೆ ಸುಧಾರಿಸಿದರೂ, ಇತ್ತೀಚೆಗೆ ಅವುಗಳ ಸಂರಕ್ಷಣೆ ಸವಾಲಾಗಿ ಪರಿಣಮಿಸಿದೆ

ಪಿಸಿಸಿಎಫ್ ಸುಭಾಷ್ ಕೆ.ಮಲ್ಖೆಡೆ ಅಭಿಮತ



ವಿಶ್ವ ಹುಲಿ ದಿನದ ಅಂಗವಾಗಿ ಮೈಸೂರು ಮೃಗಾಲಯದ ಸಭಾಂಗಣದಲ್ಲಿ ಆಯೋಜಿಸಿದ್ದ ಎರಡು ದಿನಗಳ ವಿಚಾರ ಸಂಕಿರಣಕ್ಕೆ ವನ್ಯಜೀವಿ ವಿಭಾಗದ ಪಿಸಿಸಿಎಫ್ ಸುಭಾಷ್ ಕೆ.ಮಲ್ಖೆಡೆ ಚಾಲನೆ ನೀಡಿದರು.

ಮೈಸೂರು,ಜು.29(ಎಂಟಿವೈ)– ದೇಶದಲ್ಲಿ ಹುಲಿಗಳ ಸಂಖ್ಯೆಯಲ್ಲಿ ಸುಧಾರಣೆಯಾಗುತ್ತಿದ್ದರೂ ಹುಲಿ ಸೇರಿದಂತೆ ದೊಡ್ಡ ಬೆಕ್ಕುಗಳ ಸಂರಕ್ಷಣೆ ಸವಾಲಾಗಿ ಪರಿಣಮಿಸಿದೆ ಎಂದು ವನ್ಯಜೀವಿ ವಿಭಾಗದ ಪಿಸಿಸಿಎಫ್ ಸುಭಾಷ್ ಕೆ.ಮಲ್ಖೆಡೆ ಅಭಿಪ್ರಾಯಪಟ್ಟಿದ್ದಾರೆ.

ವಿಶ್ವ ಹುಲಿ ದಿನದ ಅಂಗವಾಗಿ ಮೈಸೂರಿನ ಮೃಗಾಲಯದ ಸಭಾಂಗಣದಲ್ಲಿ 'ರೋರಿಂಗ್ ಫಾರ್ವರ್ಡ್: ಎಫೆಕ್ಟಿವ್ ಆಕ್ಷನ್ಸ್ ಫಾರ್ ಬಿಗ್ ಕ್ಯಾಟ್ ಕನ್ಸರ್ವೇಶನ್' ವಿಷಯ ಕುರಿತು ಆಯೋಜಿಸಿದ್ದ ಎರಡು ದಿನಗಳ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅನೇಕ ಕಾರಣದಿಂದ ಅಳಿವಿನಂಚಿಗೆ ದೂಡಲ್ಪಟ್ಟಿದ್ದ ಹುಲಿಗಳ ಸಂತತಿ ಕೆಲ ವರ್ಷಗಳಿಂದ ಸುಧಾರಿಸುತ್ತಿದೆ. ಅದರಲ್ಲೂ ಕಳೆದ 4–5 ಗಣತಿ ವೇಳೆ ಹುಲಿಗಳ ಸಂಖ್ಯೆ ಹೆಚ್ಚಾಗಿರುವುದು ಕಂಡು ಬಂದಿದೆ. ಆದರೂ, ಹುಲಿಗಳ ಸಂರಕ್ಷಣೆ ಸವಾಲಾಗಿ ಪರಿಣಮಿಸುತ್ತಿದೆ ಎಂದರು.

ದೊಡ್ಡಬೆಕ್ಕುಗಳ ಪಟ್ಟಿಯಲ್ಲಿ ಹುಲಿಯೊಂದಿಗೆ ಚಿರತೆಯೂ ಸೇರಿದ್ದು, ಇಂದು ಚಿರತೆಗಳು ಎಲ್ಲೆಡೆ ಕಂಡು ಬರುತ್ತಿವೆ. ಹುಲಿ, ಚಿರತೆ ಸಂಖ್ಯೆಗಳ ಹೆಚ್ಚಳವೂ ಅನೇಕ ಸವಾಲುಗಳನ್ನು ಸೃಷ್ಟಿಸಿದೆ. ಕೆಲವೆಡೆ ದೊಡ್ಡಬೆಕ್ಕುಗಳ ಸಂಖ್ಯೆ ಹೆಚ್ಚಳದಿಂದಾಗಿ ಮಾನವ ಪ್ರಾಣಿ ಸಂಘರ್ಷ ಉಂಟಾಗುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಪ್ರಸ್ತುತ ಸಂದರ್ಭದಲ್ಲಿ ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಕೋಲಾರ ಮತ್ತು ಬಳ್ಳಾರಿ ಸೇರಿದಂತೆ ಹಲವು ಜಿಲ್ಲೆಗಳಲ್ಲಿ (ಚಿರತೆ) ಮಾನವ–ಪ್ರಾಣಿ ಸಂಘರ್ಷದ ಘಟನೆಗಳು ಹೆಚ್ಚಾಗಿವೆ. ಈ ಬೆಳವಣಿಗೂ ಅರಣ್ಯ ಇಲಾಖೆಗೆ ಸವಾಲಾಗಿದೆ ಎಂದು ತಿಳಿಸಿದರು.

ಹುಲಿಗಳ ಸಂಖ್ಯೆ ಹೆಚ್ಚಾಗುತ್ತಿರುವ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಸಾಂಸ್ಕೃತಿಕ ನಗರಿ ಮೈಸೂರು ನಗರದ ಹೊರವಲಯದಲ್ಲಿ 3–4 ಹುಲಿಗಳು ಸಂಚರಿಸುತ್ತಿರುವುದನ್ನು ಗಮನಿಸಿದ್ದೇವೆ. ಆ ಹುಲಿಗಳ ಚಲನವಲನವನ್ನು ಅರಣ್ಯ ಇಲಾಖೆ ಗುರುತಿಸಿದೆ. ಇತ್ತೀಚೆಗೆ ಮೈಸೂರು –ನಂಜನಗೂಡು ಮುಖ್ಯ ರಸ್ತೆಯ ಮಂಡಕಳ್ಳಿ ವಿಮಾನ ನಿಲ್ದಾಣದ ಬಳಿ ರಸ್ತೆ ಅಪಘಾತಕ್ಕೆ ಒಳಗಾಗಿ ಒಂದು ಹುಲಿ ಮೃತಪಟ್ಟಿತ್ತು. ಇದೀಗ ಆ ನಾಲ್ಕು ಹುಲಿಗಳಲ್ಲಿ ಮೈಸೂರು ಹೊರವಲಯ ಒಂದು ಹಾಗೂ ಶ್ರೀರಂಗಪಟ್ಟಣ ಬಳಿ ಒಂದು ಕಾಣಿಸಿಕೊಂಡಿದೆ. ಅವುಗಳ ಚಲನವಲನದ ಮೇಲೂ ನಿಗಾ ಇಟ್ಟು ರಕ್ಷಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಮಾನವ ಮತ್ತು ಪ್ರಾಣಿ ಸಂಘರ್ಷಕ್ಕೆ ಒಳಪಟ್ಟ ಪ್ರಾಣಿಗಳನ್ನು ರಕ್ಷಣೆ ಮಾಡಿದಾಗ ಅವುಗಳನ್ನು ವೈಜ್ಞಾನಿಕವಾಗಿ ಸ್ಥಳಾಂತರ ಮಾಡುವ ಪ್ರಕ್ರಿಯೆ ಬಗ್ಗೆಯೂ ಚರ್ಚೆ ನಡೆಯುತ್ತಿರುತ್ತದೆ. ಉದಾಹರಣೆಗೆ ನಗರ ಪ್ರದೇಶದಲ್ಲಿ ಸೆರೆ ಹಿಡಿದ ಚಿರತೆಯನ್ನು ಅರಣ್ಯ ಪ್ರದೇಶದಲ್ಲಿ ಬಿಡುಗಡೆ ಮಾಡುವುದರಿಂದಲೂ ಕೆಲ ಸಮಸ್ಯೆ ಸೃಷ್ಟಿಯಾಗಬಹುದು. ಈ ಹಿನ್ನೆಲೆಯಲ್ಲಿ ರಕ್ಷಿಸಲ್ಪಟ್ಟ ಪ್ರಾಣಿಗಳ ಸ್ಥಳಾಂತರ, ರಕ್ಷಣಾ ಕಾರ್ಯದಲ್ಲಿ ಅನುಸರಿಸಬೇಕಾದ ಕ್ರಮ ಕುರಿತಂತೆ ಹಾಗೂ ಪ್ರಾಣಿಗಳ ಸ್ಥಳಾಂತರದ ವಿಷಯದಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಸೆಕ್ಷನ್ 11ರಲ್ಲಿ ಮಾಡಬೇಕಾದ ತಿದ್ದುಪಡಿ ಅಥವಾ ಸೇರಿಸಬೇಕಾದ ವಿಷಯಗಳ ಬಗ್ಗೆ ಚರ್ಚಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.



ಕಾರ್ಯಕ್ರಮದ ಅಂಗವಾಗಿ ಡೆಹ್ರಾಡೂನ್‌ನ ಭಾರತೀಯ ವನ್ಯಜೀವಿ ಸಂಸ್ಥೆಯ (ಡಬ್ಲ್ಯುಐಐ) ವಿಜ್ಞಾನಿ ಡಾ.ಖಮರ್ ಖುರೇಷಿ ಪ್ರಾತ್ಯಕ್ಷಿಕೆ ಮೂಲಕ ವಿಷಯ ಮಂಡಿಸಿ, ಪ್ರಸ್ತುತ ಸಂದರ್ಭದಲ್ಲಿ ದೊಡ್ಡ ಬೆಕ್ಕುಗಳು ಮತ್ತು ಅವುಗಳ ಸಂರಕ್ಷಣೆಯ ಬಗ್ಗೆ ಗಮನಹರಿಸಿದಂತೆ ವನ್ಯಜೀವಿಗಳ ಕಾರಿಡಾರ್‌ಗಳ ಸಂರಕ್ಷಣೆಯ ಬಗ್ಗೆಯೂ ಚಿಂತಿಸಬೇಕಾಗಿದೆ. ದೊಡ್ಡಬೆಕ್ಕು ಸೇರಿದಂತೆ ವನ್ಯಜೀವಿಗಳಿಗೆ ಕಾರಿಡಾರ್ ಚೆನ್ನಾಗಿದ್ದರೆ ಅವುಗಳಿಗೆ ರಕ್ಷಣೆ ಒದಗಿಸಿದಂತಾಗುತ್ತದೆ. ಅನೇಕ ಕಾರಣ ದಿಂದ ಕಾರಿಡಾರ್‌ಗಳಿಗೆ ಅಡಚಣೆ ಉಂಟಾಗಿರುವುದರಿಂದ ಮಾನವ–ಪ್ರಾಣಿ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಂತಾಗಿದೆ. ದೊಡ್ಡಬೆಕ್ಕು ಪಟ್ಟಿಗೆ ಸೇರುವ ಪ್ರಾಣಿಗಳ ಸಂಖ್ಯೆ ವೃದ್ಧಿಯಾದರೆ ಅರಣ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ಯಾವೆಲ್ಲಾ ಉಪಯೋಗವಿದೆ ಎಂಬುದನ್ನು ಮನವರಿಕೆ ಮಾಡಿಕೊಡುವ ಅಗತ್ಯವಿದೆ ಎಂದರು.

ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಡಾ.ಸುನಿಲ್ ಪನ್ವಾರ್ ಮಾತನಾಡಿ, ವಿಚಾರ ಸಂಕಿರಣವು ಮಾನವ–ಪ್ರಾಣಿ ಸಂಘರ್ಷ ತಡೆ, ಕಾರ್ಯಾಚರಣೆಯಲ್ಲಿ ಅನುಸರಿಸಬೇಕಾದ ವೈಜ್ಞಾನಿಕ ಕ್ರಮ, ಪರಿಸರ ನಿರ್ವಹಣೆ ಮತ್ತು ದೊಡ್ಡ ಬೆಕ್ಕು ಸಂರಕ್ಷಣೆ ಕುರಿತಂತೆ ಮಹತ್ವ ಪಡೆದುಕೊಂಡಿದೆ ಎಂದರು.

ಕಾರ್ಯಕ್ರಮದಲ್ಲಿ ಮೈಸೂರು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ. ಮಹೇಶ್ ಕುಮಾರ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ರಾಜ್ಯದ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳು, ವಿವಿಧ ಹುಲಿ ಸಂರಕ್ಷಿತ ಪ್ರದೇಶಗಳ ನಿರ್ದೇಶಕರು, ಪಶುವೈದ್ಯರು ಪಾಲ್ಗೊಂಡಿದ್ದಾರೆ. ಜು.30ರಂದು ಮಧ್ಯಾಹ್ನ 2 ಗಂಟೆಗೆ ವಿಚಾರ ಸಂಕಿರಣದ ಸಮಾರೋಪ ಸಮಾರಂಭ ಜರುಗಲಿದೆ.

ಕಾವೇರಿ ಜಲಾನಯನ ಅಣೆಕಟ್ಟೆಗಳು ಭರ್ತಿಯಾಗಿರುವುದರಿಂದ

ಕಾವೇರಿ ಬಿಕ್ಕಟ್ಟು ಉದ್ಭವಿಸದು

ಕಬಿನಿಗೆ ಬಾಗಿನ ಅರ್ಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ



ಬಾಗಿನ ಕಾರ್ಯಕ್ರಮಕ್ಕಾಗಿ ಅಲಂಕೃತಗೊಂಡಿದ್ದ ಕಬಿನಿ ಜಲಾಶಯ.



ಸುದ್ದಿಗಾರರೊಂದಿಗೆ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ಹೆಚ್.ಡಿ.ಕೋಟೆ, ಜು.29– ಈ ಬಾರಿ ವಾಡಿಕೆಗಿಂತ ಅತೀ ಹೆಚ್ಚು ಮಳೆಯಾಗಿ ಕಬಿನಿ ಜಲಾಶಯ ಸಂಪೂರ್ಣ ಭರ್ತಿಯಾಗಿ ಕಪಿಲಾ ಜಲಾನಯನ ಭಾಗದ ರೈತರ ಮುಖದಲ್ಲಿ ಸಂತಸ ಮೂಡಿಸಿದೆ. ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ಜುಲೈನಲ್ಲಿ ತಮಿಳುನಾಡಿಗೆ 40 ಟಿಎಂಸಿ ನೀರು ಬಿಡಬೇಕಿತ್ತು. ಆದರೆ ಈ ಬಾರಿ ಕಾವೇರಿ ಜಲಾನಯನ ಪ್ರದೇಶದಿಂದ 83 ಟಿಎಂಸಿ ನೀರನ್ನು ಬಿಡಲಾಗಿದೆ. ಹಾಗಾಗಿ ತಮಿಳುನಾಡು ಮತ್ತು ಕರ್ನಾಟಕದ ನಡುವೆ ಕಾವೇರಿ ನೀರಿನ ಬಿಕ್ಕಟ್ಟು ಉದ್ಭವಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಬೀಚನಹಳ್ಳಿ ಗ್ರಾಮದಲ್ಲಿರುವ ಕಬಿನಿ ಜಲಾಶಯಕ್ಕೆ ಸೋಮವಾರ ಸಚಿವ ಸಂಪುಟದ ಸಹೋದ್ಯೋಗಿಗಳೊಂದಿಗೆ ಆಗಮಿಸಿ ಬಾಗಿನ ಅರ್ಪಿಸಿ ಮಾತನಾಡಿದ ಅವರು, ಕಾವೇರಿ ಜಲಾನಯನ ಪ್ರದೇಶದ ಕೆಆರ್‌ಎಸ್, ಕಬಿನಿ, ಹೇಮಾವತಿ ಹಾಗೂ ಹಾರಂಗಿ ಜಲಾಶಯಗಳು ಭರ್ತಿ ಆಗಿರುವುದರಿಂದ 66 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಅನುಕೂಲವಾಗಿದೆ. ಅಲ್ಲದೇ ಈ ಬಾರಿ ರಾಜ್ಯದಲ್ಲಿ ಉತ್ತಮ ಮಳೆಯಾಗಿರುವುದರಿಂದ ರೈತರು ಬೆಳೆ ಬೆಳೆಯಲು ಅನುಕೂಲವಾಗಿದ್ದು, ಜನರು ಸಂತೃಪ್ತರಾಗಿದ್ದಾರೆ ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಕಪಿಲಾ ನದಿ ನಮ್ಮೆಲ್ಲರ ಗೌರವವನ್ನು ಉಳಿಸಿದೆ. ಹಾಗಾಗಿ ಸರ್ಕಾರದ ಪರವಾಗಿ ವಂದನೆಗಳು. ಕಾವೇರಿ ಬಿಕ್ಕಟ್ಟು ಉಲ್ಬಣಿಸಿದಾಗ ಕಬಿನಿ ಜಲಾಶಯದಿಂದ ಅತೀ ಹೆಚ್ಚು ನೀರನ್ನು ಬಿಡುವ ಮೂಲಕ ನಮ್ಮ ಗೌರವ ಕಾಪಾಡಿದೆ ಎಂದರು.

ಶಾಸಕ ಅನಿಲ್ ಮಾತನಾಡಿ, ತಾಲೂಕಿನ ತಾರಕ ಜಲಾಶಯ ರೈತರ ಜೀವನಾಡಿಯಾಗಿದ್ದು, 20 ಸಾವಿರಕ್ಕೂ ಹೆಚ್ಚು ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸುವ ಜಲಾಶಯವಾಗಿದೆ. ಇದರ ವಿತರಣಾ ನಾಲೆಗಳು ಹಾಳಾಗಿದ್ದು, ರೈತರಿಗೆ ಸಮರ್ಪಕ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ವಿತರಣಾ ನಾಲೆಗಳ ಅಭಿವೃದ್ಧಿಗೆ ಅವಶ್ಯಕತೆ ಇರುವ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

ಕಬಿನಿ ಜಲಾಶಯ ನಿರ್ಮಾಣ ಸಂದರ್ಭ ಬಂದ ಕೂಲಿ ಕಾರ್ಮಿಕರು ಜಲಾಶಯದ ಮುಂಭಾಗದ ಬಿದರಹಳ್ಳಿ ಸರ್ಕಲ್‌ನಲ್ಲಿ ನಿರ್ಮಿಸಿದ ವಸತಿ ಗೃಹಗಳಲ್ಲಿ ಕಳೆದ 60 ವರ್ಷಗಳಿಂದ ಕೂಲಿ ಮಾಡಿಕೊಂಡು ವಾಸಿಸುತ್ತಿದ್ದಾರೆ. ಆದರೆ ಜಲಾಶಯ ಭರ್ತಿಯಾದಾಗಲೆಲ್ಲಾ ನದಿಗೆ ನೀರು ಹರಿಸಿದ ವೇಳೆ ವಸತಿ ಗೃಹಗಳು ಜಲಾವೃತವಾಗಿ 41 ಕುಟುಂಬಗಳು ನಿರಾಶ್ರಿತರಾಗುತ್ತಿದ್ದಾರೆ. ಹೀಗಾಗಿ ಅವರಿಗೆ ಜೀವನ ಭದ್ರತೆ ಇಲ್ಲದಂತಾಗಿದೆ. ಇದೀಗ ಅವರಿಗೆ ಸರ್ಕಾರ ಜೀವನ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಹಕ್ಕುಪತ್ರ ನೀಡಬೇಕು ಎಂದ ಅವರು ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸಲು ಭೂಮಿ ನೀಡಲಾಗಿದೆ. ಆದರೆ ಮನೆ ನಿರ್ಮಿಸಲು ಸಾಧ್ಯವಾಗದೇ ಅವರು ಸಂಕಷ್ಟದಲ್ಲಿದ್ದಾರೆ. ಹೀಗಾಗಿ ಅವರಿಗೆ ಗುಂಪು ಯೋಜನೆಯಡಿ ಮನೆ ನಿರ್ಮಿಸಿ ಕೊಡಲು ಸರ್ಕಾರ ಮುಂದಾಗಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ತಾಲೂಕಿನ ಪ್ರಮುಖ ರಸ್ತೆಗಳು ಮಳೆಯಿಂದಾಗಿ ಹದಗೆಟ್ಟಿದ್ದು, ರಸ್ತೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಬೇಕು ಎಂದು ಸಹ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು.

ಇದಕ್ಕೂ ಮುನ್ನ ಮಧ್ಯಾಹ್ನ 3 ಗಂಟೆಗೆ ಆಗಮಿಸಬೇಕಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸಂಜೆ 4.40ಕ್ಕೆ ಆಗಮಿಸಿ ಮೈಸೂರಿನ ಚಾಮುಂಡೇಶ್ವರಿ ದೇವಸ್ಥಾನದ ಪ್ರಧಾನ ಅರ್ಚಕ ಶಶಿಶೇಖರ್ ದೀಕ್ಷಿತ್ ಹಾಗೂ ತಾಲೂಕಿನ ಕಿತ್ತೂರು ಗ್ರಾಮದ ರವಿರಾಮೇಶ್ವರ ದೇವಸ್ಥಾನದ ಅರ್ಚಕ ಭಾಸ್ಕರ್ ನೇತೃತ್ವದಲ್ಲಿ ಬಾಗಿನ ಅರ್ಪಿಸಿದರು.

ಈ ವೇಳೆ ಸಚಿವರಾದ ಡಾ. ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಾಸಕರಾದ ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ರವಿಶಂಕರ್, ದರ್ಶನ್, ಗಣೇಶ ಪ್ರಸಾದ್, ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ಮುಡಾ ಅಧ್ಯಕ್ಷ ಕೆ.ಮರಿಗೌಡ, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಮೈಸೂರು ನಗರ ಪೊಲೀಸ್ ಕಮೀಷನರ್ ಸೀಮಾ ಲಾಟ್ಕರ್, ನೀರಾವರಿ ಇಲಾಖೆ ವ್ಯವಸ್ಥಾಪಕ ನಿರ್ದೇಶಕ ಕೆ.ಮಹೇಶ್, ಮುಖ್ಯ ಇಂಜಿನಿಯರ್ ಆರ್.ಎಲ್.ವೆಂಕಟೇಶ್, ಅಧೀಕ್ಷ ಇಂಜಿನಿಯರ್ ಮಹೇಶ್, ಕಾರ್ಯಪಾಲಕ ಇಂಜಿನಿಯರ್ ಚಂದ್ರಶೇಖರ್, ಸಹಾಯಕ ಕಾರ್ಯಪಾಲಕ ಅಭಿಯಂತರಗಳಾದ ಗಣೇಶ್, ಉಷಾ, ರಾಮೇಗೌಡ, ಸಹಾಯಕ ಇಂಜಿನಿಯರ್‌ಗಳಾದ ರಮೇಶ್ ಬಾಬು, ವಿಶ್ವನಾಥ್, ಎಎಸ್ಪಿ ಡಾ.ನಂದಿನಿ, ನಾಗೇಶ್, ಡಿವೈಎಸ್ಪಿ ಗೋಪಾಲಕೃಷ್ಣ, ರಘು, ಸಿಪಿಐ ಲಕ್ಷ್ಮೀಕಾಂತ್, ಶಬ್ಬೀರ್ ಹುಸೇನ್, ಮುನಿಯಪ್ಪ, ಸಂತೋಷ್ ಕಶ್ಯಪ್, ಕುರುಬ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಪ್ಪ ಕೋಟೆ, ಮುಖಂಡರಾದ ಸತೀಶ್‌ಗೌಡ, ಹೆಚ್.ಸಿ.ನರಸಿಂಹಮೂರ್ತಿ, ನಯಾಜ್, ರಾಜು, ಸೋಮೇಶ್ ಇದ್ದರು.

ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಅಂಗವಾಗಿ

ನಾಳೆ ಬೃಹತ್ ಉದ್ಯೋಗ ಮೇಳ, ರಕ್ತದಾನ ಶಿಬಿರ



ಬೃಹತ್ ಉದ್ಯೋಗ ಮೇಳ, ಆರೋಗ್ಯ ಮತ್ತು ರಕ್ತದಾನ ಶಿಬಿರದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ನಂಜನಗೂಡು, ಜು.29– ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಸ್ಮರಣಾರ್ಥ ಅವರ ಅಭಿಮಾನಿ ಬಳಗದಿಂದ ಜು.31ರಂದು ಬೆಳಗ್ಗೆ 9.30 ರಿಂದ ಸಂಜೆ 5ರವರೆಗೆ ನಗರದ ಮಂಗಳ ಮಂಟಪದಲ್ಲಿ ಬೃಹತ್ ಉದ್ಯೋಗ ಮೇಳ ಹಾಗೂ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಆರೋಗ್ಯ ಮತ್ತು ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್.ಧ್ರುವನಾರಾಯನ್ ಅವರು 2 ಬಾರಿ ಸಂಸದರಾಗಿ ಈ ಭಾಗದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದಾರೆ. ಜೊತೆಗೆ ನಂಜನಗೂಡು ಕ್ಷೇತ್ರದ ಜನರೊಂದಿಗೆ ನಿಕಟ ಸಂಪರ್ಕ ಹೊಂದುವ ಮೂಲಕ ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಹೀಗಾಗಿ ಅವರು ಕ್ಷೇತ್ರದ ಜನರ ಸೇವೆ ಮಾಡುವ ಹಂಬಲದೊಂದಿಗೆ ಚುನಾವಣೆಗೂ ತಯಾರಿ ನಡೆಸಿದ್ದರು ಎಂದರು.

ಧ್ರುವನಾರಾಯಣ್ ಅವರು ಎಂದೂ ಆಡಂಬರವಾಗಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರಲಿಲ್ಲ. ಬದಲಿಗೆ ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ ಆಚರಣೆ ಮಾಡುತ್ತಿದ್ದರು. ಮುಖ್ಯವಾಗಿ ಯುವಕರಿಗೆ ಉದ್ಯೋಗ ಕಲ್ಪಿಸುವುದು ಅವರ ಮುಖ್ಯ ಗುರಿಯಾಗಿತ್ತು. ಆದ್ದರಿಂದ ಅವರು 2022ರಲ್ಲಿ ತಮ್ಮ ಹುಟ್ಟುಹಬ್ಬ ಆಚರಿಸಿದ ವೇಳೆ ರಕ್ತದಾನ ಶಿಬಿರ, ಉದ್ಯೋಗ ಮೇಳ ಆಯೋಜಿಸಲಾಗಿತ್ತು. ಕಳೆದ ವರ್ಷ ಅವರು ನಮ್ಮನ್ನಗಲಿದ ನಂತರವೂ ರಕ್ತದಾನ ಶಿಬಿರ, ಉದ್ಯೋಗ ಮೇಳ ಆಯೋಜಿಸಲಾಗಿತ್ತು. ಆ ವೇಳೆ ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ಸುಮಾರು 517ಕ್ಕೂ ಹೆಚ್ಚಿನ ಜನರಿಗೆ ಉದ್ಯೋಗ ಲಭಿಸಿದೆ ಎಂದರು.

ಈ ಬಾರಿಯೂ ನೆಸ್ಲೆ, ಜುಬಿಲೆಂಟ್, ಏಷಿಯನ್ ಪೇಂಟ್ಸ್, ಆಟೋಲಿವ್, ಯುಬಿ ಸೇರಿದಂತೆ ಸುಮಾರು 125ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, ಮಾನವ ಸಂಪನ್ಮೂಲ ಅಧಿಕಾರಿಗಳು ಸ್ಥಳದಲ್ಲಿ ಖುದ್ದಾಗಿ ಹಾಜರಿದ್ದು ನಿಮ್ಮ ವಿದ್ಯಾರ್ಹತೆಗೆ ಅನುಗುಣವಾಗಿ ಸ್ಥಳದಲ್ಲೇ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಪದವೀಧರರು ಮತ್ತು ಯುವಕರು, ಉದ್ಯೋಗದ ಆಕಾಂಕ್ಷಿಗಳು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ನಗರದ ಬೈಪಾಸ್ ರಸ್ತೆಯಲ್ಲಿರುವ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ಲಯನ್ಸ್ ಸಂಸ್ಥೆ ಸಹಯೋಗ ದೊಂದಿಗೆ ಉಚಿತ ಆರೋಗ್ಯ ತಪಾಸಣೆ, ಕಣ್ಣಿನ ತಪಾಸಣೆ, ರಕ್ತದಾನ ಶಿಬಿರ ಆಯೋಜನೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು. ಉದ್ಯೋಗ ಮೇಳದ ಆಯೋಜಕ ಪ್ರಕೃತ್ ಮಾತನಾಡಿ, ಉದ್ಯೋಗ ಮೇಳದಲ್ಲಿ ಚಾಮರಾಜನಗರದ 7 ಕಾರ್ಖಾನೆಗಳು, ನಂಜನಗೂಡು, ತಾಂಡ್ಯ, ಅಡಕನಹಳ್ಳಿ ಹುಂಡಿ ಕೈಗಾರಿಕಾ ಪ್ರದೇಶದಲ್ಲಿರುವ ಸ್ಥಳೀಯ ಕಾರ್ಖಾನೆಗಳು ಮತ್ತು ನೂರಾರು ಎಂಎನ್‌ಸಿ ಕಂಪನಿಗಳು ನೋಂದಣಿ ಮಾಡಿಕೊಂಡಿವೆ. ಐಟಿಐ, ಡಿಪ್ಲೊಮಾ, ಇಂಜಿನಿಯರಿಂಗ್ ಅಲ್ಲದೇ ಎಸ್‌ಎಸ್‌ಎಲ್‌ಸಿ, ಪಿಯುಸಿ, ಯಾವುದೇ ಪದವಿ ಪಡೆದಿರುವ ನಿರುದ್ಯೋಗಿಗಳ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗ ಲಭಿಸಲಿದೆ. ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಹುಲ್ಲಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠ ನಾಯಕ, ಮುಖಂಡರಾದ ಮಹೇಂದ್ರ ಲೋಕೇಶ್ ಇದ್ದರು.

ಹುಣಸೂರಲ್ಲಿ ಕಾರ್ಗಿಲ್ ವಿಜಯೋತ್ಸವ



ಕಾರ್ಯಕ್ರಮದಲ್ಲಿ ನಿವೃತ್ತ ಯೋಧರನ್ನು ಸನ್ಮಾನಿಸಲಾಯಿತು.

ಹುಣಸೂರು, ಜು.29– ದೇಶ ಸೇವೆಯಲ್ಲಿ ಎಷ್ಟೇ ಕಠಿಣ ಸಮಸ್ಯೆ ಬಂದರೂ ಅದನ್ನು ನಾವು ಶ್ರದ್ಧೆಯಿಂದ ನಿರ್ವಹಿಸುತ್ತಿದ್ದೇವು ಎಂದು ಕಾರ್ಗಿಲ್ ಯುದ್ಧದಲ್ಲಿ ಜಯಗಳಿಸಿದ ನೆನಪನ್ನು ಮಾಜಿ ಸೈನಿಕ ಕುಡಿನೀರುಮುದ್ದನಹಳ್ಳಿ ಮಂಜುನಾಥ್ ಹಂಚಿಕೊಂಡರು.

ಹುಣಸೂರು ರೋಟರಿ ಕ್ಲಬ್ ಮತ್ತು ಚೈತನ್ಯ ಬಳಗದಿಂದ ಆಯೋಜಿಸಿದ್ದ 25ನೇ ಕಾರ್ಗಿಲ್ ವಿಜಯ ದಿವಸ್ ಕಾರ್ಯಕ್ರಮ ದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಅಂದಿನ ಗೆಲುವು ಭಾರತದ ಐತಿಹಾಸಿಕ ಗೆಲುವಾಗಿತ್ತು. ಅಂದಿನ ನೂರಾರು ಹುತಾತ್ಮರ ಹೋರಾಟದ ಫಲ. ಇಂದು ಭಾರತೀಯರು ನೆಮ್ಮದಿ ಬದುಕು ಸಾಧಿಸಲು ಸಾಧ್ಯವಾಗಿದೆ ಎಂದರು.

ಮಾಜಿ ಸೈನಿಕ ಲೂಯಿಸ್ ಪೆರೇರಾ ಮಾತನಾಡಿ, ಕಾರ್ಗಿಲ್ ವಿಜಯೋತ್ಸವ ನೂರಾರು ದಿನಗಳ ಫಲಶೃತಿಯಾಗಿತ್ತು. ಪರ್ವತಗಳ ನಡುವೆ ಜೀವಿಸುತ್ತಿದ್ದ ನಮಗೆ ಕಮಾಂಡರ್ ಲೀಡರ್ ಸೂಚಿಸುತ್ತಿದ್ದ ಎಲ್ಲಾ ಸೂಕ್ಷ್ಮತೆಯನ್ನು ಚಾಚೂ ತಪ್ಪದೇ ಪಾಲಿಸುತ್ತಿದ್ದೇವು. ಹಸಿವು ಆಯಾಸ ನಮ್ಮ ಬಳಿ ಸುಳಿಯುತ್ತಿರಲಿಲ್ಲ. ನಮಗೆ ಗೆಲುವಿನ ಹಸಿವು ಮಾತ್ರ ಕಂದಕಗಳ ನಡುವೆಯೂ ಗೋಚರಿಸುತ್ತಿತ್ತು ಎಂದು ತಮ್ಮ ರೋಚಕ ಅನುಭವ ತಿಳಿಸಿದರು. ನಗರ ಪೊಲೀಸ್ ಇಲಾಖೆಯ ಮಂಜುನಾಥ್ ಮಾತನಾಡಿ, ಶಿಸ್ತು ಎಂದರೆ ಏನು ಎಂದು ಕಲಿಸಿದ್ದು ಸೈನಿಕರು. ವಿಜಯೋತ್ಸವಕ್ಕೆ ಕಾರಣರಾದ ಸೈನಿಕರು ಮತ್ತು 572 ವೀರಯೋಧರು ನಮ್ಮ ದೇಶಕ್ಕೆ ಬಲಿದಾನ ನೀಡಿ, ಹುತಾತ್ಮರಾದವರನ್ನು ಮಾತ್ರ ನಾವೆಂದೂ ಮರೆಯಬಾರದು ಎಂದರು.

ಕಾರ್ಯಕ್ರಮದಲ್ಲಿ ಸಹಾಯಕ ಗೌರ್ನರ್ ಆನಂದ್.ಆರ್., ವಲಯ 6ರ ಸೇನಾನಿ ಪಾಂಡುಕುಮಾರ್, ರೊ.ಅಧ್ಯಕ್ಷ ಪ್ರಸನ್ನ. ಕೆ.ಪಿ., ಹಿರಿಯ ರೋಟರಿ ಸದಸ್ಯ ರಾಜಶೇಖರ್, ಡಾ.ಬಸವರಾಜ, ಜಿ.ವಿ.ಶ್ರೀನಾಥ್, ಶ್ಯಾಮ್, ಸಂತೋಷ್ ಕುಮಾರ್, ಚೈತನ್ಯ ಬಳಗದ ರೇಣುಕಾ ಪ್ರಸಾದ್, ನಟರಾಜ್, ಲಕ್ಷ್ಮಿಕಾಂತ್, ರೊ ಕಾರ್ಯದರ್ಶಿ ಹೆಚ್.ಆರ್.ಕೆ ಇದ್ದರು.

ಕೊಯಮುತ್ತೂರು ಕಾಲೋನಿ ಪಿಎಸಿಎಸ್ ಸಿಇಓಗೆ ಬೀಳ್ಕೊಡುಗೆ

ಹುಣಸೂರು, ಜು.29– ನಿವೃತ್ತರಾದ ತಾಲೂಕಿನ ಕೊಯಮುತ್ತೂರು ಕಾಲೋನಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಸಿ.ಎಸ್. ಮನೋಹರ್ ಅವರನ್ನು ಸಂಘದ ಆವರಣದಲ್ಲಿ ಸನ್ಮಾನಿಸಿ, ಬೀಳ್ಕೊಡಲಾಯಿತು.

ಸಂಘದ ನಿರ್ದೇಶಕ ಉದ್ಯಮಿ ಹೆಚ್.ಪಿ. ಅಮರನಾಥ್ ಮಾತನಾಡಿ, ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಯಾಗಿ ಮನೋಹರ್ ಅವರು ಸಂಘದ ಆಡಳಿತ ಮಂಡಳಿ, ಸಹಕಾರ ಇಲಾಖೆ ಅಧಿಕಾರಿಗಳು ಹಾಗೂ ನೌಕರರ ಸಹಕಾರದೊಂದಿಗೆ ರೈತರಿಗೆ ಸರ್ಕಾರದಿಂದ ಸಿಗಬಹುದಾದ ಎಲ್ಲಾ ಸವಲತ್ತುಗಳನ್ನು ತಲುಪಿಸಿ ಸಂಘದ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಇವರ ಶಿಸ್ತು, ಸಾಮಾಜಿಕ ಬದ್ಧತೆ, ಕಾರ್ಯವೈಖರಿ ಉತ್ತಮವಾಗಿದ್ದು ಇತರರಿಗೆ ಆದರ್ಶವಾಗಿದ್ದಾರೆ ಎಂದರು. ಬೀಳ್ಕೊಡುಗೆ ಸ್ವೀಕರಿಸಿ ಮಾತನಾಡಿದ ಮನೋಹರ್, ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ರೈತರಿಗೆ ತಲುಪಿಸಿದ ತೃಪ್ತಿ ನನಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎ.ಶಿವಲಿಂಗಪ್ಪ ವಹಿಸಿದ್ದರು. ಈ ವೇಳೆ ಸಂಘದ ಅಧ್ಯಕ್ಷ ಎ.ಶಿವಲಿಂಗಪ್ಪ, ಉಪಾಧ್ಯಕ್ಷ ವಿ.ರವಿ, ನಿರ್ದೇಶಕರಾದ ಚಿನ್ನಸ್ವಾಮಿ, ರಾಜೇಂದ್ರ, ಮಹದೇವ್, ವೆಳ್ಳಂಗಿರಿ, ವಸಂತಮ್ಮ, ಗೌರಮ್ಮ ಮತ್ತು ಆಡಳಿತ ವರ್ಗದವರಿದ್ದರು.



ಕಾರ್ಯಕ್ರಮದಲ್ಲಿ ಸಿ.ಎಸ್.ಮನೋಹರ್ ಅವರನ್ನು ಸನ್ಮಾನಿಸಲಾಯಿತು.

ಹೊಸಅಗ್ರಹಾರ ಗ್ರಾಪಂಗೆ ಮಹದೇವಮ್ಮ ಅಧ್ಯಕ್ಷೆ



ಹೊಸ ಅಗ್ರಹಾರ ಗ್ರಾಪಂ ಅಧ್ಯಕ್ಷೆಯಾಗಿ ಮಹದೇವಮ್ಮ ಅವಿರೋಧವಾಗಿ ಆಯ್ಕೆಯಾದರು.

ಭೇರ್ಯ, ಜು.29– ಹೊಸ ಅಗ್ರಹಾರ ಗ್ರಾಪಂ ಅಧ್ಯಕ್ಷೆಯಾಗಿ ಮಹದೇವಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಹೆಚ್.ಎಂ.ರಾಮಚಂದ್ರ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಸೋಮವಾರ ನಡೆದ ಚುನಾವಣೆಯಲ್ಲಿ ಮಹದೇವಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಬಿಇಓ ಆರ್.ಕೃಷ್ಣಪ್ಪ ಪ್ರಕಟಿಸಿದರು. ಪಿಡಿಓ ಶಲ್ಯ ಹಾಗೂ ಕಾರ್ಯದರ್ಶಿ ದೇವಯ್ಯ ಸಹಕಾರ ನೀಡಿದರು. ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ಆಶಾರಾಣಿ, ಸದಸ್ಯರಾದ ಡಿ.ಎಸ್.ಯೋಗೇಶ್, ಬೇಬಿ, ಪುಷ್ಪ, ಸೌಮ್ಯ, ಸುಕನ್ಯ, ಜಯಲಕ್ಷ್ಮಿ, ಮಂಜೇಗೌಡ, ಶೇಖರ್, ಹೆಚ್.ಎಂ.ರಾಮಚಂದ್ರ, ಮಲ್ಲಿಕಾರ್ಜುನ ಭಾಗವಹಿಸಿದ್ದರು.

ನೂತನ ಅಧ್ಯಕ್ಷೆ ಮಹದೇವಮ್ಮ ಮಾತನಾಡಿ, ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ಕೊಡುತ್ತೇನೆ. ಮೂಲ ಸೌಕರ್ಯ ಕೊರತೆ ಇರುವ ಗ್ರಾಮಗಳಲ್ಲಿ ನರೇಗಾ ಯೋಜನೆ ಮೂಲಕ ಕಾಮಗಾರಿ ಕೈಗೊಳ್ಳಲಾಗುವುದು. ಅಲ್ಲದೇ ಪಕ್ಷಾತೀತವಾಗಿ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು. ಇದೇ ವೇಳೆ ನೂತನ ಅಧ್ಯಕ್ಷೆಗೆ ಗ್ರಾಮಸ್ಥರು, ಮುಖಂಡರು ಹಾರ ಹಾಕಿ ಅಭಿನಂದಿಸಿದರು. ಮುಖಂಡರಾದ ಸಹಕಾರ ಸಂಘದ ಮಾಜಿ ಅಧ್ಯಕ್ಷ ಮಂಜೇಗೌಡ, ನಿರ್ದೇಶಕ ಸ್ವಾಮಿಗೌಡ, ತಾ. ಭೂ ನ್ಯಾಯ ಮಂಡಳಿ ಸದಸ್ಯ ಸ್ವಾಮಿ, ಸಿದ್ದಪ್ಪಶೆಟ್ಟಿ, ರಾಜೇಗೌಡ, ದೊಡ್ಡೇಗೌಡ, ಸುರೇಶ್, ಚಿಕ್ಕಸ್ವಾಮಿ, ಲಕ್ಷ್ಮಣೇಗೌಡ, ಚಂದು, ಡೈರಿ ಮಹೇಶ್, ಟಿ.ಸಿ. ಮಂಜು, ಸಿರಿ, ರಾಮಚಂದ್ರ, ಯತಿರಾಜ್, ದೇವೇಂದ್ರ ಇದ್ದರು.


ಶಶಿಕಲಾ ನೆಲ್ಲಿತಾಳಪುರ ಗ್ರಾಪಂ ಉಪಾಧ್ಯಕ್ಷೆ



ನೆಲ್ಲಿತಾಳಪುರ ಗ್ರಾಪಂ ಉಪಾಧ್ಯಕ್ಷೆಯಾಗಿ ಶಶಿಕಲಾ ಆಯ್ಕೆಯಾಗಿದ್ದಾರೆ.

ಮಲ್ಲುಂಡಿ, ಜು.29– ನಂಜನಗೂಡು ತಾಲೂಕಿನ ನೆಲ್ಲಿತಾಳಪುರ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆಯಾಗಿ ಶಶಿಕಲಾ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷ ನಂಜುಂಡಸ್ವಾಮಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಶಶಿಕಲಾ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕೃಷ್ಣ ಘೋಷಿಸಿದರು. ಈ ವೇಳೆ ಗ್ರಾಪಂ ಸದಸ್ಯರಾದ ದೇವಮ್ಮ, ಪ್ರೇಮ, ಮಂಗಳಮ್ಮ, ಜಯಲಕ್ಷ್ಮಿ, ನಂದಿನಿ, ವಿಜಯಲಕ್ಷ್ಮಿ, ಶಿವಮಲ್ಲು, ನಾಗೇಗೌಡ, ರವಿ, ರಾಜೇಂದ್ರ ನಾಗೇಂದ್ರ, ಮುಖಂಡರುಗಳಾದ ಸಿ.ಎಂ. ನಾಗಣ್ಣ, ಜಯರಾಮ್, ಮಹದೇವಪ್ಪ, ಮಹದೇವ್, ಕೆ.ಪಿ.ಸೋಮಸುಂದರ್, ಸಿದ್ದರಾಜು, ವೀರಭದ್ರಪ್ಪ, ರಾಜಣ್ಣ, ಸುಭಾಷ್, ಮಹದೇವಪ್ಪ, ಪಿಡಿಓ ಶ್ವೇತಾ ಸೇರಿದಂತೆ ಇತರರಿದ್ದರು.



ಕಾರ್ಯಕಾರಿಣಿ ಸದಸ್ಯರಾಗಿ ನೇಮಕ

ತಿ.ನರಸೀಪುರ, ಜು.29– ಬಿಜೆಪಿ ಮೈಸೂರು ಜಿಲ್ಲಾ ಗ್ರಾಮಾಂತರ ಕಾರ್ಯಕಾರಿಣಿ ಸದಸ್ಯರಾಗಿ ಪ್ರಕಾಶ್ ವರಕೂಡು ಅವರನ್ನು ನೇಮಕ ಮಾಡಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಆದೇಶ ಹೊರಡಿಸಿದ್ದಾರೆ.

ಬನ್ನೂರು ಸಮಗ್ರ ಅಭಿವೃದ್ಧಿಗೆ 22 ಕೋಟಿ ಕ್ರಿಯಾಯೋಜನೆ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ಮಹಿಳೆಯರಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೊಲಿಗೆ ಯಂತ್ರಗಳನ್ನು ವಿತರಿಸಿದರು.

ತಿ.ನರಸೀಪುರ, ಜು.29– ಬನ್ನೂರು ಸಮಗ್ರ ಅಭಿವೃದ್ಧಿಗೆ 22 ಕೋಟಿ ರೂ.ಗಳ ಕ್ರಿಯಾಯೋಜನೆ ರೂಪಿಸಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ತಾಲೂಕಿನ ಬನ್ನೂರು ಪುರಸಭೆ ಆವರಣದಲ್ಲಿ ಪೌರ ಕಾರ್ಮಿಕರ ವಿಶ್ರಾಂತಿ ಗೃಹ ನಿರ್ಮಾಣಕ್ಕೆ ಭೂಮಿಪೂಜೆ ಸಲ್ಲಿಸಿ ಮನೆ ಮನೆ ಕಸ ಸಂಗ್ರಹಿಸುವ ಮಿನಿ ಟಿಪ್ಪರ್‌ಗಳಿಗೆ ಚಾಲನೆ ನೀಡಿ, 2022–23ನೇ ಸಾಲಿನ ಶೇ.24.10, ಶೇ.7.25ರ ಎಸ್‌ಎಫ್‌ಸಿ ಹಾಗೂ ಪುರಸಭಾ ನಿಧಿಯಿಂದ ಪ.ಜಾತಿ/ಪ.ಪಂಗಡದ ಬಿಇ/ ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಹಾಗೂ ಇತರೆ ಹಿಂದುಳಿದ ವರ್ಗದ ಮಹಿಳೆಯರಿಗೆ ಹೊಲಿಗೆ ಯಂತ್ರ ಹಾಗೂ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಂ ಸಮುದಾಯ ಭವನಗಳಿಗೆ ಶಾಮಿಯಾನ, ಜಮಖಾನ ಸವಲತ್ತುಗಳ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮೊದಲ ಹಂತದಲ್ಲಿ 11 ಕೋಟಿ, 2ನೇ ಹಂತದಲ್ಲಿ 10 ಕೋಟಿ ಹಾಗೂ 3ನೇ ಯೋಜನೆಗೆ 50 ಲಕ್ಷ ರೂ.ಗಳ ಅನುದಾನಕ್ಕೆ ಬನ್ನೂರು ಪುರಸಭೆಯಿಂದ ಪ್ರಸ್ತಾವನೆ ಸಲ್ಲಿಸಿದ್ದು, 4 ವರ್ಷಗಳ ಅವಧಿಯಲ್ಲಿ ಸರ್ಕಾರದಿಂದ ಹಣ ಮಂಜೂರು ಮಾಡಲಾಗುವುದು. 100 ಕೋಟಿ ರೂ. ವೆಚ್ಚದ ತುರುಗನೂರು ಏತ ನೀರಾವರಿ ಯೋಜನೆಗೂ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು ಭರವಸೆ ನೀಡಿದರು.

ಮಹಿಳೆಯರು ನಗರ ಮತ್ತು ಗ್ರಾಮೀಣ ಬಡತನ ನಿರ್ಮೂಲನೆ ಕಾರ್ಯಕ್ರಮದ ನೆರವು ಪಡೆದು ಸ್ವಾವಲಂಬಿ ಜೀವನ ನಡೆಸಬೇಕು. ಆ ನಿಟ್ಟಿನಲ್ಲಿ ಪುರಸಭೆಯಿಂದ 30 ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ವಿತರಿಸಲಾಗಿದೆ. ಸ್ವಚ್ಛತೆಗೆ ಹಗಲಿರುಳು ದುಡಿಯುವ ಪೌರ ಕಾರ್ಮಿಕರಿಗೂ ವಿಶ್ರಾಂತಿ ಗೃಹ ಕಲ್ಪಿಸಲಾಗುತ್ತಿದ್ದು, ಮನೆಗಳ ಬಳಿ ಕಸ ಸಂಗ್ರಹಿಸಲು ಬರುವ ಹೊಸ ಮಿನಿ ಟಿಪ್ಪರ್‌ಗಳನ್ನು ಪಟ್ಟಣದ ಜನತೆ ಬಳಸಿಕೊಳ್ಳಬೇಕು. ಡೆಂಗ್ಯೂ ಹರಡುದಂತೆ ನೈರ್ಮಲ್ಯ ಕಾಪಾಡಿಕೊಳ್ಳಬೇಕು ಎಂದರು.

ಸಿಎಂ ಸಿದ್ದರಾಮಯ್ಯ ಪ್ರಾಮಾಣಿಕ ರಾಜಕಾರಣಿ. ಅವರ ಮೇಲೆ ಭ್ರಷ್ಟಾಚಾರ ಆರೋಪ ಮಾಡುತ್ತಿರುವ ವಿಪಕ್ಷಗಳು ರಾಜ್ಯದ ಸಮಸ್ಯೆಗಳ ಚರ್ಚೆ ಮತ್ತು ಅಭಿವೃದ್ಧಿಗೆ ವೇದಿಕೆಯಾಗಬೇಕಿದ್ದ ಅಧಿವೇಶನವನ್ನು ಹಾಳು ಮಾಡಿದವು ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯಲ್ಲಿ 1,88,706 ಮತಗಳ ಅಂತರದಲ್ಲಿ ಸುನೀಲ್ ಬೋಸ್‌ಗೆ ಐತಿಹಾಸಿಕ ಗೆಲುವು ನೀಡುವುದರಿಂದ 8 ಕ್ಷೇತ್ರಗಳಲ್ಲಿ ಮೈಯೆಲ್ಲ ಕಣ್ಣಾಗಿ ಕೆಲಸ ಮಾಡಬೇಕು. ಕ್ಷೇತ್ರ ಉಳಿಸಿಕೊಳ್ಳುವುದು ಅಥವಾ ಬಿಡುವುದು ಅವನ ಕೆಲಸ ಕಾರ್ಯಗಳಲ್ಲಿಯೇ ಅವಲಂಬಿತವಾಗಿದೆ ಎಂದು ಪುತ್ರನಿಗೆ ಸಚಿವ ಮಹದೇವಪ್ಪ ಸಲಹೆ ನೀಡಿದರು.

ಸಂಸದ ಸುನೀಲ್ ಬೋಸ್ ಮಾತನಾಡಿದರು. ಈ ವೇಳೆ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ, ಪುರಸಭೆ ಮುಖ್ಯಾಧಿಕಾರಿ ಆರ್.ಹೇಮಂತ್ ರಾಜ್, ಮಾಜಿ ಅಧ್ಯಕ್ಷ ಮುನಾವರ್ ಪಾಷ, ಭಾಗ್ಯ ಕೃಷ್ಣ, ಮಾಜಿ ಉಪಾಧ್ಯಕ್ಷ ಬಿ.ಎಸ್.ರಾಮಲಿಂಗೇಗೌಡ, ತಿ.ನರಸೀಪುರ ಪುರಸಭಾ ಸದಸ್ಯ ತುಂಬಲ ಪ್ರಕಾಶ್, ಸದಸ್ಯರಾದ ಲೋಕಂಬಿಕ, ಶಿವಣ್ಣ, ಮೈಮುಲ್ ನಿರ್ದೇಶಕ ಆರ್.ಚಲುವರಾಜು, ಪೀಕಾರ್ಡ್ ಬ್ಯಾಂಕ್ ನಿರ್ದೇಶಕ ಕೆ.ವಜ್ರೇಗೌಡ, ಪ್ರಥಮ ದರ್ಜೆ ಗುತ್ತಿಗೆದಾರ ಕೆ.ಎಂ.ಮಧುಕುಮಾರ್, ಕಾಂಗ್ರೆಸ್ ಯುವ ಮುಖಂಡ ಲಕ್ಷ್ಮಿನಾರಾಯಣ, ಸಹಾಯಕ ಪ್ರಾಧ್ಯಾಪಕ ಡಾ.ಬಿ.ಕೆ. ಜ್ಞಾನಪ್ರಕಾಶ್, ವಕೀಲ ಶಿವಮೂರ್ತಿ, ಸಚಿವರ ವಿಶೇಷ ಕರ್ತವ್ಯಾಧಿಕಾರಿ ಎನ್.ರವಿ ಕುಮಾರ್, ಜಿಪಂ ಮಾಜಿ ಸದಸ್ಯ ಮಂಜುನಾಥನ್, ಕೆಪಿಸಿಸಿ ಸದಸ್ಯ ಎಂ.ಮಲ್ಲಿಕಾರ್ಜುನಸ್ವಾಮಿ, ಸೋಸಲೆ ಪಿಎಸಿಎಸ್ ಅಧ್ಯಕ್ಷ ಎಂ.ಪರಶಿವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ಚನ್ನಕೇಶವ, ಹಿಂ.ವರ್ಗಗಳ ಅಧ್ಯಕ್ಷ ಎ.ಎನ್.ಸ್ವಾಮಿ, ಮಹಿಳಾ ಅಧ್ಯಕ್ಷೆ ವೀಣಾ, ಗುತ್ತಿಗೆದಾರ ಉಮೇಶ್, ಮುಖಂಡರಾದ ಸತೀಶ್ ನಾಯಕ, ಶಿವಣ್ಣ, ಸಿ.ಎಂ. ಶಶಿಭೂಷಣ್, ಪೀರ್ ಖಾನ್, ಸಯ್ಯದ್ ಯಾಹಿಯಾ, ನರಸಿಂಹಮಾದನಾಯಕ ಇನ್ನಿತರರಿದ್ದರು.

ಮೈಸೂರು–ಮಳವಳ್ಳಿ ಚತುಷ್ಪಥ ರಸ್ತೆ

> ಕೆಸಿಎಫ್ ಯೋಜನೆಯಡಿ ಮಳವಳ್ಳಿ–ಬನ್ನೂರು–ಮೈಸೂರು–ಮಾನಂದವಾಡಿ ಮುಖ್ಯರಸ್ತೆಯನ್ನು ಚತುಷ್ಪಥ ರಸ್ತೆಯಾಗಿ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ. ಕಳೆದ 2019ರಿಂದ 2023 ವರೆಗೆ ನರಸೀಪುರ ನಿರೀಕ್ಷಿತ ಅಭಿವೃದ್ಧಿ ಕಂಡಿಲ್ಲ. ಈಗ ಕ್ಷೇತ್ರದ ಅಭಿವೃದ್ಧಿಗೆ 100 ಕೋಟಿ ಹಣ ಮಂಜೂರಾಗಿದೆ.
>
> -ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ.

ನಾಳೆ ಸೇವಾ ಕಾರ್ಯಗಳೊಂದಿಗೆ ಧ್ರುವನಾರಾಯಣ್ ಹುಟ್ಟುಹಬ್ಬ



ಸರಗೂರಿನ ಪ್ರವಾಸಿ ಮಂದಿರದಲ್ಲಿ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಪೂರ್ವಭಾವಿ ಸಭೆ ನಡೆಯಿತು.

ಸರಗೂರು, ಜು.29– ಪಟ್ಟಣದಲ್ಲಿ ಸೇವಾ ಕಾರ್ಯಗಳೊಂದಿಗೆ ಜು.31ರಂದು ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಹುಟ್ಟುಹಬ್ಬವನ್ನು ಆಚರಿಸಲಾಗುವುದು ಎಂದು ತಾಲೂಕು ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಬೀರ್ವಾಳ್ ಚಿಕ್ಕಣ್ಣ ತಿಳಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಮಾಜಿ ಸಂಸದ ದಿ.ಆರ್. ಧ್ರುವ ನಾರಾಯಣ್ ಹುಟ್ಟುಹಬ್ಬ ಆಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಮಾಜದ ಏಳಿಗೆಗೆ ಸದಾ ಶ್ರಮಿಸುತ್ತಿದ್ದ ಧ್ರುವನಾರಾಯಣ್ ಅವರು ತಾಲೂಕಿನ ಅಭಿವೃದ್ಧಿಗೂ ಕೊಡುಗೆ ನೀಡಿದ್ದಾರೆ. ಅವರು ಕೈಗೊಂಡ ಅಭಿವೃದ್ಧಿ ಕಾರ್ಯಗಳು ಇಂದಿಗೂ ಜನಮಾನಸದಲ್ಲಿದ್ದು, ಸರಗೂರು ತಾಲೂಕು ಕೇಂದ್ರವಾಗಲು ಅವರ ಕೊಡುಗೆ ಅಪಾರ ಎಂದರು.

ಧ್ರುವನಾರಾಯಣ್ ಹುಟ್ಟುಹಬ್ಬ ಅಂಗವಾಗಿ ಅಂದು ವಿವಿಧೆಡೆ ಗಿಡ ನಡುವ ಕಾರ್ಯ ಹಮ್ಮಿಕೊಳ್ಳಲಾಗಿದೆ. ಅಲ್ಲದೇ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು, ಬ್ರೆಡ್ ವಿತರಣೆ ಮತ್ತು ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಣೆ ಸೇರಿದಂತೆ ಇನ್ನಿತರ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದರು. ಆರ್.ಧ್ರುವನಾರಾಯಣ್ ಅಭಿಮಾನಿ ಬಳಗದ ಗೌರವಾಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಉಪಾಧ್ಯಕ್ಷ ಸುಭಾನ್, ಬಸವರಾಜು, ಪಪಂ ಸದಸ್ಯ ಶ್ರೀನಿವಾಸ್, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಶಿವಶಂಕರನ್, ಗ್ರಾಮೀಣ ಮಹೇಶ್, ಬೆಟ್ಟಸ್ವಾಮಿ, ಚಿನ್ನಸ್ವಾಮಿ, ಮೂರ್ತಿ ಇನ್ನಿತರಿದ್ದರು.

ಪ್ಲಾಸ್ಟಿಕ್ ಬಳಕೆ ತಗ್ಗಿಸಲು ವಿನೂತನ ವ್ಯವಸ್ಥೆ ಅನುಷ್ಠಾನಕ್ಕೆ ಪಾಲಿಕೆ ಸಿದ್ಧತೆ

ಮೈಸೂರಿಗೆ ಬರಲಿವೆ ಪ್ಲಾಸ್ಟಿಕ್ ಪೆಟ್ ಬಾಟಲ್ ಮರುಬಳಕೆ, ಬಟ್ಟೆ ಬ್ಯಾಗ್ ಪಡೆಯುವ ಪ್ರತ್ಯೇಕ ಯಂತ್ರ



ಪ್ಲಾಸ್ಟಿಕ್ ಪೆಟ್ ಬಾಟಲ್ ಮರುಬಳಕೆ ಯಂತ್ರ

ನಗರದ ವಿವಿಧೆಡೆ ಸದ್ಯದಲ್ಲೇ ಯಂತ್ರಗಳ ಅಳವಡಿಕೆ



ಬಟ್ಟೆ ಬ್ಯಾಗ್ ಯಂತ್ರ

ಮೈಸೂರು,ಜು.29(ಪಿಎಂ)– ನಗರದಲ್ಲಿ ಪ್ಲಾಸ್ಟಿಕ್ ಬಳಕೆ ತಗ್ಗಿಸಲು ವಿನೂತನ ವ್ಯವಸ್ಥೆಯೊಂದನ್ನು ಅಳವಡಿಸಿಕೊಳ್ಳಲು ಮೈಸೂರು ಮಹಾನಗರ ಪಾಲಿಕೆ ಮುಂದಾಗಿದೆ. ಪ್ಲಾಸ್ಟಿಕ್ ಇಂದು ನಮ್ಮ ಜೀವನದ ಅವಿಭಾಜ್ಯ ಅಂಗವಾಗಿ ಪರಿಣಮಿಸಿದೆ. ಆದರೆ ಅದರ ಬಳಕೆಯಿಂದ ಉಂಟಾಗುವ ದುಷ್ಪರಿಣಾಮ ಹೇಳತೀರದು.

ಹೀಗಾಗಿಯೇ ಅದರ ಬಳಕೆ ತಗ್ಗಿಸಲು ಪರ್ಯಾಯಗಳತ್ತ ನಾನಾ ಕಸರತ್ತು ಜಗತ್ತಿನೆಲ್ಲೆಡೆ ನಡೆಯುತ್ತಲೇ ಇದೆ. ಅಂತೆಯೇ ಮೈಸೂರು ನಗರದಲ್ಲಿ ಪ್ಲಾಸ್ಟಿಕ್ ಬಳಕೆ ತಗ್ಗಿಸಲು ಮೈಸೂರು ಮಹಾನಗರ ಪಾಲಿಕೆ, ಹೊಸ ಯೋಜನೆಯೊಂದರ ಅನುಷ್ಠಾನಕ್ಕೆ ಸಿದ್ಧತೆ ನಡೆಸಿದೆ. 'ಪ್ಲಾಸ್ಟಿಕ್ ಪೆಟ್ ಬಾಟಲ್ ಮರುಬಳಕೆ ಯಂತ್ರ' ಹಾಗೂ 'ಬಟ್ಟೆ ಬ್ಯಾಗ್ ಯಂತ್ರ'ವೇ ಪ್ಲಾಸ್ಟಿಕ್ ನಿಯಂತ್ರಿಸಲು ನಗರಪಾಲಿಕೆ ಕಂಡುಕೊಂಡಿರುವ ಪರ್ಯಾಯ ವ್ಯವಸ್ಥೆಯಾಗಿದೆ.

ಈ ಯಂತ್ರಗಳನ್ನು ನಗರದ ಆಯ್ದ ಜನನಿಬಿಡ ಸ್ಥಳಗಳಲ್ಲಿ ಇರಿಸುವ ಮೂಲಕ ನಾಗರಿಕರು ಪ್ಲಾಸ್ಟಿಕ್ ನಿಯಂತ್ರಣದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತಿದೆ. ಆ ಮೂಲಕ ಇಲ್ಲಿ ಉತ್ಪತ್ತಿಯಾಗುವ ಪ್ಲಾಸ್ಟಿಕ್ ತ್ಯಾಜ್ಯಕ್ಕೆ ತಡೆಯೊಡ್ಡುವ ಯೋಜನೆ ಇದಾಗಿದೆ. ಪ್ಲಾಸ್ಟಿಕ್ ತ್ಯಾಜ್ಯವನ್ನು ಮೂಲದಲ್ಲೇ ಮರು ಬಳಕೆಗೆ ದೊರೆಯುವಂತೆ ಮಾಡಿ, ಅವು ಭೂಮಿಯಲ್ಲಿ ಸೇರಿ ದುಷ್ಪರಿಣಾಮ ಉಂಟು ಮಾಡುವುದನ್ನು ತಡೆಯಲು ಪ್ಲಾಸ್ಟಿಕ್ ಪೆಟ್ ಬಾಟಲ್ ಮರುಬಳಕೆ ಯಂತ್ರ ಸಹಕಾರಿಯಾಗಲಿದೆ. ಇನ್ನು ಬಟ್ಟೆ ಬ್ಯಾಗ್ ಯಂತ್ರವು ಪ್ಲಾಸ್ಟಿಕ್ ಕವರ್ ಬಳಕೆಗೆ ಪರ್ಯಾಯವಾಗಿ ಬಟ್ಟೆಯಲ್ಲಿ ಸಿದ್ಧಪಡಿಸಿದ ಬ್ಯಾಗ್ ಅನ್ನು ನಮ್ಮ ಅಂಗೈಗೆ ಇರಿಸಲಿದೆ.

ಹಳೆ ಬಾಟಲಿಗೆ 1 ರೂ.: ಪ್ಲಾಸ್ಟಿಕ್ ಪೆಟ್ (ಪಾಲಿಥಿಲೀನ್ ಟೆರೆಫ್ತಾಲೇಟ್ ಅನ್ನು ಸೂಚಿಸುವ ಸಂಕ್ಷಿಪ್ತ ರೂಪ) ಬಾಟಲ್ ಮರುಬಳಕೆ ಯಂತ್ರಕ್ಕೆ ಕುಡಿಯುವ ನೀರಿನ ಬಾಟಲಿ, ಜ್ಯೂಸ್ ಬಾಟಲಿ ಸೇರಿದಂತೆ ಪೆಟ್ ಪ್ಲಾಸ್ಟಿಕ್ ಅಂಶ ಹೊಂದಿರುವ ಬಾಟಲಿಗಳನ್ನು ಹಾಕಬಹುದು. ಇದರಿಂದ ಅವುಗಳನ್ನು ಮರು ಬಳಕೆಗೆ ಯಂತ್ರವು ಸಜ್ಜುಗೊಳಿಸಲಿದೆ. ಮೊದಲಿಗೆ ಬಾಟಲಿಯ ಪದರಗಳನ್ನು ನಜ್ಜುಗುಜ್ಜು ಮಾಡಿ, ಸ್ವಚ್ಛಗೊಳಿಸುತ್ತದೆ. ನಂತರ ಲೇಬಲ್‌ಗಳನ್ನು ಸಂಪೂರ್ಣವಾಗಿ ತೆಗೆದುಹಾಕಿ, ಪಿಇಟಿ ಪದರಗಳನ್ನು ಒಣಗಿಸುತ್ತದೆ. ಬಾಟಲಿಗಳ ಮುಚ್ಚಳಗಳನ್ನು ತೆಗೆದು, ಅಂತಿಮವಾಗಿ ಪದರಗಳನ್ನು ಸಂಗ್ರಹಿಸುತ್ತದೆ. ಈ ಯಂತ್ರಕ್ಕೆ ತಲಾ ಒಂದು ಲೀಟರ್‌ನ ಎರಡು ಬಾಟಲಿ ಹಾಕಿ ಒಂದು ರೂಪಾಯಿ ನಾಣ್ಯ ಪಡೆಯಬಹುದು.

ಬಟ್ಟೆ ಬ್ಯಾಗ್ ಯಂತ್ರ: ಪ್ಲಾಸ್ಟಿಕ್ ಬಾಟಲಿಗಳನ್ನು ಮರು ಬಳಕೆಗೆ ಸಜ್ಜುಗೊಳಿಸುವ ಯಂತ್ರದ ಜೊತೆಗೆ ಬಟ್ಟೆ ಬ್ಯಾಗ್ ವಿತರಿಸುವ ಯಂತ್ರವನ್ನು ಜನನಿಬಿಡ ಪ್ರದೇಶದಲ್ಲಿ ನಗರಪಾಲಿಕೆಯಿಂದ ಅಳವಡಿಸಲಾಗುತ್ತಿದೆ. ಆ ಮೂಲಕ ಪ್ಲಾಸ್ಟಿಕ್ ಕವರ್ ಬಳಕೆಗೆ ಕಡಿವಾಣ ಹಾಕಲು ಮುಂದಾಗಲಾಗಿದೆ. ಈ ಕ್ರಮದಿಂದ ಜನನಿಬಿಡ ಪ್ರದೇಶದಲ್ಲಿ ಉತ್ಪತ್ತಿಯಾಗುವ ಏಕಬಳಕೆ ಪ್ಲಾಸ್ಟಿಕ್ ಚೀಲದ ತ್ಯಾಜ್ಯ ಉತ್ಪಾದನೆಗೆ ತಡೆ ಬೀಳಲಿದೆ. ಯುಪಿಐ, ಗೂಗಲ್ ಪೇ, ಫೋನ್ ಪೇ ಮೂಲಕ 10 ರೂ. ಅನ್ನು ಕ್ಯೂಆರ್ ಕೋಡ್ ಮೇಲೆ ಸ್ಕ್ಯಾನ್ ಮಾಡಿ ಪಾವತಿಸಿದರೆ, ಒಂದು ಬಟ್ಟೆ ಬ್ಯಾಗ್ ಅನ್ನು ಈ ಯಂತ್ರ ನೀಡಲಿದೆ. ಇಲ್ಲವಾದರೆ, 10 ರೂ.ನ ಒಂದು ನಾಣ್ಯ ಸಹ ಹಾಕಬಹುದು. ಇಲ್ಲವೇ ಐದು ರೂ.ನ ಎರಡು ನಾಣ್ಯ ಸಹ ಹಾಕಲು ಅವಕಾಶವಿದೆ.

> “ಈ ಎರಡು ಬಗೆಯ ಯಂತ್ರಗಳು ಪ್ಲಾಸ್ಟಿಕ್ ಬಳಕೆ ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿವೆ. ಆ ಮೂಲಕ ನಾಗರಿಕರಿಗೆ ಪ್ಲಾಸ್ಟಿಕ್ ಪರ್ಯಾಯ ಮಾರ್ಗೋಪಾಯ ನೀಡಲಿವೆ. ಈ ರೀತಿಯ ಯಂತ್ರಗಳ ಕಂಪನಿಯೊಂದರ ಪ್ರತಿನಿಧಿಗಳು ಪ್ರಾಯೋಗಿಕವಾಗಿ ಅವುಗಳ ಕಾರ್ಯವಿಧಾನವನ್ನು ತೋರಿಸಿದ್ದಾರೆ. ನಗರದ ಜನನಿಬಿಡ ಸ್ಥಳಗಳಲ್ಲಿ ಈ ಯಂತ್ರಗಳನ್ನು ಅಳವಡಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡಿದ್ದೇವೆ. ಇದಕ್ಕೆ ಜಿಲ್ಲಾಧಿಕಾರಿಗಳು ಅನುಮೋದನೆ ನೀಡಿದ ಕೂಡಲೇ ಟೆಂಡರ್ ಕರೆದು, ಶೀಘ್ರದಲ್ಲಿ ಅನುಷ್ಠಾನಗೊಳಿಸಲಾಗುವುದು. ಮೈಸೂರಿನ ದೇವರಾಜ ಅರಸು ರಸ್ತೆ, ದೇವರಾಜ ಮಾರುಕಟ್ಟೆ, ಸಬ್‌ಅರ್ಬನ್ ಬಸ್ ನಿಲ್ದಾಣ, ಮೈಸೂರು ಅರಮನೆ ಸೇರಿದಂತೆ 9 ಸ್ಥಳಗಳಲ್ಲಿ ಈ ಎರಡು ರೀತಿಯ ಯಂತ್ರಗಳು ಬರಲಿವೆ.
>
> 
>
> **–ಆಶಾದ್ ಉರ್ ರೆಹಮಾನ್ ಷರೀಫ್, ಆಯುಕ್ತರು, ಮೈಸೂರು ಮಹಾನಗರಪಾಲಿಕೆ.**

ಗೂಡ್ಸ್ ಆಟೋ ಡಿಕ್ಕಿ: ಬೈಕ್ ಸವಾರ ಸಾವು

ಮೈಸೂರು, ಜು.29(ಎಸ್‌ಬಿಡಿ)– ಗೂಡ್ಸ್ ಆಟೋ ಡಿಕ್ಕಿ ಹೊಡೆದು ಬೈಕ್ ಸವಾರ ಮೃತಪಟ್ಟಿರುವ ಘಟನೆ ಮೈಸೂರು ತಾಲೂಕು ಸಿದ್ದರಾಮನಹುಂಡಿ ರಸ್ತೆಯಲ್ಲಿ ಸೋಮವಾರ ಮಧ್ಯಾಹ್ನ ನಡೆದಿದೆ.

ತಿ.ನರಸೀಪುರ ತಾಲೂಕು ವಾಟಾಳು ಪುರ ಗ್ರಾಮದ ನಿವಾಸಿ ಪ್ರಭುಸ್ವಾಮಿ(56) ಅಪಘಾತದಲ್ಲಿ ಮೃತಪಟ್ಟವರು. ಕಾರ್ಯ ನಿಮಿತ್ತ ಪಿಲ್ಲಹಳ್ಳಿಗೆ ಹೋಗಿದ್ದ ಇವರು ತಮ್ಮ ಬಜಾಜ್ ಪ್ಲಾಟಿನಾ ಬೈಕ್‌ನಲ್ಲಿ ಸಿದ್ದರಾಮನಹುಂಡಿ ರಸ್ತೆ ಮೂಲಕ ಸ್ವಗ್ರಾಮಕ್ಕೆ ಹಿಂದಿರುಗುತ್ತಿದ್ದಾಗ ಹೊಸಹಳ್ಳಿ ಬಳಿ ಹಿಂದಿನಿಂದ ಗೂಡ್ಸ್ ಆಟೋ ಡಿಕ್ಕಿ ಹೊಡೆದಿದೆ. ಪರಿಣಾಮ ನೆಲಕ್ಕುರುಳಿದ ಪ್ರಭುಸ್ವಾಮಿ ತಲೆಗೆ ತೀವ್ರ ಪೆಟ್ಟು ಬಿದ್ದು ಅವರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ವಿಷಯ ತಿಳಿದು ವರುಣ ಠಾಣೆ ಪೊಲೀಸರು ಸ್ಥಳಕ್ಕೆ ದೌಡಾಯಿಸಿ, ಮಹಜರು ನಡೆಸಿದ್ದಾರೆ. ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಘಟನೆ ಸಂಬಂಧ ವರುಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಪ್ರಭುಸ್ವಾಮಿ ದೇಹವನ್ನು ಅವರ ವಾರಸುದಾರರಿಗೆ ಒಪ್ಪಿಸಲಾಯಿತು ಎಂದು ಸಬ್‌ಇನ್ಸ್‌ಪೆಕ್ಟರ್ ಚೇತನ್ ತಿಳಿಸಿದ್ದಾರೆ.

ಬೈಕ್‌ಗೆ ಕಸದ ಲಾರಿ ಡಿಕ್ಕಿ: ಇಬ್ಬರು ಟಿಸಿಎಸ್ ಉದ್ಯೋಗಿಗಳ ಸಾವು

ಬೆಂಗಳೂರು: ಬಿಬಿಎಂಪಿ ತ್ಯಾಜ್ಯ ವಿಲೇವಾರಿ ವಾಹನ ಹಾಗೂ ದ್ವಿಚಕ್ರ ವಾಹನದ ನಡುವೆ ಡಿಕ್ಕಿ ಸಂಭವಿಸಿ, ವಾಹನ ಸವಾರರಿಬ್ಬರು ಸಾವನ್ನಪ್ಪಿರುವ ಘಟನೆ ಬೆಂಗಳೂರಿನ ಕೆ.ಆರ್ ಸರ್ಕಲ್ ಬಳಿ ನಡೆದಿದೆ. ಭಾನುವಾರ ರಾತ್ರಿ 8.45 ಗಂಟೆ ಸುಮಾರಿಗೆ ಅಪಘಾತ ಸಂಭವಿಸಿದೆ. ಮೃತರನ್ನ ಪ್ರಶಾಂತ್ (25), ಬಯ್ಯಣ್ಣಗಿರಿ ಶಿಲ್ಪ ಎಂದು ಗುರುತಿಸಲಾಗಿದೆ. ಬೆಂಗಳೂರಿನ ನಿವಾಸಿಯಾಗಿರುವ ಪ್ರಶಾಂತ್, ಶಿಲ್ಪಾ ಇಬ್ಬರೂ ಸ್ನೇಹಿತರಾಗಿದ್ದು, ಒಂದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರೂ ಮೆಜೆಸ್ಟಿಕ್‌ನಿಂದ ಕೆ.ಆರ್ ಸರ್ಕಲ್ ಮಾರ್ಗವಾಗಿ ಬೈಕ್‌ನಲ್ಲಿ ಬರುತ್ತಿದ್ದರು. ಇದೇ ವೇಳೆ ಸಿಐಡಿ ಸಿಗ್ನಲ್ ಮಾರ್ಗದಿಂದ ಕೆ.ಆರ್ ವೃತ್ತದ ಮಾರ್ಗವಾಗಿ ಬಿಬಿಎಂಪಿ ಕಸದ ಲಾರಿ ವೇಗವಾಗಿ ಬರುತ್ತಿತ್ತು. ತಿರುವಿನ ಮಾರ್ಗದಲ್ಲೂ ವೇಗವಾಗಿ ಬಂದ ಲಾರಿ, ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ.

ಅಲ್ಲದೇ ಬೈಕ್‌ಗೆ ಡಿಕ್ಕಿ ಹೊಡೆದರೂ ಲಾರಿ ನಿಲ್ಲಿಸದೇ ಸುಮಾರು 10 ಮೀಟರ್‌ನಷ್ಟು ದೂರಕ್ಕೆ ಬೈಕ್ ಸವಾರರನ್ನು ಎಳೆದೊಯ್ದಿದೆ. ಅಪಘಾತದ ರಭಸಕ್ಕೆ ಕೆಳಗೆ ಬಿದ್ದ ಇವರ ಮೇಲೆ ಲಾರಿ ಹರಿದಿದೆ. ಲಾರಿ ಚಾಲಕ ಪರಾರಿಯಾಗಿದ್ದಾನೆ. ತೀವ್ರ ಗಾಯಗೊಂಡ ಯುವಕ–ಯುವತಿಯನ್ನು ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ.

ಮಿಷನ್ ಆಸ್ಪತ್ರೆ ಸಿಬ್ಬಂದಿ ಮುಷ್ಕರದಲ್ಲಿ ಫೆನಾಯಿಲ್ ಸೇವಿಸಿ ಇಬ್ಬರು ಅಸ್ವಸ್ಥ

ಸದ್ಯ ಪ್ರಾಣಾಪಾಯದಿಂದ ಪಾರು; ಪೊಲೀಸರಿಂದ ಕಾರ್ಮಿಕ ಇಲಾಖೆಗೆ ಪತ್ರ



ಮೈಸೂರಿನ ಮಿಷನ್ ಆಸ್ಪತ್ರೆ ಸಿಬ್ಬಂದಿ ಸೋಮವಾರ 15ನೇ ದಿನದ ಮುಷ್ಕರ ನಡೆಸಿದರು.

ಮೈಸೂರು, ಜು.29(ಎಸ್‌ಬಿಡಿ)– ಮೈಸೂರಿನ ಮಿಷನ್ ಆಸ್ಪತ್ರೆ ಆವರಣದಲ್ಲಿ ಮುಷ್ಕರದ ವೇಳೆ ಇಬ್ಬರು ಫೆನಾಯಿಲ್ ಸೇವಿಸಿ ಅಸ್ವಸ್ಥರಾಗಿದ್ದು, ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಮಂಡಿ ಠಾಣೆ ಪೊಲೀಸರು ಕಾರ್ಮಿಕ ಇಲಾಖೆ ಅಧಿಕಾರಿಗಳಿಗೆ ಪತ್ರ ಬರೆದು ತ್ವರಿತ ಕ್ರಮಕ್ಕೆ ಕೋರಿದ್ದಾರೆ.

ಹಲವು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ 4 ತಿಂಗಳಿಂದ ವೇತನ ನೀಡಿಲ್ಲ. ಇಎಸ್‌ಐ ಹಾಗೂ ಪಿಎಫ್ ಸಂದಾಯ ಮಾಡಿಲ್ಲ. ಇನ್ನಿತರ ಯಾವುದೇ ಸೌಲಭ್ಯ ನೀಡಿಲ್ಲ ಎಂದು ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್(ಮಿಷನ್) ಹಾಸ್ಪಿಟಲ್ ಎಂಪ್ಲಾಯೀಸ್ ಯೂನಿಯನ್ ಸಂಘಟನೆಯಡಿ ಆಸ್ಪತ್ರೆ ನೌಕರರು ಜು.15ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದಾರೆ.

ಸೋಮವಾರ ನೌಕರರಾದ ರಾಜೇಶ್(42) ಹಾಗೂ ಮಂಜುನಾಥ್(52) ಫೆನಾಯಿಲ್ ಸೇವಿಸಿ ಅಸ್ವಸ್ಥಗೊಂಡಿದ್ದು, ಕೂಡಲೇ ಅವರನ್ನು ಕೆಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ಸದ್ಯ ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದು, ರಾಜೇಶ್ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಮಂಜುನಾಥ್ ಅವರನ್ನು ಮಂಗಳವಾರ ಡಿಸ್ಚಾರ್ಜ್ ಮಾಡಲಿರುವುದಾಗಿ ತಿಳಿದುಬಂದಿದೆ.

ಪೊಲೀಸರಿಂದ ಪತ್ರ: ಈ ಘಟನೆಯಿಂದ ಮುಷ್ಕರ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆ ಇರುವುದರಿಂದ ಮಂಡಿ ಠಾಣೆ ಇನ್ಸ್‌ಪೆಕ್ಟರ್, ಸಹಾಯಕ ಕಾರ್ಮಿಕ ಆಯುಕ್ತರಿಗೆ ಪತ್ರ ಬರೆದು ನೌಕರರ ಸಮಸ್ಯೆ ಸಂಬಂಧ ತುರ್ತು ಕ್ರಮಕ್ಕೆ ಕೋರಿದ್ದಾರೆ.





ಫೆನಾಯಿಲ್ ಸೇವಿಸಿ, ಚಿಕಿತ್ಸೆ ಪಡೆಯುತ್ತಿರುವ ಮಂಜುನಾಥ್ ಹಾಗೂ ರಾಜೇಶ್

'ಮಿಷನ್ ಆಸ್ಪತ್ರೆ ನೌಕರರು ವೇತನ ಹಾಗೂ ಪಿಎಫ್ ವಿಚಾರವಾಗಿ ಸಂಘಟನೆ ಮೂಲಕ ಜು.2ರಂದು ಮನವಿ ಪತ್ರ ನೀಡಿ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತಂದಿದ್ದಾರೆ. ಅಲ್ಲದೆ ಸಮಸ್ಯೆ ಬಗೆಹರಿಸದೇ ಇದ್ದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಕೈಗೊಳ್ಳುವುದಾಗಿಯೂ ತಿಳಿಸಿದ್ದಾರೆ. ನಂತರದಲ್ಲಿ ಜು.15ರಿಂದ ಆಸ್ಪತ್ರೆ ಆವರಣದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ. ಇಂದು ಮುಷ್ಕರದ ಸ್ಥಳದಲ್ಲಿ ಇಬ್ಬರು ಫೆನಾಯಿಲ್ ಕುಡಿದು ಅಸ್ವಸ್ಥಗೊಂಡಿದ್ದು ಕೆ.ಆರ್.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನೌಕರರ ಸಮಸ್ಯೆಗಳು ಸಕಾಲದಲ್ಲಿ ಬಗೆಹರಿಯದಿದ್ದಲ್ಲಿ ಮುಂದೆ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ, ಶಾಂತಿ ಭಂಗವಾಗುವ, ಪ್ರಾಣ ಹಾನಿ, ಆಸ್ತಿ–ಪಾಸ್ತಿ ಹಾನಿಯಾಗುವ ಸಾಧ್ಯತೆಗಳು ದಟ್ಟವಾಗಿವೆ. ಆದ್ದರಿಂದ ಸಕ್ಷಮ ಇಲಾಖೆಯಾದ ತಾವು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಪತ್ರದಲ್ಲಿ ತಿಳಿಸಿದ್ದಾರೆ.

ಸುಗಮ ಸಂಗೀತದ ಸುಧೆಗೆ ಭಾವಪರವಶತೆಯಲ್ಲಿ ತೇಲಿದ ಶ್ರೋತೃ ವರ್ಗ



'ಕವಿಯ ನೋಡಿ, ಕವಿತೆ ಕೇಳಿ' ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಗಾಯಕಿ ಹಂಸಿನಿ ಗಾಯನ ಸಾದರಪಡಿಸಿದರು. (ಕುಳಿತವರು ಎಡದಿಂದ) ಕವಿಗಳಾದ ಡಾ.ಜಯಪ್ಪ ಹೊನ್ನಾಳಿ, ಡಾ.ಹೆಚ್.ಎಸ್.ವೆಂಕಟೇಶಮೂರ್ತಿ, ಬಿ.ಆರ್.ಲಕ್ಷ್ಮಣ್‌ರಾವ್ ಚಿತ್ರದಲ್ಲಿದ್ದಾರೆ.

ಸಂಗೀತ ವಿವಿ ಆಡಳಿತದ ವಿರುದ್ಧ ಕಿಡಿ

ಮೈಸೂರು,ಜು.29(ಪಿಎಂ)– ಮೈಸೂರಿನ ಸಂಗೀತ ವಿವಿಯಿಂದ ಶನಿವಾರ ಬೆಂಗಳೂರಿನಲ್ಲಿ ಪರೀಕ್ಷೆ ನಡೆಸಿದ್ದು, ಈ ವೇಳೆ ವಿದ್ಯಾರ್ಥಿಗಳಿಗೆ ಉತ್ತರ ಬರೆಯಲು ಬುಕ್‌ಲೆಟ್ ಸಹ ಕೊಟ್ಟಿಲ್ಲ. ಇದನ್ನು ತೀವ್ರವಾಗಿ ಖಂಡಿಸುವುದಾಗಿ ತಿಳಿಸಿದ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ, ಸುಗಮ ಸಂಗೀತ ಕುರಿತು ಪಠ್ಯ ರಚನೆಗೆ ಕ್ರಮ ವಹಿಸುವಂತೆ ಈ ವಿವಿಗೆ ಪತ್ರ ಬರೆದರೂ ಪ್ರಯೋಜನವಾಗಿಲ್ಲ ಎಂದು ಕಿಡಿಕಾರಿದರು.

ಸಂಗೀತ ವಿವಿಯಿಂದ ನಿನ್ನೆ ಬೆಂಗಳೂರಿನಲ್ಲಿ ಪರೀಕ್ಷೆ ನಡೆದಿದ್ದು, ಮಕ್ಕಳಿಗೆ ಬರೆಯಲು ಹಾಳೆ ಕೂಡ ಒದಗಿಸಿಲ್ಲ. ಇದನ್ನು ತೀವ್ರವಾಗಿ ಖಂಡಿಸುತ್ತೇನೆ. ಸುಗಮ ಸಂಗೀತ ಕುರಿತು ಪಠ್ಯ ರಚನೆ ಹಾಗೂ ಪರಿಷ್ಕರಣೆ ಜವಾಬ್ದಾರಿಯನ್ನು ಒಬ್ಬ ಹಿರಿಯ ಕಲಾವಿದನಾದ ನನಗೆ ಕೊಡಬೇಕೆಂದು ಈ ಸಂಗೀತ ವಿವಿಗೆ ಹಲವು ವರ್ಷಗಳಿಂದ ಪತ್ರ ಮುಖೇನ ಕೋರಿದರೂ ಪ್ರಯೋಜನವಾಗಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು. ಸಂಸ್ಕೃತಿ, ಕಲೆ, ಸಾಹಿತ್ಯ ಬೆಳೆಸುವ ಪರಿಜ್ಞಾನ ಇಂದಿನ ಸರ್ಕಾರಕ್ಕಿಲ್ಲ. ಇದನ್ನು ಸಚಿವರನ್ನು ಒಳಗೊಂಡಂತೆಯೂ ಹೇಳುತ್ತಿದ್ದೇನೆ. ಸಂಘ–ಸಂಸ್ಥೆಗಳಿಗೆ ಅನುದಾನ ಬಿಡುಗಡೆಗೂ ಉದಾಸೀನತೆ ತೋರಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಈವರೆಗೆ ಪರಿಷತ್ತಿನಿಂದ 10 ಸಮ್ಮೇಳನಗಳನ್ನು ಮಾಡಿದ್ದು, 2025ರ ರಾಜ್ಯ ಮಟ್ಟದ ಸಮ್ಮೇಳನವನ್ನು ಮೈಸೂರು ನಗರದಲ್ಲಿ ಆಯೋಜಿಸಲಾಗುವುದು ಎಂದು ಪ್ರಕಟಿಸಿದರು.

ಮೈಸೂರು, ಜು.29(ಪಿಎಂ)– 'ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ... ಎಲ್ಲಾ ಸೇರಿ ನನ್ನ ಬಾಯಿಗೆ ಬೆಣ್ಣೆ ಮೆತ್ತಿದರಮ್ಮ...' 'ಅಮ್ಮ ನಿನ್ನ ಎದೆಯಾಳದಲ್ಲಿ ಗಾಳಕ್ಕೆ ಸಿಕ್ಕ ಮೀನು ಮಿಡುಕಾಡುತಿರುವೆ ನಾನು...' ಹೀಗೆ ನಾನಾ ಕವಿತೆಗಳಲ್ಲಿನ ಭಾವ ಲಹರಿಯ ಸಾಲುಗಳು ಸಂಗೀತದೊಂದಿಗೆ ಗಾಯನವಾಗಿ ಸೂಸುತ್ತಿದ್ದರೆ ಶ್ರೋತೃಗಳು ಭಾವಪರವಶತೆಯಲ್ಲಿ ತೇಲಿದರು.

ಜೊತೆಗೆ ಆಯಾಯ ಕವಿತೆಗಳ ಕರ್ತೃಗಳೂ ಉಪಸ್ಥಿತರಿದ್ದು, ಕವಿತೆ ಮೂಡಿದ ಸನ್ನಿವೇಶ ಮತ್ತು ತಾತ್ಪರ್ಯವನ್ನು ಸಂಕ್ಷಿಪ್ತವಾಗಿ ವಿವರಿಸಿ, ತಮ್ಮ ಕಾವ್ಯದಲ್ಲಿ ಹುದುಗಿರುವ ಭಾವನೆಗಳ ಗುಚ್ಛ ಅನಾವರಣಗೊಳಿಸಿದರು. ಇಂತಹ ವಿನೂತನ ಕಾರ್ಯಕ್ರಮಕ್ಕೆ ಕಿಕ್ಕಿರಿದು ತುಂಬಿದ್ದ ಮೈಸೂರಿನ ವಿದ್ಯಾರಣ್ಯಪುರಂನ ಎಂಬಿಸಿಟಿ ಸಭಾಂಗಣ ಸಾಕ್ಷಿಯಾಯಿತು.

'ಕವಿಯ ನೋಡಿ, ಕವಿತೆ ಕೇಳಿ' ಶೀರ್ಷಿಕೆಯಡಿ ಕರ್ನಾಟಕ ಸುಗಮ ಸಂಗೀತ ಪರಿಷತ್ತು ಮೈಸೂರು ಜಿಲ್ಲಾ ಘಟಕದ ವತಿಯಿಂದ ಹಮ್ಮಿಕೊಂಡಿದ್ದ ಕಾವ್ಯವಾಚನ–ಗೀತಗಾಯನದ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಕವಿಗಳಾದ ಡಾ.ಹೆಚ್.ಎಸ್.ವೆಂಕಟೇಶಮೂರ್ತಿ, ಬಿ.ಆರ್.ಲಕ್ಷ್ಮಣ್‌ರಾವ್ ಹಾಗೂ ಡಾ.ಜಯಪ್ಪ ಹೊನ್ನಾಳಿ ಅವರ ಕವಿತೆಗಳು ಗಾಯಕರ ಕಂಠಸಿರಿಯಲ್ಲಿ ಪ್ರಸ್ತುತಗೊಂಡು ಸಭಿಕರು ಸಂಗೀತದ ಸುಧೆಯಲ್ಲಿ ಮಿಂದೆದ್ದರು.

ಡಾ.ಹೆಚ್.ಎಸ್.ವೆಂಕಟೇಶಮೂರ್ತಿ ಅವರ 'ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ...' ಗೀತೆಯನ್ನು ಗಾಯಕಿ ಹಂಸಿನಿ ಸುಶ್ರಾವ್ಯವಾಗಿ ಸಾದರಪಡಿಸಿ, ಸಭಿಕರಿಂದ ಅಭಿಮಾನದ ಚಪ್ಪಾಳೆ ಗಿಟ್ಟಿಸಿದರು. ಇದಕ್ಕೂ ಮುನ್ನ ಮಾತನಾಡಿದ ಡಾ.ಹೆಚ್.ಎಸ್.ವೆಂಕಟೇಶಮೂರ್ತಿ, ಈ ತುಂಬಿದ ಸಭೆ ಹರ್ಷ ತಂದಿದ್ದು, ಇದು ಸುಗಮ ಸಂಗೀತದ ಮಹತ್ವವನ್ನು ಅನಾವರಣಗೊಳಿಸಿದೆ. ರಂಜನೆಗೆ ಸೀಮಿತವಾಗಿದ್ದ ಸುಗಮ ಸಂಗೀತ ಕಲೆಯಾಗಿ ಪರಿಣಮಿಸಿದೆ ಎಂದು ತಿಳಿಸಿದರು.

ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ ಕವಿತೆ ಬಗ್ಗೆ ವಿವರಿಸಿದ ಅವರು, ದೇವರಾಣೆಯನ್ನು ನಾವು ಇಡುತ್ತೇವೆ. ಆದರೆ ಇಲ್ಲಿ ದೇವರೇ ದೇವರಾಣೆ ಇಡುತ್ತಿರುವುದು ವಿಶೇಷ. ಅಂದರೆ ಇಲ್ಲಿ ಕೃಷ್ಣ ಮಾತನಾಡುತ್ತಿದ್ದಾನೆ. ಆ ಮೂಲಕ ಕೃಷ್ಣನ ಮಾತಿನ ಚಮತ್ಕಾರವು ಇಲ್ಲಿ ಕವಿತೆಯ ಉದ್ದೀಪನಕ್ಕೆ ಕಾರಣವಾಗುವುದು ವಿಶೇಷ. ಇದನ್ನು ರಚಿಸಿ 40 ವರ್ಷಗಳೇ ಕಳೆದಿವೆ ಎಂದು ವಿವರಿಸಿದರು.

ಮತ್ತೆ ಇವರದೇ ಕವಿತೆಯಾದ 'ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ...' ಗೀತೆಯನ್ನು ಗಾಯಕ ನಿತಿನ್‌ರಾಜಾರಾಮ್ ಶಾಸ್ತ್ರಿ ಪ್ರಸ್ತುತಪಡಿಸಿದರು. ಬಳಿಕ ಮಾತನಾಡಿದ ಡಾ.ಹೆಚ್.ಎಸ್.ವೆಂಕಟೇಶಮೂರ್ತಿ, ಕಳೆದೆರಡು ವರ್ಷಗಳ ಹಿಂದೆಯಷ್ಟೇ ಬರೆದ ಈ ಕವಿತೆಯನ್ನು ಯೂಟ್ಯೂಬ್‌ನಲ್ಲಿ 65 ಲಕ್ಷ ಜನತೆ ಕೇಳಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು.

ಬಳಿಕ ಬಿ.ಆರ್.ಲಕ್ಷ್ಮಣ್‌ರಾವ್ ಅವರ 'ಅಮ್ಮ ನಿನ್ನ ಎದೆಯಾಳದಲ್ಲಿ ಗಾಳಕ್ಕೆ ಸಿಕ್ಕ ಮೀನು ಮಿಡುಕಾಡುತಿರುವೆ ನಾನು...' ಗೀತೆಯು ಗಾಯಕಿ ದಿವ್ಯ ಸಚ್ಚಿದಾನಂದ ಅವರ ಕಂಠಸಿರಿಯಲ್ಲಿ ಮೂಡಿಬಂದಿತು. ಇದಕ್ಕೂ ಮುನ್ನ ಮಾತನಾಡಿದ ಲಕ್ಷ್ಮಣ್‌ರಾವ್, ಈ ಗೀತೆಯಲ್ಲಿ ತಾಯಿ ಹಾಗೂ ಭೂತಾಯಿ ಇಬ್ಬರ ಪ್ರಸ್ತಾಪವೂ ಇದೆ. ದೇಶ–ವಿದೇಶದಲ್ಲಿರುವ ಕನ್ನಡಿಗರಿಗೆ ನಾನು ಯಾರೆಂದು ಗೊತ್ತಿಲ್ಲವಾದರೂ ಈ ಹಾಡಿನ ಪರಿಚಯ ಇದೆ. ಈ ಕವಿತೆ ಹಾಗೂ ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ ಕವಿತೆ ಎರಡೂ ಸಹ ಕಮಾಚ್ ರಾಗದಲ್ಲಿರುವುದು ವಿಶೇಷ ಎಂದರು.

ಅಲ್ಲದೆ, ಗಾಯಕರಾದ ಡೇವಿಡ್ ಪ್ರಭಾಂಜಲಿ, ಜೋಗಿ ಸುನೀತ, ಮಂಗಳ ರವಿ, ಎ.ಡಿ.ಶ್ರೀನಿವಾಸ್, ರಾಜೇಶ್ ಪಡಿಯಾರ್, ಅಮೂಲ್ಯ ಸಹ ಗೀತೆಗಳನ್ನು ಸಾದರಪಡಿಸಿದರು. ವಾದ್ಯದಲ್ಲಿ ಪುರುಷೋತ್ತಮ್, ಗಣೇಶ್ ಭಟ್ (ಕೀಬೋರ್ಡ್), ರಘುನಾಥ್ (ತಬಲ), ಗುರುದತ್ತ (ರಿದಂ ಪ್ಯಾಡ್) ಸಹಕಾರ ನೀಡಿದರು. ರೂಪ ಗುರುರಾಜ್ ಕಾರ್ಯಕ್ರಮ ನಿರೂಪಿಸಿದರು.

ಇದಕ್ಕೂ ಮುನ್ನ ಮಾತನಾಡಿದ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ.ನಾಗರಾಜ್ ವಿ.ಬೈರಿ, ಸುಗಮ ಸಂಗೀತವು ದೇಸಿ ಪ್ರಕಾರವಾಗಿದ್ದು, ಇದು ಕನ್ನಡದ ಅಸ್ಮಿತೆ. ಈ ಸಂಗೀತ ಪ್ರಕಾರ ಬೆಳೆಸುವ ನಿಟ್ಟಿನಲ್ಲಿ ಪರಿಷತ್ತು ಕೆಲಸ ಮಾಡುತ್ತಿದೆ. ಯುವ ಜನರಲ್ಲಿ ಇದರ ಬಗ್ಗೆ ಅಭಿರುಚಿ ಮೂಡಿಸಲು ಅನೇಕ ಕಾರ್ಯಕ್ರಮ ಮಾಡಿದ್ದೇವೆ. ಮುಂದಿನ ವರ್ಷದಿಂದ ವಾರ್ಷಿಕವಾಗಿ 4 ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು. ಪರಿಷತ್ ಅಧ್ಯಕ್ಷ ವೈ.ಕೆ.ಮುದ್ದುಕೃಷ್ಣ ಕಾರ್ಯಕ್ರಮ ಉದ್ಘಾಟಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ, ಪರಿಷತ್ತಿನ ಪದಾಧಿಕಾರಿಗಳಾದ ಎನ್.ಬೆಟ್ಟೇಗೌಡ, ನರಸಿಂಹಮೂರ್ತಿ, ರಂಗಕರ್ಮಿ ರಾಜಶೇಖರ ಕದಂಬ ಮತ್ತಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಇಂಡಿಯನ್ 2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕಿಲ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಶಾಸ್ತ್ರಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆಡ್‌ಪೂಲ್ & ವೊಲ್ವೆರಿನ್ (ಇಂ)	4 ಪ್ರದರ್ಶನಗಳು
ಸಂಗಂ	
ಕಾಟನ್‌ಪೇಟೆ ಗೇಟ್ (ಕ)	4 ಪ್ರದರ್ಶನಗಳು
ಲಿಡೋ	
ರಾಜಹುಲಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ನರಬಲಿ (ತೆ)	4 ಪ್ರದರ್ಶನಗಳು
ಪ್ರಭಾ	
ರಕ್ತಾಕ್ಷ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.8ಕ್ಕೆ, ಬೆ.10.40ಕ್ಕೆ, ರಾಯನ್ (ತ): ಮ.1.20ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ರಕ್ತಾಕ್ಷ (ಕ): ಬೆ.10.30ಕ್ಕೆ, ಬ್ಯಾಡ್ ನ್ಯೂಸ್ (ಹಿಂ): ಮ.12.50ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.35ಕ್ಕೆ, ಕಲ್ಕಿ 2898 ಎಡಿ (ಕ): ರಾ.7ಕ್ಕೆ, ಲೆವೆಲ್ ಕ್ರಾಸ್ (ಮ): ಬೆ.10.25ಕ್ಕೆ.
ಸ್ಕ್ರೀನ್ 3	ಬ್ಯಾಡ್ ನ್ಯೂಸ್ (ಹಿಂ): ಬೆ.10.30ಕ್ಕೆ, ಸಂ.4.15ಕ್ಕೆ, ರೂಪಾಂತರ (ಕ): ಮ.1.15ಕ್ಕೆ, ಫ್ಯಾಮಿಲಿ ಡ್ರಾಮಾ (ಕ): ರಾ.7.10ಕ್ಕೆ, ರುದ್ರವೀಣಾ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.35ಕ್ಕೆ, ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.30ಕ್ಕೆ, ಸಂ.4.15ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರೂಪಾಂತರ (ಕ): ಬೆ.10.35ಕ್ಕೆ, ಲವ್ ಲಿ (ಕ): ಮ.1ಕ್ಕೆ, ಕೆಂಡ (ಕ): ಮ.3.50ಕ್ಕೆ, ಫ್ಯಾಮಿಲಿ ಡ್ರಾಮ (ಕ): ಸಂ.6.25ಕ್ಕೆ, ವಿದ್ಯಾರ್ಥಿ ವಿದ್ಯಾರ್ಥಿನಿಯರೆ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.30ಕ್ಕೆ, ರಾ.7ಕ್ಕೆ, ರಾಯನ್ (ತೆ): ಮ.1.15ಕ್ಕೆ, ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಮ.1.25ಕ್ಕೆ, ಸಂ.4ಕ್ಕೆ, ರಾ.9.20ಕ್ಕೆ, ರಾಯನ್ (ತ): ಸಂ.6.30ಕ್ಕೆ.
ಸ್ಕ್ರೀನ್ 4	ರಾಯನ್ (ತ): ಬೆ.10.30ಕ್ಕೆ, ಕಲ್ಕಿ 2898 ಎಡಿ (ಕ): ಮ.1.15ಕ್ಕೆ, ರೂಪಾಂತರ (ಕ): ಸಂ.4.35ಕ್ಕೆ, ರಾ.9ಕ್ಕೆ, ರುದ್ರವೀಣ (ತೆ): ರಾ.7ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ರೈಲಿಗೆ ಸಿಲುಕಿ ಮಹಿಳೆ ಸಾವು

ಮೈಸೂರು.ಜು.29– ಜುಲೈ 28 ರಂದು ಸುಮಾರು 45–50 ವರ್ಷದ ಅಪರಿಚಿತ ಮಹಿಳೆಯು ಹನಕೆರೆ ಮಂಡ್ಯ ರೈಲು ನಿಲ್ದಾಣಗಳ ನಡುವೆ ರೈಲುಗಾಡಿಗೆ ಸಿಕ್ಕಿ ಮೃತಪಟ್ಟಿರುತ್ತಾಳೆ. ಮೃತದೇಹವು ಮಂಡ್ಯ ಮಿಮ್ಸ್ ಆಸ್ಪತ್ರೆಯ ಶವಾಗಾರದಲ್ಲಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತಳಿಗೆ ಸುಮಾರು 40 ರಿಂದ 50 ವರ್ಷ ವಯಸ್ಸಾಗಿದ್ದು, 5 ಅಡಿ ಎತ್ತರ, ಗೋಧಿ ಮೈಬಣ್ಣ, ಸಾಧಾರಣ ಮೈಕಟ್ಟು, ಕೋಲು ಮುಖವನ್ನು ಹೊಂದಿರುತ್ತಾಳೆ. ತಲೆಯಲ್ಲಿ ಸುಮಾರು 25 ಇಂಚು ಉದ್ದದ ಕಪ್ಪು ಮತ್ತು ಬಿಳಿ ಮಿಶ್ರಿತ ಕೂದಲು, ಎಡ ಮತ್ತು ಬಲ ಕೈಗಳ ಮೇಲೆ ರಂಗೋಲಿ ಚಿತ್ರವಿರುವ ಹಸಿರು 4 ಹಚ್ಚೆ ಎಡಮೂಗಿನ ಮೇಲೆ ಮೂಗುತಿ, ಬಲ ಕಿವಿಯಲ್ಲಿ ಹರಳಿನ ಓಲೆ, ಆಕಾಶ ನೀಲಿ ಬಣ್ಣದ ಎಲೆ ಅಡಿಕೆ ಚೀಲ, ಬಲಗಾಲಿನಲ್ಲಿ ಕಪ್ಪುದಾರ, ಎರಡು ಕಾಲಿನಲ್ಲಿ ಕಾಲುಂಗುರ ಹಾಗೂ ಎಡಗೈನ ಉಂಗುರ ಬೆರಳಿನಲ್ಲಿ ಚಿನ್ನದಂತೆ ಹೋಲುವ ಹೃದಯಾಕಾರದ ಉಂಗುರ ಇರುತ್ತದೆ. ಮೃತಪಟ್ಟ ಸಂದರ್ಭದಲ್ಲಿ ಮೃತ ಮಹಿಳೆಯು ಬಿಸ್ಕೆಟ್ ಬಣ್ಣದ ಸೀರೆಯ ಮೇಲೆ ಕೆಂಪು ಮತ್ತು ಗುಲಾಬಿ ಬಣ್ಣದ ಹೂಗಳುಳ್ಳ ಸೀರೆ, ಬಿಳಿ ಬಣ್ಣದ ಲಂಗ, ಕೆಂಪು ಬಣ್ಣದ ಬಿಳಿ ಹೂಗಳುಳ್ಳ ರವಿಕೆಯನ್ನು ಧರಿಸಿರುತ್ತಾಳೆ.

ಮೃತ ಮಹಿಳೆಯ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ: 0821–2516579, 9480802122ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಸೋಮವಾರ	123.80 ಅಡಿ
ಒಳಹರಿವು	57012 ಕ್ಯೂಸೆಕ್
ಹೊರಹರಿವು	33462 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಸೋಮವಾರ	2283.20 ಅಡಿ
ಒಳಹರಿವು	20346 ಕ್ಯೂಸೆಕ್
ಹೊರಹರಿವು	11833 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಸೋಮವಾರ	2855.85 ಅಡಿ
ಒಳಹರಿವು	7613 ಕ್ಯೂಸೆಕ್
ಹೊರಹರಿವು	4279 ಕ್ಯೂಸೆಕ್

ಅರಣ್ಯದ ಬಗ್ಗೆ ಅರಣ್ಯಾಧಿಕಾರಿಗಳಿಗಿಂತ ಆದಿವಾಸಿಗಳಿಗೆ ಹೆಚ್ಚು ಅರಿವಿದೆ

● ಇಲಾಖಾ ಅಧಿಕಾರಿಗಳೇನಿದ್ದರೂ ಸರ್ಕಾರದ ಗೆಸ್ಟ್‌ಹೌಸ್‌ಗಳಲ್ಲಿ ಆರಾಮಾಗಿ ಕಾಲ ಕಳೆಯುತ್ತಾರೆ; ಮಾಜಿ ಸಂಸದ ಪ್ರತಾಪಸಿಂಹ ಬೇಸರ ● ಹುಲಿ ಸಂರಕ್ಷಣೆ ಕುರಿತ 'ಟೈಮ್ಸ್' ಕಿರುಚಿತ್ರ ಪ್ರದರ್ಶನ' ಕಾರ್ಯಕ್ರಮಕ್ಕೆ ಚಾಲನೆ



ವಿಶ್ವ ಹುಲಿ ದಿನಾಚರಣೆ ಅಂಗವಾಗಿ 'ನಮ್ಮ ವೈಲ್ಡ್ ವಂಡರ್ಸ್' ಸಂಸ್ಥೆಯು ಹುಲಿ ಸಂರಕ್ಷಣೆ ಕುರಿತ 'ಟೈಮ್ಸ್' ಕಿರುಚಿತ್ರ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮವನ್ನು ಮಾಜಿ ಸಂಸದ ಪ್ರತಾಪ ಸಿಂಹ ಉದ್ಘಾಟಿಸಿದರು.

"ನಮ್ಮ ಕಿರುಚಿತ್ರದ ಉದ್ದೇಶವೇ ವನ್ಯಜೀವಿಗಳ ಕುರಿತು ಆಸಕ್ತಿ ಮೂಡಿಸುವುದು ಹಾಗೂ ಹುಲಿಯ ಕುರಿತು ಅರಿವು ಮೂಡಿಸುವಂತಹ ಕೆಲಸದ ಜೊತೆಗೆ ವಿಶ್ವ ಹುಲಿ ದಿನಾಚರಣೆ ಅಂಗವಾಗಿ ಜನರಿಗೆ ಚಿತ್ರದ ಮೂಲಕ ಮಾಹಿತಿ ನೀಡಲಾಗಿದೆ.

–ಎಲ್.ವಿನಯ್, ನಿರ್ದೇಶಕ, ಟೈಮ್ ಕಿರುಚಿತ್ರ

ಮೈಸೂರು,ಜು.29(ಎಸ್‌ಪಿಎನ್)– ಅರಣ್ಯದ ಬಗ್ಗೆ ಅಧಿಕಾರಿಗಳಿಗಿಂತ ಆದಿವಾಸಿಗಳೇ ಹುಟ್ಟಿನಿಂದಲೂ ಹೆಚ್ಚು ಪ್ರೀತಿ ಬೆಳೆಸಿಕೊಂಡಿರುತ್ತಾರೆ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ವಿಶ್ವ ಹುಲಿ ದಿನಾಚರಣೆ ಅಂಗವಾಗಿ 'ನಮ್ಮ ವೈಲ್ಡ್ ವಂಡರ್ಸ್' ಸಂಸ್ಥೆಯು ಏರ್ಪಡಿಸಿದ್ದ ಹುಲಿ ಸಂರಕ್ಷಣೆ ಕುರಿತು 'ಟೈಮ್ಸ್' ಕಿರುಚಿತ್ರ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಾನು 2014–2024ರ ವರೆಗೆ ಮೈಸೂರು–ಕೊಡಗು ಸಂಸದನಾಗಿದ್ದೆ. ಈ ವೇಳೆ ದಿಶಾ ಸಭೆಯಲ್ಲಿ ಅಧಿಕಾರಿಗಳು ಕಾಡಂಚಿನಲ್ಲಿ ಸಂಭವಿಸುವ ಮಾನವ ಮತ್ತು ವನ್ಯಜೀವಿಗಳ ಸಂಘರ್ಷದ ಮಾಹಿತಿ ನೀಡುತ್ತಿದ್ದರು. ಇದನ್ನು ತಡೆಗಟ್ಟುವ ವಿಧಾನಗಳ ಬಗ್ಗೆ ಹಲವು ಬಾರಿ ಚರ್ಚೆ ಮಾಡಿದ್ದೇವೆ. ಪ್ರಾಣಿಗಳು ಆಹಾರ ಅರಸಿ ನಾಡಿಗೆ ಬರುವುದನ್ನು ತಡೆಗಟ್ಟುವ ಹೊಣೆ ಅರಣ್ಯಾಧಿಕಾರಿಗಳದ್ದು, ಕಾಡಿನಲ್ಲಿ ಕಾಡುಪ್ರಾಣಿಗಳು ಹತ್ಯೆಯಾಗುತ್ತಿರುವುದು ಬೇಟೆಗಾರರಿಂದ ಎಂದು ಎಲ್ಲರೂ ಭಾವಿಸಿದ್ದಾರೆ. ಆದರೆ, ಇದರಲ್ಲಿ ಅಧಿಕಾರಿಗಳ ಪಾತ್ರದ ಬಗ್ಗೆ ನಿರ್ಲಕ್ಷ್ಯ ಮಾಡುವಂತಿಲ್ಲ ಎಂದರು.

ಕಾಲ ಕಳೆಯುತ್ತಿದ್ದಾರೆ: ಅರಣ್ಯ ಪ್ರದೇಶಗಳಲ್ಲಿ ಪೋಸ್ಟಿಂಗ್ ಆಗುವ ಅಧಿಕಾರಿಗಳು ಸರ್ಕಾರ ನೀಡುವ ಗೆಸ್ಟ್‌ಹೌಸ್‌ಗಳಲ್ಲಿ ಆರಾಮವಾಗಿ ಕಾಲ ಕಳೆಯುತ್ತಾರೆ. ಅರಣ್ಯ ಬೆಳೆಸುವ ಮತ್ತು ಕಾಡುಪ್ರಾಣಿಗಳು ನಾಡಿಗೆ ಹೋಗುವುದನ್ನು ತಪ್ಪಿಸಲು ವೈಜ್ಞಾನಿಕ ಕಾರಣಗಳನ್ನು ಪತ್ತೆಹಚ್ಚುವಲ್ಲಿ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ದೂರಿದರು.

ಆದಿವಾಸಿಗಳಿಗೆ ಹೆಚ್ಚು ತಿಳಿದಿದೆ: ಅರಣ್ಯದ ಬಗ್ಗೆ ಅರಣ್ಯಾಧಿಕಾರಿಗಳಿಗಿಂತ ಆದಿವಾಸಿಗಳಿಗೆ ಹೆಚ್ಚು ತಿಳಿದಿದೆ. ಕಾಡನ್ನು ಸಂರಕ್ಷಣೆ ಮಾಡಲು ಅವರಿಗೆ ಸೂಕ್ತ ತರಬೇತಿ ನೀಡಿ, ಬಳಸಿಕೊಳ್ಳುವಂತೆ ಸಂಬಂಧಪಟ್ಟವರಲ್ಲಿ ಮನವಿ ಮಾಡುತ್ತೇನೆ ಎಂದ ಪ್ರತಾಪ ಸಿಂಹ, ಮೈಸೂರಿನ 43 ಕಿ.ಮೀ ರಿಂಗ್ ರೋಡ್‌ನಲ್ಲಿ 8 ಸಾವಿರಕ್ಕೂ ಹೆಚ್ಚು ಬೇವಿನ ಗಿಡ ಸೇರಿದಂತೆ ಇತರೆ ಗಿಡಗಳನ್ನು ಅಂದಿನ ಅರಣ್ಯಾಧಿಕಾರಿಗಳಾದ ಚನ್ನಬಸಪ್ಪ, ಕರಿಕಾಳನ್ ನೆರವಿನೊಂದಿಗೆ ನೆಟ್ಟಿದ್ದು, ಇಂದು ಬೃಹತ್ ಮರಗಳಾಗಿ ಬೆಳೆದಿವೆ. ಮಳೆಗಾಲದಲ್ಲಿ ಈ ಸೌಂದರ್ಯ ನೋಡುವುದೇ ಚೆಂದ ಎಂದರು.

ನನ್ನಾವಧಿಯಲ್ಲಿ ಪೂರ್ಣಗೊಂಡಿತು: ಮೈಸೂರು ಹೊರವಲಯದ ರಿಂಗ್ ರೋಡ್ ಕಾಮಗಾರಿಗೆ ನರ್ಮ್ ಯೋಜನೆಯಡಿ ಚಾಲನೆ ನೀಡಲಾಗಿತ್ತು. ಆದರೆ, 2014ರಲ್ಲಿ ನಾನು ಸಂಸದನಾಗಿ ಬಂದಾಗ ಈ ಯೋಜನೆ ಅವಧಿ ಮುಗಿದು ಕಾಮಗಾರಿ ಅರ್ಧಕ್ಕೆ ಸ್ಥಗಿತಗೊಂಡಿತ್ತು. ಆಗ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಈ ಯೋಜನೆಯನ್ನು ಮೂರು ವರ್ಷ ಮುಂದುವರೆಸಿ, ರಸ್ತೆ ಕಾಮಗಾರಿ ಪೂರ್ಣಗೊಳಿಸಿದ ಸಂದರ್ಭವನ್ನು ಎಳೆಎಳೆಯಾಗಿ ಬಿಚ್ಚಿಟ್ಟರು.

ಹಸಿರೀಕರಣಕ್ಕೆ ಒತ್ತು ನೀಡಲಿ: ಮಾಜಿ ಸಚಿವ ಎಸ್.ಟಿ.ಸೋಮಶೇಖರ್ ಅವರು, ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಹಸಿರೀಕರಣಗೊಳಿಸಲು ಲಕ್ಷವೃಕ್ಷ ಯೋಜನೆಗೆ ಚಾಲನೆ ನೀಡಲಾಗಿತ್ತು. ಆದರೆ, ಸರ್ಕಾರ ಬದಲಾದ ತಕ್ಷಣ ಆ ಯೋಜನೆ ಅಲ್ಲಿಗೆ ನಿಂತು ಹೋಗಿದೆ. ಮುಂದೆ ರಾಜಕಾರಣದಲ್ಲಿರುವವರು ಮೈಸೂರಿನ ಹಸಿರೀಕರಣದ ಬಗ್ಗೆ ಚಿಂತಿಸುವಂತಾಗಲಿ ಎಂದು ಆಶಿಸಿದರು.

ಬ್ರಿಟಿಷರ ಬಳುವಳಿ ಮುಂದುವರೆದಿದೆ: ಆಹಾರ ಅರಸಿ ಕಾಡಿನಿಂದ ನಾಡಿಗೆ ಬರುವ ಕಾಡಾನೆಗಳನ್ನು ತಡೆಯಲು ಹೆಚ್ಚು ಬಿದಿರುಗಳನ್ನು ಕಾಡಿನಲ್ಲಿ ಬೆಳೆಸಬೇಕು. ಆದರೆ, ಅರಣ್ಯಾಧಿಕಾರಿಗಳು, ಈ ಕಾರ್ಯ ಮಾಡುತ್ತಿಲ್ಲ. ಬದಲಾಗಿ ಹೆಚ್ಚು ತೇಗದ ಮರಗಳನ್ನು ಬೆಳೆಸುತ್ತಿದ್ದಾರೆ. ಇದು ಬ್ರಿಟಿಷರ ಬಳುವಳಿ. ಬ್ರಿಟಿಷರು ತಮಗೆ ಬೇಕಾದ ಮರಗಳನ್ನು ಬೆಳೆಸಲು ನಮ್ಮ ಕಾಡುಗಳಲ್ಲಿದ್ದ ಅಮೂಲ್ಯ ಮರಗಳನ್ನು ಬೆಳೆಸಲು ಪ್ರಾರಂಭಿಸಿದರು. ಈ ಸಂಪ್ರದಾಯವನ್ನು ಇಂದಿಗೂ ನಮ್ಮ ಅಧಿಕಾರಿಗಳು ಮುಂದುವರೆಸಿರುವುದು ಬೇಸರದ ಸಂಗತಿ ಎಂದರು.

'ಟೈಮ್ಸ್' ಕಿರುಚಿತ್ರದ ಮೂಲಕ ಜಾಗೃತಿಯಾಗಲಿ: ಮೈಸೂರು ವಿಭಾಗದಲ್ಲಿ ಹುಲಿ ಸಂರಕ್ಷಣಾ ಪ್ರಾಜೆಕ್ಟ್ ಆರಂಭಿಸಿ, 2023ಕ್ಕೆ 50 ವರ್ಷ ತುಂಬಿದ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಮೈಸೂರಿಗೆ ಆಗಮಿಸಿ, ಆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಹುಲಿ ಹತ್ಯೆ ತಡೆಯಲು 'ನಮ್ಮ ವೈಲ್ಡ್ ವಂಡರ್ಸ್' ಸಂಸ್ಥೆಯಿಂದ ತಯಾರಾಗಿರುವ 'ಟೈಮ್ಸ್' ಕಿರುಚಿತ್ರ ಅದ್ಭುತವಾಗಿ ಮೂಡಿಬಂದಿದೆ ಎಂದು ಚಿತ್ರತಂಡದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ನೃಪತುಂಗ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಸವಿತಾ ಪ. ಮಲ್ಲೇಶ್,ಹಿರಿಯ ವೈದ್ಯ ಡಾ. ಚಂದ್ರಶೇಖರ್, ಗಾಲ್ಫ್ ಕ್ಲಬ್ ಮಾಜಿ ಅಧ್ಯಕ್ಷ ರವಿಶಂಕರ್, ಕಲಾವಿದ ರಾಘವೇಂದ್ರ ಬೂದನೂರು, ವನ್ಯಜೀವಿ ತಜ್ಞ ಸೋಮಶೇಖರ್, ರಂಗವಲ್ಲಿ ಸಂಸ್ಥೆಯ ರಾಜೇಶ್, ರವಿಪ್ರಸಾದ್, ಮಹೇಶ್ ಪ್ರಸಾದ್ ಹಾಗೂ ಟೈಮ್ಸ್ ಕಿರುಚಿತ್ರದ ಕಲಾವಿದರು ಉಪಸ್ಥಿತರಿದ್ದರು. ಕಿರುಚಿತ್ರ ಪ್ರದರ್ಶನದ ನಂತರ ಹಲವರು ಚಿತ್ರತಂಡದೊಂದಿಗೆ ಸಂವಾದ ನಡೆಸಿದರು.

ರಾಮನಗರ ಹೆಸರು ಬದಲಾವಣೆಗೆ ಸಂಘಟನೆಗಳ ವಿರೋಧ

ರಾಜ್ಯಪಾಲರಿಗೆ ಮನವಿ ಸಲ್ಲಿಸಲು ನಿರ್ಧಾರ

ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ರಾಮನಗರ ಜಿಲ್ಲೆಗೆ ಮರುನಾಮಕರಣ ಮಾಡಿದ ವಿಚಾರಕ್ಕೆ ಕನ್ನಡಪರ ಹಾಗೂ ರೈತಸಂಘಟನೆಗಳು ವಿರೋಧ ವ್ಯಕ್ತಪಡಿಸಿವೆ. ಸೋಮವಾರ ಹಲವು ಸಂಘಟನೆಗಳ ಮುಖಂಡರು ಸಭೆ ನಡೆಸಿ ರಾಜ್ಯಪಾಲರಿಗೆ ಮನವಿ ಸಲ್ಲಿಸಲು ನಿರ್ಧಾರ ಮಾಡಿದ್ದಾರೆ. ಮರುನಾಮಕರಣ ಅಂಗೀಕಾರ ಮಾಡದಂತೆ ಮನವಿ ಸಲ್ಲಿಸಿ ಬಳಿಕ ಬೃಹತ್ ಹೋರಾಟ ನಡೆಸಲು ತೀರ್ಮಾನ ಮಾಡಲಾಗಿದೆ ಎಂದು ಮುಖಂಡರು ತಿಳಿಸಿದ್ದಾರೆ.

ಚನ್ನಪಟ್ಟಣ ಉಪಚುನಾವಣೆ ದೃಷ್ಟಿಯಿಂದ ಹೆಸರು ಬದಲಾವಣೆ ಮಾಡಲಾಗುತ್ತಿದೆ. ರಾಜಕೀಯ ದುರುದ್ದೇಶಕ್ಕೆ ಡಿಸಿಎಂ ಡಿಕೆಶಿ ಮರುನಾಮಕರಣ ಮಾಡುತ್ತಿದ್ದಾರೆ. ಹೆಸರು ಬದಲಾವಣೆ ಬಗ್ಗೆ ಯಾವುದೇ ಸಂಘಟನೆಗಳ ಅಭಿಪ್ರಾಯ ಪಡೆದಿಲ್ಲ. ಕೇವಲ ಡಿಸಿಎಂ ಹಾಗೂ ಹಿಂಬಾಲಕರ ಆಸ್ತಿ ಮೌಲ್ಯ ಹೆಚ್ಚಿಸಲು ಈ ನಾಟಕ ಆಡುತ್ತಿದ್ದಾರೆ ಎಂದು ಸಂಘಟನೆಯ ಪ್ರಮುಖರು ಕಿಡಿಕಾರಿದ್ದಾರೆ. ಹೆಸರು ಬದಲಾವಣೆಯಿಂದ ರೈತರಿಗೆ ಯಾವುದೇ ಅನುಕೂಲ ಆಗಲ್ಲ. ರೈತರ ಜಮೀನುಗಳನ್ನು ಕಾರ್ಪೊರೇಟ್ ಸಂಸ್ಥೆಗಳಿಗೆ ಮಾರಾಟ ಮಾಡಲು ಈ ರೀತಿ ಮಾಡುತ್ತಿದ್ದಾರೆ. ಯಾವುದೇ ಕಾರಣಕ್ಕೂ ರಾಮನಗರ ಹೆಸರು ಬದಲಾವಣೆ ಮಾಡಲು ಬಿಡಲ್ಲ. ಮುಂದಿನ ದಿನಗಳಲ್ಲಿ ಬೃಹತ್ ಹೋರಾಟ ಮಾಡುತ್ತೇವೆ ಎಂದು ಸರ್ಕಾರಕ್ಕೆ ಕನ್ನಡಪರ ಹಾಗೂ ರೈತ ಸಂಘಟನೆಗಳು ಎಚ್ಚರಿಕೆ ನೀಡಿವೆ.

ಯಶಸ್ಸು ಗಳಿಸಲು ಜೀವನ ಕೌಶಲ ಅಗತ್ಯ

ವಿಜ್ಞಾನಿ ಡಾ.ಧರ್ಮಪ್ರಸಾದ್ ಅಭಿಮತ



ಮೈಸೂರಿನ ಇಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರೊಸೆಟ್ಟಾ ಬಯೋ ಇನ್ಫರ್ಮ್ಯಾಟಿಕ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಓ ಡಾ.ಎಂ.ಧರ್ಮ ಪ್ರಸಾದ್ ಮಾತನಾಡಿದರು.

ಮೈಸೂರು,ಜು.29(ಪಿಎಂ)– ಬದುಕು ಅಥವಾ ವೃತ್ತಿಜೀವನವೇ ಆಗಲಿ ಯಶಸ್ಸು ಗಳಿಸಲು ಜೀವನ ಕೌಶಲ (ಸಾಫ್ಟ್ ಸ್ಕಿಲ್ಸ್) ಬೆಳೆಸಿಕೊಳ್ಳುವುದು ಅತ್ಯಂತ ಅಗತ್ಯ ಎಂದು ಪ್ರೊಸೆಟ್ಟಾ ಬಯೋ ಇನ್ಫರ್ಮ್ಯಾಟಿಕ್ಸ್ ಪ್ರೈವೇಟ್ ಲಿಮಿಟೆಡ್‌ನ ಸಿಇಓ ಹಾಗೂ ಮುಖ್ಯ ವಿಜ್ಞಾನಿ ಡಾ.ಎಂ.ಧರ್ಮ ಪ್ರಸಾದ್ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್‌ಗಳ ಸಂಸ್ಥೆಯ ಎಸ್‌ಪಿ ಭಟ್ ಸಭಾಂಗಣದಲ್ಲಿ ಸಂಸ್ಥೆ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ದಿ ಮಲ್ಟಿಪ್ಲೈಯರ್ ಎಫೆಕ್ಟ್ ; ಹೌ ಸಾಫ್ಟ್ ಸ್ಕಿಲ್ಸ್ ಅಂಪ್ಲಿಫೈ ಟೆಕ್ನಿಕಲ್ ಸ್ಕಿಲ್ (The multiplier effect: How soft skills amplify technical skill?)' ಕುರಿತು ಅವರು ಮಾತನಾಡಿದರು.

ನಮ್ಮ ಶೈಕ್ಷಣಿಕ ವ್ಯವಸ್ಥೆಯಲ್ಲಿ ಇಂದಿಗೂ ಜೀವನ ಕೌಶಲ (ಸಾಫ್ಟ್ ಸ್ಕಿಲ್ಸ್) ಕಲಿಸುವುದರ ಹಿಂದಿನ ಮಹತ್ವ ಅರಿವಾಗಿಲ್ಲ. ಪ್ರತಿಯೊಬ್ಬರ ಜೀವನದಲ್ಲಿ ಶೇ.90ರಷ್ಟು ಸಮಯವನ್ನು ಜೀವನ ಕೌಶಲ ಅಪೇಕ್ಷಿಸಿದರೆ, ತಾಂತ್ರಿಕ ಕೌಶಲ ಕೇವಲ ಶೇ.10ರಷ್ಟು ಸಮಯವನ್ನು ಅಪೇಕ್ಷಿಸುತ್ತದೆ. ಜೀವನ ಕೌಶಲವೇ ಮಹತ್ವದ ಪಾತ್ರ ವಹಿಸಲಿದ್ದು, ಜೀವನ ಕೌಶಲ ಮುಖ್ಯವೆಂದು ಗೊತ್ತಿದ್ದರೂ ಮಕ್ಕಳು ಹಾಗೂ ವಿದ್ಯಾರ್ಥಿಗಳಿಗೆ ಅದರ ಬಗ್ಗೆ ಹೇಳಿಕೊಡುವುದು ಬಹುತೇಕ ಇಲ್ಲವಾಗಿದೆ. ಇನ್ನಾದರೂ ಇದು ಬದಲಾಗಬೇಕು ಎಂದು ಹೇಳಿದರು.

ವೃತ್ತಿಜೀವನದಲ್ಲಿ ವ್ಯವಸ್ಥಾಪಕ ಸ್ಥಾನ ಅಥವಾ ನಾಯಕತ್ವದ ಸ್ಥಾನ ಅಲಂಕರಿಸಲು ಜೀವನ ಕೌಶಲ ಅಗತ್ಯ. ಇದರಲ್ಲಿ ಸಂವಹನ ಕೌಶಲ ಪ್ರಮುಖವಾಗಲಿದ್ದು, ಮಾತಿನ ಕೌಶಲ ಉತ್ತಮವಾಗಿದ್ದರೆ ನಾಯಕತ್ವದ ಸ್ಥಾನ ದೊರೆಯಲಿದೆ. ರಾಜಕಾರಣ ಸೇರಿದಂತೆ ಯಾವುದೇ ಕ್ಷೇತ್ರವಾದರೂ ಸಂವಹನ ಹಾಗೂ ಭಾಷಣ ಕೌಶಲ ಉತ್ತಮವಾಗಿರಬೇಕು. ಸಂವಹನ ಸಾಮರ್ಥ್ಯ ವೃದ್ಧಿಸಿಕೊಳ್ಳುವುದು ಅಗತ್ಯ. ಮತ್ತೊಬ್ಬರು ಹೇಳುವುದನ್ನು ಸಕ್ರಿಯವಾಗಿ ಆಲಿಸುವುದೂ ಅಷ್ಟೇ ಮುಖ್ಯ ಎಂದರು. ಪರಿಸ್ಥಿತಿಗೆ ಪೂರಕವಾಗಿ ಸ್ಪಷ್ಟ ಹಾಗೂ ಗಟ್ಟಿ ಧ್ವನಿಯಲ್ಲಿ ಮಾತನಾಡುವುದು ಮುಖ್ಯ. ಪ್ರತಿಯೊಬ್ಬರಲ್ಲೂ ಶೇ.38ರಷ್ಟು ಇಂತಹ ಸಂವಹನ ವ್ಯಕ್ತವಾಗುತ್ತದೆ. ಶೇ.52ರಷ್ಟು ನಮ್ಮ ಸಂವಹನವು ದೈಹಿಕ ಹಾವಭಾವದಲ್ಲಿ ಅಭಿವ್ಯಕ್ತಿಗೊಳ್ಳಲಿದೆ. ನಾವಿಂದು ಟ್ವಿಟರ್ ಯುಗದಲ್ಲಿದ್ದು, ಪುಟಗಟ್ಟಲೇ ಬರೆದರೆ ಅದನ್ನು ಬಹುತೇಕ ಮಂದಿ ಓದುವುದಿಲ್ಲ. ಹಾಗಾಗಿ ಮುಖ್ಯಾಂಶಗಳನ್ನು ಸಂಕ್ಷಿಪ್ತವಾಗಿ ಮೊದಲು ಉಲ್ಲೇಖಿಸಬೇಕು. ವಿವರಗಳನ್ನು ನಂತರದಲ್ಲಿ ಹಾಕಬಹುದು. ಆಸಕ್ತಿ ಮೂಡಿಸಲು ಮೊದಲು ಸಂಕ್ಷಿಪ್ತ ಅಂಶ ಉಲ್ಲೇಖಿಸುವುದು ಮುಖ್ಯ ಎಂದು ತಿಳಿಸಿದರು.

ಎಐ ತಂತ್ರಾಂಶ ಹೊಂದಿರುವ ಸ್ಮಾರ್ಟ್ ಫೋನ್‌ಗಳನ್ನು ನಾವಿಂದು ಹೊಂದಿದ್ದು, ಅವುಗಳ ಪ್ರಯೋಜನ ಪಡೆಯಬೇಕು. ಎಐ ತಂತ್ರಾಂಶದ ಪರಿಣಾಮ ಇಂದು ಅಂದವಾದ ಕೈಬರಹ ಪ್ರಾಮುಖ್ಯತೆ ಕಳೆದುಕೊಂಡಿದೆ. ಆಯಾಯ ಕಾಲಕ್ಕೆ ಆವಿಷ್ಕಾರಗೊಳ್ಳುವ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು. ನಾವು ಚಿಕ್ಕವರಿದ್ದಾಗ ಐಕ್ಯೂ (ಬುದ್ಧಿಮತ್ತೆ) ಉತ್ತಮವಾಗಿರಬೇಕು ಎನ್ನುತ್ತಿದ್ದರು. ಆದರೆ ಈಗ ನಾಯಕರಾಗಲು ಹಾಗೂ ಯಾವುದೇ ಸಂಘ ಸಂಸ್ಥೆ ಮುನ್ನಡೆಸುವ ಮುಖ್ಯಸ್ಥರಾಗಲು ಭಾವನಾತ್ಮಕ ಬುದ್ಧಿವಂತಿಕೆಯ ಕೌಶಲದಲ್ಲಿ (ಇಐ) ಉತ್ತಮವಾಗಿರುವುದು ಮುಖ್ಯವಾಗಿದೆ. ಕಂಪ್ಯೂಟರ್ ಹಾಗೂ ತಂತ್ರಜ್ಞಾನ ಬುದ್ಧಿಮತ್ತೆಯ ಕೌಶಲವನ್ನು ನಿರ್ವಹಿಸುತ್ತಿರುವ ಕಾರಣ ನಮಗೆ ಈಗ ಬೇಕಿರುವುದು ಭಾವನಾತ್ಮಕ ಬುದ್ಧಿವಂತಿಕೆಯ ಕೌಶಲವೇ (ಇಐ) ಆಗಿದೆ ಎಂದು ವಿವರಿಸಿದರು.

ಇಂಜಿನಿಯರ್‌ಗಳ ಸಂಸ್ಥೆ ಮೈಸೂರು ಘಟಕದ ಮಾಜಿ ಅಧ್ಯಕ್ಷ ಬಿ.ಎಸ್.ಪ್ರಭಾಕರ್, ಕಾರ್ಯದರ್ಶಿ ಡಾ.ಎಸ್.ಎ.ಮೋಹನ್ ಕೃಷ್ಣ, ಕಾರ್ಯಕಾರಿ ಸಮಿತಿ ಸದಸ್ಯ ಎಂ.ಕೆ.ನಂಜಯ್ಯ ಮತ್ತಿತರರು ಹಾಜರಿದ್ದರು.

ಕೆಸೆಟ್‌ಗೆ ಅರ್ಜಿ ಆಹ್ವಾನ

ಮೈಸೂರು, ಜು.29(ಎಂಕೆ)– ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಕರ್ನಾಟಕ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (ಕೆಸೆಟ್)–2024 ಗೆ ಅರ್ಜಿ ಆಹ್ವಾನಿಸಲಾಗಿದೆ.

ನ.24ರ ಭಾನುವಾರ ಕೆಸೆಟ್ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದ್ದು, ಅರ್ಹ ಅಭ್ಯರ್ಥಿಗಳಿಂದ ಜು.29 ರಿಂದ ಅರ್ಜಿ ಆಹ್ವಾನಿಸಲಾಗಿದೆ. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಆ.22 ಕಡೆಯ ದಿನವಾಗಿದ್ದು, ಅರ್ಜಿ ಶುಲ್ಕ ಪಾವತಿಗೆ ಆ.26ರವರೆಗೆ ಅವಕಾಶ ನೀಡಲಾಗಿದೆ.

41 ವಿಷಯಗಳಲ್ಲಿ ಪರೀಕ್ಷೆ ನಡೆಯಲಿದ್ದು, ಕೆಇಎ ವೆಬ್‌ಸೈಟ್ **http://kea.kar.nic.in** ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಈ ಮೊದಲು ಜು.22 ರಿಂದಲೇ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿತ್ತು. ಆದರೆ ತಾಂತ್ರಿಕ ತೊಂದರೆಯಿಂದ ಜು.29 ರಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆಗೆ ಅವಕಾಶ ನೀಡಲಾಗಿದೆ ಎಂದು ಕೆಇಎ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.